ಶ್ರೀಗುರುರಾಜೋ ವಿಜಯತೆ

# ಶ್ರೀಮತ್ಸತ್ಯಪರಾಕ್ರಮತೀರ್ಥ - ವೈಭವ

(ಕಿ. ಶ. ೧೮೭೨ - ೧೮೭೯)


ವಿಷಯ ಸಂಗ್ರಾಹಕರು ಮತ್ತು ಲೇಖಕರು

**ಪಾಂಡುರಂಗಾಚಾರ್ಯ ಶ್ರೀನಿವಾಸಾಚಾರ್ಯ ವಾಯಿಕರ್**


- 4 -


**ಗುರುಕೃಪಾ ಪ್ರಕಾಶನ**

೬೦೬/೬೦೭, ೧೪ನೇ ಕ್ರಾಸ್, ಮಾಗಡಿ ಕಾರ್ಡರೋಡ್,

ವಿಜಯನಗರ, ಬೆಂಗಳೂರು - ೫೬೦ ೦೪೦

This book 'ಶ್ರೀಮತ್ಸತ್ಯಪರಾಕ್ರಮತೀರ್ಥ-ವೈಭವ' is a work in Kannada which brings out an illuminatory life accouts and Glories of Sri SATYA PARAKRAMATIRTHA SWAMJI, a Pontif ot Sri UTTARADI MUTTH linage, and written by Sri P. S WAIKER, Published by Gurukrupa Prakashan, 606/607, 14th Cross, Magadi chord Road, Vijayanagar, Bangalore-560 040.

---

The book Contains Pages : xvi + 122

© All rights of this book are reserved With the Author.

First Edition: 1000 Copes

Year of Publication : 1991

Price : Rs. 12-00

Printed By :

NAYAK PRINTERS,
4 Neelipothaiah Lane,
O. T. C. Road Cross, Cottonpet,
BANGALORE - 560 053.



॥ ಶ್ರೀಮದ್ದಿಗ್ವಿಜಯರಾಮೋ ವಿಜಯತೆ ॥



ಶ್ರೀಮತ್ಸತ್ಯಪರಾಕ್ರಮತೀರ್ಥಶ್ರೀಪಾದಂಗಳವರು

ಸತ್ಯೇಷ್ಟಾಖ್ಯ ಸರಿನ್ನಾಥಾದುದ್ಭೂತೋಽದ್ಭುತ ದೀಪ್ತಿಮಾನ್ ।
ನಾಶಯೇದ್ ಹೃದಯಧ್ವಾಂತಂ ಸತ್ಪರಾಕ್ರಮ ಕೌಸ್ತುಭಃ ॥

॥ ಹರಿಃ ಓಂ ॥



## ಶ್ರೀಮತ್ಸತ್ಯಪರಾಕ್ರಮತೀರ್ಥರ ಬೃಂದಾವನ

(ಶ್ರೀ ೧೦೦೮ ಶ್ರೀ ಸತ್ಯಪ್ರಮೋದತೀರ್ಥರ ಅಮೃತ ಹಸ್ತದಿಂದ
೧೯೮೧ರಲ್ಲಿ ಪುನಃ ಹೊಸಚಿತ್ತಾಪುರದಲ್ಲಿ ಪ್ರತಿಷ್ಠಾಪಿಸಲ್ಪಟ್ಟದ್ದು)

|| ಹರಿಃ ಓಂ ||

ಶ್ರೀಮತ್ಸತ್ಯಪರಾಕ್ರಮೋ ವಿಜಯತೇ

# ಕೃತಜ್ಞತಾಪೂರ್ವಕ ವಂದನೆಗಳು

ಶ್ರೀ ಶ್ರೀನಿವಾಸಾಚಾರ್ಯ ವಾಯಿಕರ್

ಶ್ರೀಕೃಷ್ಣಾಚಾರ್ಯ ವಾಯಿಕರ್

ಶ್ರೀವಾಸುದೇವಾಚಾರ್ಯ ಯಲವೋಲಿ

॥ ಶ್ರೀ ॥

# ಧನ್ಯವಾದಗಳು

ಈ ಗ್ರಂಥ ಪ್ರಕಟವಾಗಲು ಸಕ್ರಿಯಾತ್ಮಕ ಪ್ರೋತ್ಸಾಹ ಗೊಳಿಸಿದ ಕೆಳಗೆ ಕಂಡ ಮಹನೀಯರಿಗೆ ಗುರುಕೃಪಾ ಪ್ರಕಾಶನದ ಪರವಾಗಿ ಹಾರ್ದಿಕ ಧನ್ಯವಾದಗಳನ್ನು ಅರ್ಪಿಸುತ್ತೇವೆ.

| ಶ್ರೀಯುತರಾದ | | | ರೂ. |
|---|---|---|---|
| ವೆಂಕಣ್ಣಾಚಾರ್ಯ ವಾಯಿ. ವಡವಿ. | | | ೫೦೦-೦೦ |
| ರಾಘವೇಂದ್ರಾಚಾರ್ಯ ವಾಯಿಕರ್. ಬೆಂಗಳೂರು. | | | ೨೦೦-೦೦ |
| ಬಿ. ರಾಘವೇಂದ್ರರಾವ್. ಬೆಂಗಳೂರು. | | | ೫೦೦-೦೦ |
| ಕೆ. ಪ್ರಸಾದರಾವ್. ಹೈದರಾಬಾದ್. | | | ೧೦೦೮-೦೦ |
| ವಾದಿರಾಜಾಚಾರ್ಯ. ಎಸ್. ಜಹಗೀರದಾರ್, | ಚಿತ್ತಾಪುರ | ವಾಗ್ದಾನ | |
| ನಾರಾಯಣಾಚಾರ್ಯ. ಎಸ್. ಜಹಗೀರದಾರ್, | " | " | |
| ಪ್ರಹ್ಲಾದಾಚಾರ್ಯ. ವಿ. ಜಹಗೀರದಾರ್, | " | " | |
| ಗುರುರಾಜಾಚಾರ್ಯ. ವಿ. ಜಹಗೀರದಾರ್, | " | " | |
| ಸತ್ಯನಾರಾಯಣಾಚಾರ್ಯ. ವಿ. ಜಹಗೀರದಾರ್, | " | " | |
| ಲಕ್ಷ್ಮಣಾಚಾರ್ಯ. ವಿ. ಜಹಗೀರದಾರ್ | " | " | |

ಈ ಮಹನೀಯರಿಗೆ ಇಹಪರದಲ್ಲಿ ಸೌಖ್ಯವನ್ನೀಯಲೆಂದು ಶ್ರೀಹರಿ ವಾಯುಗಳಲ್ಲಿ ಪ್ರಾರ್ಥಿಸುತ್ತೇವೆ.



# ಅನುಗ್ರಹ ವಚನಗಳು

**ಶ್ರೀ ೧೦೦೮ ಶ್ರೀಸತ್ಯಪ್ರಮೋದತೀರ್ಥ ಶ್ರೀಪಾದಂಗಳವರಿಂದ**
**ಶ್ರೀಮನ್ಮಧ್ವಾಚಾರ್ಯ ಮೂಲಸಂಸ್ಥಾನ, ಉತ್ತರಾದಿಮಠ,**
**ಬೆಂಗಳೂರು.**

**ರಾಮ ರಾಮೇತಿ ರಾಮೇತಿ ರಮೇ ರಾಮೇ ಮನೋರಮೇ ।**
**ಇತ್ಯುಮಾಯೈಶಂಕರೋಕ್ತಂ ಮೂಲ ರಾಮಂ ಸದಾಭಜೇ ॥**
**ಸತ್ಯೇಷ್ಟಾಖ್ಯಸರಿನ್ನಾಥಾದುದ್ಭೂತೋಽದ್ಭುತ ದೀಪ್ತಿಮಾನ್ ।**
**ನಾಶಯೇತ್ ಹೃದಯಧ್ವಾಂತಂ ಸತ್ಪರಾಕ್ರಮ ಕೌಸ್ತುಭಃ ॥**

ಸೃಷ್ಟಿಸ್ಥಿತ್ಯಾದಿಗಳಿಗೆ ಕಾರಣನಾದ ಭಗವಂತನು ಸೃಷ್ಟರಾದ ಸರ್ವ ಜೀವರುಗಳಿಗೂ ಅವರವರ ಉಚಿತ ಸಾಧನಾನಂತರ ಗತಿಪ್ರದನೆಂದು ಶೃತಿ ಸ್ಮೃತಿ ಪುರಾಣಗಳಿಂದ ತಿಳಿದು ಬರುತ್ತದೆ.

ಸರ್ವತಂತ್ರ ಸ್ವತಂತ್ರ ಭಗವಾನ್ ವಿಷ್ಣು ಒಬ್ಬನೇ. ಅಸಂಖ್ಯಾತ ಜೀವ ರಾಶಿಗಳೆಲ್ಲ ಅಸ್ವತಂತ್ರರು, ಇವನ ಅಧೀನ. ಈ ಜೀವರಾಶಿಗಳಲ್ಲಿ ಕೆಲವರು ಮುಕ್ತಿಯನ್ನು ಹೊಂದಿದ್ದಾರೆ. ಕೆಲವರು ಪ್ರಕೃತ ಸಂಸಾರಾವಸ್ಥೆಯಲ್ಲಿದ್ದಾರೆ. ಇನ್ನೂ ಗಣನಾತೀತ ಅನೇಕರು ಅಸೃಜ್ಯಾವಸ್ಥೆಯಲ್ಲಿದ್ದಾರೆ. ಅನಾದಿಕಾಲ ದಿಂದಲೂ ಇರತಕ್ಕ ಈ ಜೀವರಾಶಿಯನ್ನು ಅವರವರ ಸ್ವಭಾವಾನುಸಾರವಾಗಿ ಮೂರು ವಿಧವಾಗಿ ವಿಂಗಡಿಸಲಾಗಿದೆ. ಮುಕ್ತಿಯೋಗ್ಯರು, ನಿತ್ಯಸಂಸಾರಿಗಳು ಮತ್ತು ತಮೋಯೋಗ್ಯರು ಎಂದು. ಇದನ್ನು ನೋಡಿದರೆ ಸಕಲ ಜೀವರಿಗೂ

ಏಕಪ್ರಕಾರ ಸಾಧನಗಳಾಗಲಿ ಏಕಪ್ರಕಾರ ಮುಕ್ತಿಯಾಗಲಿ ಇಲ್ಲವೆಂದು ಶಾಸ್ತ್ರಗಳ ನಿರ್ಧಾರ. ಸಾಧನ ವೈವಿಧ್ಯತೆ ಇದ್ದಂತೆ ಫಲದಲ್ಲಿಯೂ ವೈವಿಧ್ಯತೆ ಇದೆ. ಇದರಲ್ಲಿ ನಿತ್ಯ ಸಂಸಾರಿಗಳಿಗೂ ಮತ್ತು ತಮೋಯೋಗ್ಯರಿಗೂ ಅವರವರ ಸಾಧನಗಳಿಗೆ ಸಚ್ಛಾಸ್ತ್ರಗಳ ಅವಶ್ಯಕತೆಯೇ ಇಲ್ಲ. ತಮೋ ಯೋಗ್ಯರಿಗಂತೂ ಶ್ರೀಹರಿ–ಹರಿಭಕ್ತರ ದ್ವೇಷಾದಿಗಳಲ್ಲದೇ ವೇದ–ವೇದಾಂತಗಳ (ಶಾಸ್ತ್ರಗಳ) ಅರ್ಥಗಳನ್ನು ಕಲುಷಿತಗೊಳಿಸುವದೂ ಒಂದು ಸಾಧನ. ಮುಕ್ತಿಯೋಗ್ಯ ಜೀವರಾಶಿಗಳ ಸಾಧನಾನುಷ್ಠಾನಗಳಿಗೆ ಮಾತ್ರ ಸಚ್ಛಾಸ್ತ್ರಗಳ ಸಹಾಯ ಬೇಕೇಬೇಕು.

ಸಕಲ ಸಚ್ಛಾಸ್ತ್ರಗಳು ಸಾಧನಾಧಿಕಾರಿಗಳಿಗೆ ಮೂರು ಪ್ರಧಾನ ವಿಷಯ ಗಳನ್ನು ತಿಳಿಸಿಕೊಡುತ್ತವೆ.

(೧) ಭಗವಂತನ ಸ್ವರೂಪ.

(೨) ಭಗವತ್ಪ್ರಾಪ್ತಿ ಸಾಧನ.

(೩) ಫಲ.

ಮುಮುಕ್ಷುವು ಇವುಗಳನ್ನು ಶಾಸ್ತ್ರಾಧಾರದಿಂದ ಗುರುಮುಖೇನ ತಿಳಿದು ಸಾಧನಾನುಷ್ಠಾನಗಳನ್ನು ಮಾಡುತ್ತಾನೆ.

ವಸ್ತುಸ್ಥಿತಿ ಹೀಗಿದ್ದರೂ ಕೆಲವು ಸಂದರ್ಭಗಳಲ್ಲಿ ಮುಮುಕ್ಷುಗಳಿಗೆ ಪ್ರಬಲ ಪ್ರತಿಬಂಧಕ ಒದಗುತ್ತದೆ. ಯಾವಾಗ ಎಂದರೆ ಶಾಸ್ತ್ರಗಳಿಗೆ, ಅಪವ್ಯಾಖ್ಯಾನಗಳು ರಚಿತವಾಗಿ ಎಲ್ಲೆಡೆಯಲ್ಲಿಯೂ ಬಹುಜನರಿಂದ ಪ್ರಸಿದ್ಧ ವಾಗಿ ಅವೇ ಹರಡಿದಾಗ, ಸಜ್ಜೀವರುಗಳಿಗೆ 'ಇದಮುದೋವಾ' ಎಂಬ ಸಂದೇಹಾದಿಗಳಿಂದ ಸಾಧನಾನುಷ್ಠಾನಗಳಿಗೆ ಮನೋದಾರ್ಢ್ಯಕಡಿಮೆ ಯಾಗುತ್ತದೆ. ಹದಿಮೂರನೆಯ ಶತಮಾನದ ಹೊತ್ತಿಗೆ ಇಪ್ಪತ್ತೊಂದು ಅಪವ್ಯಾಖ್ಯಾನಗಳು ಸಿದ್ಧವಾಗಿದ್ದವು.

ಮುಕ್ತಿಯೋಗ್ಯರ ವಿಷಯದಲ್ಲಿ ದೇವದೇವತೆಗಳಿಗೆ ಅನುಕಂಪವಿದೆ. ದೇವತೆಗಳು ಸಜ್ಜನೋದ್ಧಾರಕ್ಕಾಗಿ ಶ್ರೀಹರಿಯನ್ನು ಪ್ರಾರ್ಥಿಸಿದಾಗ, ತ್ರಿಯುಗ ಹೂತಿ ಎಂಬ ನಾಮ ಉಳ್ಳ ಅವನು ಕಲಿಯುಗದಲ್ಲಿ ಅವತಾರ ವಿಲ್ಲದ್ದರಿಂದ ಮಂದಸ್ಮಿತನಾಗಿ ವಾಯುದೇವರ ಕಡೆಗೆ ನೋಡಿದನು.

ಪರಮಾತ್ಮನ ಅಂತರಂಗವನ್ನರಿತ ಅವರಿಗೆ ಅದೇ ಆಜ್ಞೆಯಾಯಿತು. ದೇವತೆಗಳಿಂದ ಪ್ರಾರ್ಥಿತರಾಗಿ ವಾಯುದೇವರು ಪಾಜಕ ಕ್ಷೇತ್ರದಲ್ಲಿ ಅವತರಿಸಿದರು. ಬಾಲ್ಯಾರಭ್ಯ ಅನೇಕ ಅಗಾಧ ಲೀಲೆಗಳನ್ನು ಪ್ರಕಟಮಾತ್ತ ಚಿಕ್ಕವಯಸ್ಸಿನಲ್ಲಿಯೇ ಹಂಸನಾಮಕ ಪರಮಾತ್ಮನ ಪರಂಪರೆಯ ಮಠದ ಸಂಪ್ರದಾಯಸ್ಥರಾದ ಶ್ರೀ ಅಚ್ಯುತಪ್ರೇಕ್ಷಾಚಾರ್ಯರಿಂದ ಆಶ್ರಮ ಪಡೆದು, ಶ್ರೀಮದಾನಂದ ತೀರ್ಥರೆಂಬ ನಾಮಧೇಯ ಹೊಂದಿ, ಆಸೇತು ಹಿಮಾಲಯ ಎರಡುಬಾರಿ ಸಂಚರಿಸಿ, ಮೂಲ ೩೭ ಗ್ರಂಥಗಳನ್ನು ರಚಿಸಿ ಪರಮತ ಖಂಡನ ಪೂರ್ವಕ ಸ್ವಮತ ಸ್ಥಾಪನೆಯನ್ನು ಮಾಡಿದರು. ಶ್ರೀವೇದವ್ಯಾಸರ ಮತವೇ ಶ್ರೀಮಧ್ವರ ಮತವು.

ತದನಂತರ ಪರಕೀಯರಿಂದ ಒದಗತಕ್ಕ ಆಘಾತಗಳನ್ನು ತಪ್ಪಿಸಲು ಅನೇಕ ದೇವಾಂಶರು ಒಬ್ಬರ ನಂತರ ಒಬ್ಬರು ಸುವ್ಯವಸ್ಥಿತವಾಗಿ ಅವತರಿಸಿ ಪರಮಹಂಸಾಶ್ರಮವನ್ನು ಸ್ವೀಕರಿಸಿ ಶ್ರೀಮಧ್ವರ ಜ್ಞಾನ ಪೀಠದಲ್ಲಿ ವಿರಾಜಮಾನರಾಗುತ್ತ ಬಂದಿದ್ದಾರೆ.

ಶ್ರೀಜಯತೀರ್ಥಾದಿಗಳ ನಂತರ ಅದೇ ಉತ್ತರಾದಿಮಠದ ಭವ್ಯಪರಂಪರೆಯಲ್ಲಿ ಮೂವತ್ತ ನಾಲ್ಕನೆಯ ಯತಿವರೇಣ್ಯರು ಶ್ರೀಸತ್ಯಪರಾಕ್ರಮ ತೀರ್ಥರು. ಅವರೇ ಈ ಗ್ರಂಥಕ್ಕೆ ವಿಷಯೀಭೂತರಾದ ಮಹನೀಯರು.

ಇವರ ಆಶ್ರಮ ನಾಮಧೇಯವು ಭವ್ಯವೂ ಕುತೂಹಲ ಕೆರಳಿಸುವದೂ ಆಗಿದೆ.

ಇವರ ಬಾಲ್ಯಾರಭ್ಯ ಆಶ್ರಮ ಪರಿಯಂತರ, ತದನಂತರ ಈ ನಾಮಕ್ಕೆ ತಕ್ಕ ಅನ್ವರ್ಥಕವಾದ ಅಸಾಧಾರಣ ಗಮನಾರ್ಹ ಗುಣಗಳಿದ್ದವೋ, ಅಥವಾ ಅವರ ನಾಮ ಸಾಂಕೇತಿಕವೋ ಎಂಬ ಆಕಾಂಕ್ಷೆಗೆ ಈ ಗ್ರಂಥ ಉತ್ತರ ಕೊಡುತ್ತದೆ.

ಕೆಲವು ಗ್ರಂಥಗಳಲ್ಲಿ ಈ ಮಹನೀಯರ ಬಗ್ಗೆ ಆಶ್ರಮಾನಂತರದ ಸಂಕ್ಷೇಪ ವಿವರಗಳಿವೆ. ಬಾಲ್ಯಾರಭ್ಯ ವಿಸ್ತೃತ ವಿವರಗಳ ಕೊರತೆ ಇತ್ತು. ಪ್ರಕೃತ ಅದೇ ಮನೆತನದವರಾದ ಶ್ರೀಪಾಂಡುರಂಗಾಚಾರ್ಯ ಶ್ರೀನಿವಾಸಾಚಾರ್ಯ ವಾಯಿಕರ್ ಇವರು ಶ್ರೀಸತ್ಯಪರಾಕ್ರಮ ತೀರ್ಥರ ವಿಸ್ತೃತ

ಚರಿತ್ರೆಯನ್ನು ಬರೆದು ಅಭಿಮಾನಿಗಳ ಮುಂದೆ ಇಟ್ಟಿದ್ದು ಶ್ಲಾಘನೀಯ ಪ್ರಯತ್ನವಾಗಿದೆ.

ಶ್ರೀಸತ್ಯಪರಾಕ್ರಮತೀರ್ಥರು (ಕ್ರಿ.ಶ. ೧೮೭೨ ರಿಂದ ೧೮೭೯) ಏಳು ವರ್ಷ ಒಂದು ತಿಂಗಳು ಶ್ರೀಮನ್ಮಧ್ವರ ಜ್ಞಾನ ಪೀಠದಲ್ಲಿ ವಿರಾಜಮಾನರಾಗಿದ್ದರು. ಆ ಕಾಲದಲ್ಲಿ ನಮ್ಮ ಮಠದ ಮೇಲೆ ದಾಳಿ ಮಾಡಲೆತ್ನಿಸಿದ ಪರಮತದ ವಿದ್ವಾಂಸರನೇಕರಿದ್ದರು. ಪೀಠದ ಮೇಲೆ ಕುಳಿತು ಯಶಸ್ಸುಗಳಿಸುವದು ಸಮರ್ಥರಲ್ಲದಿದ್ದರೆ ದುರ್ಘಟವಾಗಿತ್ತು. ಆಕಾಲದಲ್ಲಿ ಇವರು ಮಾಡಿದ ಸಾಧನ ಗಮನಾರ್ಹವೂ ಪ್ರಶಂಸನೀಯವೂ ಆಗಿದೆ.

ಇವರ ಪೂರ್ವಾಶ್ರಮದ ನಾಮಧೇಯ ವಾಯಿಶ್ರೀನಿವಾಸಾಚಾರ್ಯರು. ಪೂರ್ವಯೌವನದಲ್ಲಿಯೇ ನ್ಯಾಯವೇದಾಂತಾದಿ ಚತುಶಾಸ್ತ್ರಗಳಲ್ಲಿ ಅಪ್ರತಿಮ ಪಾಂಡಿತ್ಯವನ್ನು ಪಡೆದ ವಿದ್ವಾಂಸರಾಗಿದ್ದರು. ಇವರ ಗೃಹವೇ ಬೃಹತ್ ಗುರುಕುಲವಾಗಿತ್ತು. ಅನೇಕ ಖ್ಯಾತ ಜ್ಞಾನಿಗಳು ಇವರ ಶಿಷ್ಯರಾಗಿದ್ದರು. ಶಾಸ್ತ್ರಾರ್ಥವಾದಾನುವಾದಗಳಲ್ಲಿ ಸ್ವಪರಾಕ್ರಮದಿಂದ ಖ್ಯಾತಿ ಪಡೆದವರು. ಹೆಚ್ಚಿಗೆ ಹೇಳುವದೇನು, ಚಿರಕಾಲ ಇವರೆದುರು ಪ್ರತಿಭಟಿಸಿ ನಿಂತು ವಾದ ಮಾಡತಕ್ಕ ಸಾಮರ್ಥ್ಯ ಉಳ್ಳವರು ಸ್ವ-ಪರಮತಗಳಲ್ಲಿ ಇರಲಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಇವರ ಪಾಂಡಿತ್ಯ ಪ್ರತಿಭೆಗೆ ಮೆಚ್ಚಿ ಹೈದರಾಬಾದ ನಿಜಾಮರು ಹೇರಳವಾಗಿ ಜಹಗೀರುಗಳನ್ನು ಕೊಟ್ಟರು.

ಇವರು ಶ್ರೀ ಸತ್ಯೇಷ್ಟತೀರ್ಥರಿಂದ ಆಶ್ರಮ ಸ್ವೀಕಾರ ಮಾಡಿದರು. ವಿದ್ವಾಂಸರ ಆಕರವಾದ ಪುಣೆಯಲ್ಲಿ ಎರಡು ಸಲ ಚಾತುರ್ಮಾಸ್ಯಕ್ಕೆ ಉಪಸ್ಥಿತರಾಗಿದ್ದರು. ಅನೇಕವಾಕ್ಯಾರ್ಥಗಳು ನಡೆದವು. ಶ್ರೀಗಳವರು ಅಪೂರ್ವಯಶಸ್ಸುಗಳಿಸಿದರು. ಶ್ರೀಗಳವರು ಪ್ರಮೇಯಮಾಲಾ ಎಂಬ ಶಾಸ್ತ್ರ ಸಂಗ್ರಹ ರೂಪವಾದ ಒಂದು ಗ್ರಂಥವನ್ನು ರಚಿಸಿದ್ದಾರೆ. ಶ್ರೀಸತ್ಯವರಾಷ್ಟಕವೆಂಬ ಸ್ತೋತ್ರವನ್ನೂ ರಚಿಸಿದ್ದಾರೆ. ಇದಲ್ಲದೇ ಶ್ರೀ ಬ್ರಹ್ಮಸೂತ್ರಾರ್ಥ ವಿಚಾರ ಎಂಬ ಗ್ರಂಥವನ್ನು ರಚಿಸಿದ್ದಾರೆ.

ಇವರ ಬೃಂದಾವನ ಕೃಷ್ಣಾ ತೀರ ಚಿತ್ತಾಪುರದಲ್ಲಿ ಇಂದಿಗೂ ವಿರಾಜಿಸುತ್ತಿದೆ. ಅವರ ಮನೆತನದವರೇ ಯಥಾಸಾಂಗ ಪೂಜಾದಿಗಳನ್ನು ನೆರವೇರಿಸಿಕೊಂಡು ಹೋಗುತ್ತಿದ್ದಾರೆ.

'ಮನೋವಿಶುದ್ಧ್ಯೈ ಚರಿತಾನುವಾದಃ' ಎಂಬ ಮಧ್ವವಿಜಯದ ಉಕ್ತಿಯಂತೆ ಇಂಥ ಮಹಾತ್ಮರ ಚರಿತ್ರೆಯು ಮನಸ್ಸಿನ ಮಾಲಿನ್ಯವನ್ನು ನಾಶಗೊಳಿಸಿ, ನಿರ್ಮಲವಮಾಡುತ್ತದೆ ಎನ್ನುವದರಲ್ಲಿ ಸಂದೇಹವಿಲ್ಲ.

ಇಂಥ ಉತ್ತಮ ಗ್ರಂಥವನ್ನು ಬರೆದ ಶ್ರೀ ಪಾಂಡುರಂಗಾಚಾರ್ಯ ವಾಯಿಕರ್ ಅವರ ಪರಿಶ್ರಮ ಸಾರ್ಥಕವೆನ್ನಬಹುದು. ಇವರ ಲೇಖನಿಯಿಂದ ಇನ್ನೂ ಹಲವಾರು ಉತ್ತಮೋತ್ತಮ ಗ್ರಂಥಗಳು ಹೊರ ಬೀಳಲಿ ಎಂದು ನಮ್ಮ ಉಪಾಸ್ಯಮೂರ್ತಿ ಶ್ರೀಮೂಲ ಸೀತಾರಾಮಚಂದ್ರ ದೇವರನ್ನು ಪ್ರಾರ್ಥಿಸುತ್ತೇವೆ.

ಇತಿ ನಾರಾಯಣ ಸ್ಮರಣೆಗಳು

**ಶ್ರೀ ಶ್ರೀಸತ್ಯಪ್ರಮೋದತೀರ್ಥಶ್ರೀಪಾದಂಗಳವರು**

ತಾ॥ 30-7-1991
ಸ್ಥಳ : ಬೆಂಗಳೂರು

# ಮುನ್ನುಡಿ-೨

## ಗ್ರಂಥಕರ್ತರಿಂದ

ಶ್ರೀ ಶ್ರೀಮನ್ಮಧ್ವಾಚಾರ್ಯರ ಮೂಲಸಂಸ್ಥಾನ ಉತ್ತರಾದಿಮಠದ ಪರಂಪರೆಯಲ್ಲಿ ಬಂದು ಜ್ಞಾನಪೀಠದಲ್ಲಿ ವಿರಾಜಮಾನರಾಗಿದ್ದ ಶ್ರೀ ಶ್ರೀಸತ್ಯಪರಾಕ್ರಮ ತೀರ್ಥರು ಬೃಂದಾವನಸ್ಥರಾಗಿದ್ದು 1879 AD (ಪ್ರಮಾಥಿ ಸಂ। ಆಶ್ವೀಜ ಶು: ೮) ವರ್ಷದಲ್ಲಿ. ಈ ವರ್ಷಕ್ಕೆ ಅಂದರೆ 1991 AD ವರ್ಷಕ್ಕೆ, ಸುಮಾರು 111 ವರ್ಷಗಳಾದವು. ಪ್ರಕೃತ ಅವರ ಚರಿತ್ರೆರೂಪವಾದ ಈ ಗ್ರಂಥವನ್ನು ಇಷ್ಟು ವರ್ಷಗಳು ಕಳೆದ ಮೇಲೆ ಪ್ರಕಟಿಸುವ ಕಾರಣವೇನು ? ಈ ಗ್ರಂಥಕ್ಕೆ ಸಹಕಾರಿಯಾದ ಪ್ರಾಮಾಣಿಕ ವಿಷಯಗಳು ದೊರೆಯುವವೋ ? ಅಥವಾ ಸಿಕ್ಕ ವಿಷಯಗಳನ್ನೇ ಪ್ರಾಮಾಣಿಕವೆಂದು ಗ್ರಹಿಸಲಾಗುವದೋ ? ಅಥವಾ ಉಪಲಬ್ಧವಾದ ವಿಷಯಗಳನ್ನೇ ಅಭಿಮಾನದಿಂದ ಉತ್ಪ್ರೇಕ್ಷೆಮಾಡಿ ಬರೆಯುವದೋ ? ಅಲ್ಲದೇ ಈಗಾಗಲೇ ಸತ್ಕಥಾ ಮತ್ತು ಮಾಧ್ವವಾಙ್ಮಯ ತಪಸ್ವಿಗಳು ಎಂಬ ಗ್ರಂಥಗಳಲ್ಲಿ ಇವರ ಉಲ್ಲೇಖ ಬಂದಿದೆಯಲ್ಲವೇ ? ಅದು ಸಾಲದೇ ? ಎಂಬ ಅನೇಕ ಊಹಾಪೋಹಗಳು ಓದುಗರಿಗೆ ಬರಲು ಸಾಧ್ಯ.

ಹೌದ್ರೀ ; ನಿಮ್ಮ ಅನಿಸಿಕೆಗಳೆಲ್ಲವೂ ನಿಜವೇ, ಆದರೆ ಅವರ ವಿಷಯಕವಾಗಿ ಬರೆದದ್ದೂ (ಆಶ್ರಮಾನಂತರದ) ಬಹು ಸಂಕೋಚ ವರ್ಣನೆ. ಅವರ ಪೂರ್ವಾಶ್ರಮದ ಚರಿತ್ರೆಯೂ ಅಮೋಘವಾಗಿದೆ. ಆಶ್ರಮಾನಂತರವಂತೂ ಅವರ ಕೀರ್ತಿ, ಪ್ರತಿಭೆ ಮತ್ತು ಗೌರವಾದಿಗಳು ಇನ್ನೂ ಹೆಚ್ಚು. ಅವರ ಆಶ್ರಮ ನಾಮಧೇಯವಾದ ಶ್ರೀಸತ್ಯಪರಾಕ್ರಮ ತೀರ್ಥರೆಂಬುವದು ಅವರ ಇಡೀ ಜೀವನದಲ್ಲಿ ಎಷ್ಟು ಅನ್ವರ್ಥವಾಗಿದೆ ಎಂಬದನ್ನು ಹುಟ್ಟಿನಿಂದ ಹರಿಪದ ಸೇರುವವರೆಗೆ ನೋಡಿದರೇನೇ ಒಂದು ಚಾರಿತ್ರಿಕ ಸಾಮರಸ್ಯವನ್ನು

ಕಾಣುತ್ತೇವೆ. ಅವರ ಜೀವನದಲ್ಲಿ ಅಸಾಮಾನ್ಯ/ಅಸಾಧಾರಣ ಘಟನೆಗಳು ಅನೇಕ ಇವೆ. ಇವೆಲ್ಲವನ್ನೂ ನಾವು ನಮ್ಮ ಪೂರ್ವಿಕರಿಂದ ಸಮಕಾಲೀನರ ಪೀಳಿಗೆಗಳಿಂದ ಕೇಳುತ್ತ ಬಂದಿದ್ದೇವೆ. ಇವಕ್ಕೆಲ್ಲ ಆಧಾರಗಳೂ ಇವೆ. ಅವೆಲ್ಲವನ್ನೂ ಮೂಲವಾಗಿಟ್ಟುಕೊಂಡು ಒಂದು ವಿಸ್ತೃತ ಚರಿತ್ರೆಯನ್ನು ಬರೆಯುವ ಕಾಲ ಈಗ ಪ್ರಾಪ್ತವಾಯಿತೆಂದು ತಿಳಿಯುತ್ತೇನೆ.

ಈ ಕೃತಿಯನ್ನು ಬರೆಯಬೇಕಾದರೆ, ಸುಮಧ್ವವಿಜಯವನ್ನು ರಚಿಸಿದ ನಾರಾಯಣ ಪಂಡಿತಾಚಾರ್ಯರು ತಮ್ಮ "ಭಾವಪ್ರಕಾಸಿಕೆ"ಯಲ್ಲಿ ಪ್ರಕಟ ಮಾಡಿದ ಸಂಶೋಧನಾ ಮಾರ್ಗವನ್ನೇ ಅವಲಂಬಿಸಿದ್ದೇವೆ.

**"ಪ್ರಾಯೇಣ ನೈಕಮಾತ್ರೋಕ್ತಾಃ ಕಥಿತಾ ಇಹ ಸರ್ವಶಃ ।**
**ಮಯಾದೃಷ್ಟಾ ಧ್ರುವಮಿತಿ ಪ್ರೋಕ್ತಾಪ್ರಾಯೇಣ ಪೂರುಷೈಃ ।**
**ದ್ವಯೋರ್ವಕ್ತ್ರೋ ವಿರೋಧೇತು ಸ್ವೀಕೃತಾಪ್ರಬಲಸ್ಯಗೀಃ ॥**
**ಕಾವ್ಯಾಶ್ರಯೇವಾ ಗುರುಕೀರ್ತಯೇವಾ ಪ್ರೋಕ್ತಸ್ವಯೈವಾಪಿ ಮನೀಷಯಾವಾ ।**
**ತಸ್ಮಾನ್ನಶಂಕೇತ ಮಹಾಜನೇನ ಪುಂಸಾಂಕುಶಾಗ್ರ್ಯೇಯಧಿಯಾಪ್ಯ-ವಶ್ಯಮ್ ॥"**

—ಭಾವಪ್ರಕಾಶಿಕೆ

"ಏಕ ವ್ಯಕ್ತಿಯಿಂದ ಉಕ್ತವಾದದ್ದನ್ನೇ ಆಧಾರವಾಗಿಟ್ಟುಕೊಂಡು ಕಾವ್ಯರಚನೆಮಾಡಿಲ್ಲ. 'ನಾನು ಇದನ್ನು ನೋಡಿದ್ದೇನೆ' ಎಂಬ ವಿಷಯದಲ್ಲಿ ಸಂವಾದವಿರುವದನ್ನು ಗ್ರಹಿಸಿದ್ದೇವೆ. ಇಬ್ಬರ ಮಾತಿನಲ್ಲಿ ವಿರೋಧ ಕಂಡು ಬಂದರೆ ಅದರಲ್ಲಿ ಅಧಿಕ-ಯುಕ್ತಿಯುಕ್ತವೆಂದು ಕಂಡದ್ದನ್ನು ಸ್ವೀಕಾರ ಮಾಡಿದೆವು. ಗುರು ಚರಿತ್ರೆ ರೂಪವಾದ ಈ ಕಾವ್ಯದಲ್ಲಿ ನಾನು ಸ್ವಬುದ್ಧಿಯಿಂದ ಕೆಲವು ವಿಷಯಗಳನ್ನು ಬರೆದಿರುವದೂಉಂಟು. ಹಾಗಿದ್ದರೂ ಕುಶಾಗ್ರಬುದ್ಧಿಯುಳ್ಳ ಮಹಾಜನರು ಈ ಕಾವ್ಯದ ಪ್ರಾಮಾಣ್ಯ ವಿಷಯದಲ್ಲಿ ಶಂಕೆ ಪಡಲು ಲೇಶ ಮಾತ್ರವೂ ಅವಕಾಶವಿಲ್ಲ."

ಹಾಗೆಯೇ ಇಲ್ಲಿ ನಾವು ಖಚಿತ ಪಡಿಸಿಕೊಂಡ ವಿಷಯಗಳನ್ನು ಮಾತ್ರ ನಿರೂಪಣೆ ಮಾಡಿದ್ದೇವೆ. ಸಂದೇಹಾಸ್ಪದವಾದದ್ದನ್ನು ಉದಾಸೀನ

ಮಾಡಿದ್ದೇವೆ. ಉಲ್ಲೇಖಗಳನ್ನು ಯುಕ್ತಿಯುಕ್ತವಾಗಿ ಮಂಡಿಸಲು ಪ್ರಯತ್ನ ಮಾಡಿದ್ದೇವೆ. ಇಲ್ಲದ್ದನ್ನು ಊಹಿಸಿ ಬರೆಯಲಿಲ್ಲ. ಉತ್ಪ್ರೇಕ್ಷೆಯನ್ನಂತೂ ಮಾಡಲೇ ಇಲ್ಲ. ಪ್ರಾಮಾಣಿಕವೆಂದು ಎಷ್ಟು ವಿಷಯ ದೊರೆತಿದೆಯೋ ಅಷ್ಟು ಮಾತ್ರ ಸಜ್ಜನರ ಅವಗಾಹನೆಗೆ ಪ್ರಕಟ ಮಾಡಲು ಪ್ರಯತ್ನ ಪಟ್ಟಿದ್ದೇವೆ. "ಮನೋವಿಶುಧ್ಯೈ ಚರಿತಾನುವಾದಃ" ಮನಸ್ಸಿನ ಪರಿಶುದ್ಧಿ ಹೊಂದಲು ಮಹಾತ್ಮರ ಚರಿತಾನುವಾದ.

ಈ ಗ್ರಂಥ ಪ್ರಕಟನಾ ಕಾರ್ಯದಲ್ಲಿ ನಮಗೆ ವಿಷಯಗಳನ್ನು ಒದಗಿಸಿದವರ ಉಪಕಾರವನ್ನು ಸ್ಮರಿಸಿ ಅಭಿನಂದಿಸಲು ಸಂತೋಷವಾಗುತ್ತದೆ.

(i) ಶ್ರೀ ಶ್ರೀಸತ್ಯಪ್ರಮೋದ ತೀರ್ಥರು, ಶ್ರೀ ಶ್ರೀಸತ್ಯಪರಾಕ್ರಮ ವಿಜಯ (ಭಾಗಶಃ)ವನ್ನು ದಯಪಾಲಿಸಿ ಪ್ರೋತ್ಸಾಹಿಸಿದರು.

(ii) ವೈ. ವಾ. ರಾಮಾಚಾರ್ಯ ಜಹಗೀರ್‌ದಾರ (ಶ್ರೀಸತ್ಯಪರಾಕ್ರಮ ತೀರ್ಥರ ಪೂರ್ವಾಶ್ರಮದ ಮರಿಮಕ್ಕಳು) ಬರೆಸಿಟ್ಟ ೨೦ ಪುಟಗಳ ಅಪ್ರಕಟ ಲೇಖನ. ಶ್ರೀಗಳವರ ಚರಿತ್ರೆಯನ್ನು ಪ್ರಕಟಿಸಲು ಇವರು ಪ್ರಯತ್ನಶಾಲಿಗಳಾದರು. ಆದರೆ ಅನಾರೋಗ್ಯ ಕಾರಣದಿಂದಾಗಿ ಸಾಧ್ಯವಾಗಲಿಲ್ಲ. ಭಗವದಿಚ್ಛೆ.

(iii) ವೈ. ವಾ. ಶ್ರೀನಿವಾಸಾಚಾರ್ಯ ವಾಯಿಕರ್
ವೈ. ವಾ. ಕೃಷ್ಣಾಚಾರ್ಯ ವಾಯಿಕರ್
(ಅನೇಕ ಚಾರಿತ್ರಿಕ ವಿಷಯಗಳನ್ನು ತಿಳಿಸಿದ ಮಹನೀಯರು.)

(iv) ಶ್ರೀ ವಾದಿರಾಜಾಚಾರ್ಯ ಜಹಗೀರದಾರ್
ಶ್ರೀ ನಾರಾಯಣಾಚಾರ್ಯ ಜಹಗೀರದಾರ್
(ಶ್ರೀಸತ್ಯಪರಾಕ್ರಮ ತೀರ್ಥರ ಪೂರ್ವಾಶ್ರಮದ ಮರಿ ಮಕ್ಕಳು.)

ಇವರು ಕೆಲವು ನಿರ್ದಿಷ್ಟವಿಷಯಗಳನ್ನು ತಿಳಿಸುವದಲ್ಲದೇ ಪರಮೋತ್ಸಾಹಿಗಳಾಗಿ ಸಕ್ರಿಯವಾಗಿ ಭಾಗವಹಿಸಿದವರು.

(v) ಶ್ರೀವೆಂಕಣ್ಣಾಚಾರ್ಯ ವಾಯಿ (ಮಾಜಿ ಶಾಸಕ). ಅನೇಕ ವಿಷಯಗಳನ್ನೊದಗಿಸುವದಲ್ಲದೇ, ಮುದ್ರಣಪೂರ್ವ ಹಸ್ತಲಿಖಿತ ಪ್ರತಿಯನ್ನೋದಿ ಸಂತೋಷಗೊಂಡು ಸಕ್ರಿಯವಾಗಿ ಪ್ರಕಟಣೆಗೆ ಉತ್ಸಾಹ ತೋರಿದವರು.

(vi) ಶ್ರೀ ಕೆ. ವಿ. ಬಿದರಹಳ್ಳಿ, ಕೆಲವು ವಿಷಯಗಳನ್ನು ತಿಳಿಸುವದಲ್ಲದೇ ಬರಹಕ್ಕೆ ಪ್ರಕಟಣೆಗೆ ಪ್ರೋತ್ಸಾಹಿಸಿದವರು.

ಇವರು ಹೇಳಿದ ಸಂವಾದರೂಪವಾದ ಚರಿತ್ರಾಂಶಗಳು, ಸತ್ಕಥಾ ಮಾಧ್ವವಾಙ್ಮಯ ತಪಸ್ವಿಗಳು ಇತ್ಯಾದಿ ಪ್ರಕಟವಾದ ಗ್ರಂಥಗಳು, ಅನೇಕ ಗ್ರಂಥಗಳಲ್ಲಿ ಮೂಡಿಬಂದ ಪಾರ್ಶ್ವೋಲ್ಲೇಖಗಳು ಇವುಗಳೆಲ್ಲವನ್ನೂ ಮೂಲಾಧಾರವಾಗಿಟ್ಟುಕೊಂಡು ಈ ಗ್ರಂಥವು ರಚಿಸಲ್ಪಟ್ಟಿದೆ.

ಈ ಗ್ರಂಥವನ್ನು ಈಗ ಪ್ರಕಟಿಸುವ ಉದ್ದೇಶ್ಯವೆಂದರೆ ಇಷ್ಟೇ ಪ್ರಮೋದಿ ನಾಮ ಸಂವತ್ಸ ಆ/ಶು/ಅಷ್ಟಮಿ, ಶ್ರೀ ಸತ್ಯಪರಾಕ್ರಮತೀರ್ಥರ ಆರಾಧನೆಗೆ ಚಿತ್ತಾಪುರಕ್ಕೆ ಈ ಗ್ರಂಥಕರ್ತರು ಹೋಗಿದ್ದಾಗ, ಆದಿನ ಅವರ ಸನ್ನಿಧಾನದಲ್ಲಿ ಅಪರಿತ್ತ ಸ್ಫೂರ್ತಿಯೇ ಈ ಗ್ರಂಥ ಪ್ರಕಟಣೆಗೆ ಕಾರಣವೆನ್ನಬಹುದು.

ಈ ಗ್ರಂಥದ ಹಸ್ತಪ್ರತಿ ತಯಾರಾದನಂತರ ಇದಕ್ಕೊಂದು ಮುನ್ನುಡಿ/ಅನುಗ್ರಹವಚನವನ್ನು ದಯಪಾಲಿಸಬೇಕೆಂದು ಶ್ರೀ ೧೦೦೮ ಶ್ರೀಸತ್ಯಪ್ರಮೋದ ತೀರ್ಥ ಶ್ರೀಪಾದಂಗಳವರನ್ನು ಪ್ರಾರ್ಥಿಸಿದೆವು. ಅವರು ಪರಮ ಸಂತೋಷದಿಂದ ಗ್ರಂಥವನ್ನು ಓದಿಸಿ ಅತ್ಯಂತ ಹಾರ್ದಿಕ ಸೂಕ್ತ ಪ್ರಾಸ್ತಾವಿಕ ವಚನಗಳನ್ನು ಅನುಗ್ರಹಿಸಿದ್ದಾರೆ. ಅವರಿಗೆ ನಮ್ಮ ಅನಂತ ಶಿ|ಸಾ|ನಮನಗಳೊಂದಿಗೆ ನಾವು ಚಿರಋಣಿ.

ಈ ಗ್ರಂಥವನ್ನು ಮುದ್ರಣ ದೋಷಗಳಿಂದ ದೂರವಿರಿಸಲು, ಚಿರಕಾಲ ನಮ್ಮ ಆಪ್ತಸ್ನೇಹಿತರಾದ ಶ್ರೀ ಬಿ. ರಾಘವೇಂದ್ರರಾವ್, ನಿವೃತ್ತ ಸಿನಿಯರ್ ಸೈಂಟಿಫಿಕ್ ಆಫೀಸರ್, ರಕ್ಷಣಾವಿಭಾಗ, ಬೆಂಗಳೂರು, ಅವರ ಪರಿಶುದ್ಧೀಕರಣವೇ ಮುಖ್ಯಕಾರಣ, ಇವರು ಗುರುಕೃಪಾ ಪ್ರಕಾಶನದ ಎಲ್ಲ ಪ್ರಕಟಣೆ

ಗಳಲ್ಲಿಯೂ ನಮಗೆ ಸ್ಫೂರ್ತಿದಾಯಕರೂ ಸಕ್ರಿಯಾತ್ಮಕ ಆಸಕ್ತಿ ಉಳ್ಳವರೂ ಮತ್ತು ಉತ್ಸಾಹ ಶೀಲರೂ ಆಗಿದ್ದಾರೆ. ಇವರಿಗೆ ನಮ್ಮ ಆತ್ಮೀಯ ಅಭಿನಂದನೆಗಳು.

ಅಲ್ಪಕಾಲಕ್ಲೃಪ್ತಿಯಲ್ಲಿಯೇ ಈ ಗ್ರಂಥವನ್ನು ತಪ್ಪುಗಳಿಲ್ಲದೇ ಅಂದವಾಗಿ ಆಸಕ್ತಿಯಿಂದ ಅಚ್ಚುಮಾಡಿಸಿಕೊಟ್ಟ ನಾಯಕ್ ಪ್ರಿಂಟರ್ಸ್ ಅವರಿಗೆ ನಮ್ಮ ಹಾರ್ದಿಕ ಧನ್ಯವಾದಗಳು.

ಪ್ರಾತಃ ಸ್ಮರಣೀಯರಾದ ಶ್ರೀಪಾದಂಗಳವರ ಚರಿತಾಮೃತವನ್ನು ಸಜ್ಜನರು ಪಾನ ಮಾಡಿ ಮೋದಪಡಲೆಂಬದೇ ಈ ಪ್ರಕಟನದ/ಗ್ರಂಥಕರ್ತೃವಿನ ಆಶಯ.

ಪಾಂಡುರಂಗಾಚಾರ್ಯ ಶ್ರೀನಿವಾಸಾಚಾರ್ಯ ವಾಯಿಕರ್,
(ಪಿ. ಎಸ್. ವಾಯಿಕರ್)
ಡೈರೆಕ್ಟರ್ (ನಿವೃತ್ತ)
[ ಕಂಟ್ರೋಲೆರೇಟ್ ಆಫ್ ಕ್ವಾಲಿಟಿ ಅಶ್ಯೂರೆನ್ಸ್ ರಾಡಾರ್
ರಕ್ಷಣಾವಿಭಾಗ, ಕೇಂದ್ರಸರ್ಕಾರ, ಬೆಂಗಳೂರು ]

ನಿವಾಸ :
606/607, 14ನೇ ಕ್ರಾಸ್,
ಮಾಗಡಿಕಾರ್ಡ್ ರೋಡ್, ವಿಜಯನಗರ,
ಬೆಂಗಳೂರು–560 040

# ವಿಷಯಾನುಕ್ರಮಣಿಕೆ


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1. | ವಿಷಯ ಪ್ರವೇಶನ | 1–8 |
| 2. | ವಂಶಪರಿಚಯ | 8–11 |
| 3. | ಜನನ ಮತ್ತು ಬಾಲ್ಯ | 11–16 |
| 4. | ಪ್ರಾಥಮಿಕ ವಿದ್ಯಾರ್ಜನೆ ಮತ್ತು ವಿವಾಹ | 16–20 |
| 5. | ಆಕಸ್ಮಿಕ ಆಘಾತ ಮತ್ತು ಅನಂತರ ವಿದ್ಯಾರ್ಜನೆ | 21–25 |
| 6. | ಕೀರ್ತಿವಿಸ್ತೃತಿ | 25–30 |
| 7. | ಗದ್ವಾಲದಲ್ಲಿ ವಿದ್ವಸ್ಸಭೆ | 31–36 |
| 8. | ಭಾಗ್ಯನಗರಕ್ಕೆ ಬೇಟಿ | 36–42 |
| 9. | ಭಾಗ್ಯನಗರದಲ್ಲಿ ಸ್ಮರಣೀಯ ಘಟನೆಗಳು | 42–47 |
| 10. | ಗೋದಾವರೀ–ಕೃಷ್ಣಾ ತೀರಗಳಲ್ಲಿ ವಾಸ | 47–52 |
| 11. | ಆಶ್ರಮ ಪೂರ್ವದಲ್ಲಿ ಅತಿಥಿಸತ್ಕಾರ | 52–53 |
| 12. | ಶ್ರೀ ನಿವಾಸಾಚಾರ್ಯರು–ಶ್ರೀಪಾದಂಗಳವರಾದರು | 54–57 |
| 13. | ಶ್ರೀ ೧೦೦೮ಲ ಶ್ರೀಸತ್ಯಪರಾಕ್ರಮರ ದಿಗ್ವಿಜಯಸಂಚಾರ | 57–87 |
| 14. | ಉಪಸಂಹಾರ | 88–89 |
| 15. | ಪ್ರಮೇಯಮಾಲಾ ಪರಿಶಿಷ್ಟ–೧ | 90–104 |
| | ಶ್ರೀಸತ್ಯವ್ರತತೀರ್ಥ ಸ್ತೋತ್ರ ಪರಿಶಿಷ್ಟ–೨ | 105–106 |
| | ಶ್ರೀಸತ್ಯಪರಾಕ್ರಮಗುರು ಸ್ತೋತ್ರ ಪರಿಶಿಷ್ಟ–೩ | 107–115 |
| | ಶ್ರೀಸತ್ಯಪರಾಕ್ರಮತೀರ್ಥ ಸ್ತೋತ್ರ ಪರಿಶಿಷ್ಟ–೪ | 116–117 |
| | ಶ್ರೀಸತ್ಯಪರಾಕ್ರಮರಸ್ತುತಿ ರೂಪಪದಗಳು ಪರಿಶಿಷ್ಟ–೫ | 118–119 |
| | ವಂಶಜರ ಪರಿಚಯ ಪರಿಶಿಷ್ಟ–೬ | 119–120 |

|| श्रीगुरुराजोविजयते । हरिः ॐ ||

|| श्रीमद्धनुमभीममध्वान्तर्गत श्रीरामकृष्णवेदव्यासात्मक श्रीलक्ष್ಮीहयग्रीवायनमः ||

# ಶ್ರೀಮತ್ಸತ್ಯಪರಾಕ್ರಮತೀರ್ಥ - ವೈಭವ

## (1872 - 1879AD)

## ವಿಷಯಪ್ರವೇಶನ-೧

ಪ್ರವಾಸಿಯೊಬ್ಬರು ಯಾವದಾದರೊಂದು ನಿರ್ದಿಷ್ಟ ಸ್ಥಳವನ್ನು ತಲುಪುವ ಉದ್ದೇಶವನ್ನಿಟ್ಟುಕೊಂಡು ಒಂದು ಮಾರ್ಗದಲ್ಲಿ ಗಮನ ಮಾಡಬೇಕಾದರೆ ಪ್ರವಾಸಿಗೆ ಮಾರ್ಗದ ಪರಿಚಯು ಮತ್ತು ದಾರಿಯುದ್ದಕ್ಕೂ ಬೆಳಕು ಇವುಗಳ ಅವಶ್ಯಕತೆ ಇದೆ. ಮಾರ್ಗ ಬಹಳ ದೀರ್ಘವಿದ್ದರೆ ಮಾರ್ಗದಲ್ಲಿ ಅನೇಕ ಸ್ಥಳಗಳಲ್ಲಿ ಮಾರ್ಗದರ್ಶನದ/ಮಾರ್ಗದರ್ಶಕರ ಅವಶ್ಯಕತೆ ಇರುತ್ತದೆ. ಹಾಗೆಯೇ ಒಂದೇ ಬೆಳಕಿನಿಂದ ಸಮಗ್ರಮಾರ್ಗದ ಉದ್ದಕ್ಕೂ ಬೆಳಕು ಸಾಲದೇ ಇದ್ದರೆ ಮಾರ್ಗದುದ್ದಕ್ಕೂ ಕೆಲ ಅಂತರಗಳಲ್ಲಿ ಬೆಳಕು ಬೇಕಾಗುತ್ತದೆ. ಇದರಂತೆಯೇ ಇದೆ ಮೋಕ್ಷ ಮಾರ್ಗದಲ್ಲಿ ಗಮನವೂ ಸಹ. ಮುಮುಕ್ಷುಗಳು ಮೋಕ್ಷ ಮಾರ್ಗದಲ್ಲಿ ಗಮನಮಾಡಬೇಕಾದರೆ ಅರ್ಥಾತ್ ಸಾಧನ ಮಾಡಬೇಕಾದರೆ ಮಾರ್ಗದರ್ಶನ/ಮಾರ್ಗದರ್ಶಕರು ಮತ್ತು ಬೆಳಕು ಬೇಕಾಗುತ್ತದೆ. ಇಲ್ಲಿ ಮಾರ್ಗದರ್ಶನಕ್ಕಾಗಿ ನಕ್ಷೆ, ಕೈಮರಗಳ ಸಹಾಯ ಅಥವಾ ಆಧುನಿಕ ಉಪಕರಣಗಳ ಸಹಾಯಾದಿಗಳಿಂದ ಕಾರ್ಯಸಾಧಿಸಲಾಗದು. ಹಾಗೆಯೇ ಬೆಳಕಿಗಾಗಿ ಎಣ್ಣೆಯ ದೀವಟಿಗೆಗಳಾಗಲಿ, ಸೂರ್ಯ ಚಂದ್ರನ ಬೆಳಕಾಗಲಿ

ಅಥವಾ ವಿದ್ಯುದ್ದೀಪಗಳಾಗಲಿ ಪ್ರಯೋಜನಕ್ಕೆ ಬರುವದಿಲ್ಲ. ಮೋಕ್ಷ ಮಾರ್ಗದಲ್ಲಿ ಮಾತ್ರ ಗಮನ ಮಾಡಬೇಕಾದರೆ ಅಥವಾ ಸಾಧನ ಮಾಡ ಬೇಕಾದರೆ ಇಲ್ಲಿ ಮಾರ್ಗದರ್ಶಕರು ಯಾರೆಂದರೆ ಆಧ್ಯಾತ್ಮ ಕ್ಷೇತ್ರದಲ್ಲಿ ನೈಪುಣ್ಯತೆ ಪಡೆದವರು ಅರ್ಥಾತ್ ಸಮರ್ಥಗುರುಗಳ ಅವಶ್ಯಕತೆ ಇದೆ. ಅದೇ ರೀತಿ ಈ ಮಾರ್ಗದಲ್ಲಿ ದೀಪ/ಬೆಳಕು ಎಂದರೆ ಅಧ್ಯಾತ್ಮ ಜ್ಞಾನದೀಪ. "ಜ್ಞಾನದೀಪೇನ ಭಾಸ್ವತಾಃ" ಅಂದರೆ, ಗುರುಗಳು ಮತ್ತು ಅವರಿಂದುಪದಿಷ್ಟ ವಾದ ಅಧ್ಯಾತ್ಮ/ಬ್ರಹ್ಮಜ್ಞಾನ ಇವುಗಳ ಸಹಾಯದಿಂದ ಮೋಕ್ಷ ಮಾರ್ಗದಲ್ಲಿ ಗಮನ ಸಾಧ್ಯ.

ಈ ಮೋಕ್ಷ ಮಾರ್ಗ ಪ್ರದರ್ಶಕರದು ಒಂದು ಭವ್ಯಪರಂಪರೆ ಇದೆ. ಈ ಪರಂಪರೆಯಲ್ಲಿ ತರತಮಾನುಸಾರವಾಗಿ ಚತುರ್ಮುಖ ಬ್ರಹ್ಮದೇವರೇ ಸರ್ವೋತ್ಕೃಷ್ಟ ಗುರುಗಳು. ಶ್ರೀಪತಿಯೇ ನಮಗೆ ಪರದೈವ. ಇವರ ಸಾಕ್ಷಾತ್ಕಾರಕ್ಕೇನೇ ನಮಗೆ ಬೇಕಾದ್ದು ಗುರೂಪದೇಶ. ಆಚಾರ್ಯರೆಂದರೆ ಜ್ಞಾನೋಪದೇಶಕರು. ಇವರ ಪರಂಪರೆಯಲ್ಲಿ ಬ್ರಹ್ಮದೇವರಿಗೆ ಸಮಾನರಾದ ವಾಯುದೇವರು ನಮಗೆ ಶಾಸ್ತ್ರೋಪದೇಶಕರಾಗಿ ಭೂಲೋಕದಲ್ಲಿ ನಮಗೆ ಬರತಕ್ಕ ಸಕಲ ಜನ್ಮಗಳಲ್ಲಿಯೂ ಇರಲಿ.

**ಬ್ರಹ್ಮಾಂತಾ ಗುರವಃಸಾಕ್ಷಾದಿಷ್ಟಂದೈವಂಶ್ರಿಯಃಪತಿಃ ।**
**ಆಚಾರ್ಯಾಃ ಶ್ರೀಮದಾಚಾರ್ಯಾ ಸಂತುಮೇಜನ್ಮಜನ್ಮನಿ ॥**

ಎಂಬುದಾಗಿ ಮುಮುಕ್ಷು ಜೀವರುಗಳ ನಿತ್ಯ ಪ್ರಾರ್ಥನೆ. ಈ ಶ್ಲೋಕದ ಉತ್ತರಾರ್ಧವು ವಾಯುದೇವರ ತೃತೀಯಾವತಾರದ ಮಹತ್ವವನ್ನು ಸ್ಪಷ್ಟ ಪಡಿಸುತ್ತದೆ.

ಅಲ್ಲರೀ, ದೇವನಾಗಲಿ, ದೇವತೆಗಳಾಗಲಿ ಭೂಲೋಕದಲ್ಲಿ ಸುಮ್ಮನೆ ಅವತರಿಸುವದಿಲ್ಲ. ಒಂದಲ್ಲ ಹಲವು ಮಹತ್ಕಾರ್ಯಗಳನ್ನು ಸಜ್ಜನರಿಗಾಗಿ ಸಾಧಿಸುವದಕ್ಕೋಸ್ಕರ ಲೋಕಹಿತಕ್ಕಾಗಿ ದರಾತಳಕ್ಕಿಳಿಯುತ್ತಾರೆ. ಪ್ರಕೃತ ಶ್ರೀಮನ್ಮಧ್ವಾಚಾರ್ಯರದು ಈ ಕಲಿಯುಗದಲ್ಲಿ ವಾಯುದೇವರ ತೃತೀಯಾವ ತಾರವೆಂದು ಪ್ರಸಿದ್ಧಿ. ಅವರ ಅವತಾರಕ್ಕೆ ಕಾರಣವೇನು ? ಅವರು ಸಾಧಿಸಿದ

ಮಹತ್ಕಾರ್ಯವೇನು ? ಮುಮುಕ್ಷುಗಳ ಮೋಕ್ಷ ಮಾರ್ಗದಲ್ಲಿ ಹೇಗೆ ಪ್ರಕಾಶವನ್ನು ಬೆಳಗಿದ್ದಾರೆ ? ಅವರೇ ನಮಗೆ ಪ್ರತಿಜನ್ಮದಲ್ಲಿ ಗುರುಗಳಾಗಿರಬೇಕೆಂಬ ಅವರ ಅನುಯಾಯಿಗಳ ಮಹದಾಶಯಕ್ಕೆ ಕಾರಣವೇನು ? ಇವೆಲ್ಲಕ್ಕೂ ಉತ್ತರ ಬ್ರಹ್ಮಸೂತ್ರಭಾಷ್ಯ ಮತ್ತು ಅನುವ್ಯಾಖ್ಯಾನಗಳ ಅವತಾರಿಕೆಯಲ್ಲಿಯೇ ದೊರೆಯುತ್ತದೆ.

ಅವತಾರದ ಹಿನ್ನೆಲೆಯ ವಿವರವನ್ನು ಜ್ಞಾನಿಗಳು ವರ್ಣಿಸಿದ ರೀತಿಯಲ್ಲಿ ತಿಳಿಯುವಾ. ಗೌತಮ ಋಷಿಗಳ ಶಾಪದಿಂದ ಜ್ಞಾನವು ವಿಲುಳಿತವಾಗಿ ಉಪದೇಶಕರ ಪರಂಪರಾವಿಚ್ಛಿನ್ನವಾಯಿತು. ಅಜ್ಞಾನವು ಆವರಿಸಿತು. ಕಾಲಾಂತರದಲ್ಲಿ ಇದನ್ನು ನಿವಾರಿಸಲು ಶ್ರೀಮನ್ನಾರಾಯಣನು ವ್ಯಾಸತ್ವೇನ ಅವತರಿಸಿ ವೇದ ವಿಭಾಗ ಮಾಡಿದನು. ಅಷ್ಟಾದಶ ಪುರಾಣಗಳನ್ನು ಮತ್ತು ಉಪಪುರಾಣಗಳನ್ನೂ, ಭಾರತಾದಿ ಇತಿಹಾಸಾದಿಗಳನ್ನೂ ಮತ್ತು ಬ್ರಹ್ಮಸೂತ್ರಗಳನ್ನೂ ಜೀವರುಗಳ ನಿಶ್ರೇಯಸಿಗಾಗಿ ರಚಿಸಿದರು. ಪ್ರಥಮತಃ ಅವುಗಳನ್ನು ಬ್ರಹ್ಮವಾಯುದೇವತೆಗಳಿಗೆ ಉಪದೇಶಿಸಿದರು. ನಂತರ ವೈಶಂಪಾಯನ ಜೈಮಿನಿ, ಪೈಲಾದಿ ಋಷಿಗಳಿಗೂ ಉಪದೇಶಿಸಿದರು. ಧರ್ಮ ಸ್ಥಾಪನೆ ಗುರು ಶಿಷ್ಯ ಪರಂಪರೆಗಳು ಸ್ಥಾಪಿತವಾದವು. ಬರಬರುತ್ತ ಯುಗಭೇದದಿಂದ ಕಲಿಯುಗದಲ್ಲಿ ವೇದಗಳಿಗೂ, ಉಪನಿಷತ್ತುಗಳಿಗೂ ಮತ್ತು ವ್ಯಾಸನಿರ್ಮಿತ. ಬ್ರಹ್ಮಸೂತ್ರ, ಭಗವದ್ಗೀತೆ ಮುಂತಾದ ಶಾಸ್ತ್ರಗಳಿಗೆ ಅನೇಕ ಸಮಯಕಾರರು/ಮತ ಪ್ರವರ್ತಕರು ವ್ಯಾಖ್ಯಾನಗಳನ್ನು ಬರೆದರು. ಇನ್ನು ಕೆಲವರು ಇವುಗಳ ಅವಲಂಬನವಿಲ್ಲದ ಸ್ವತಂತ್ರ (ಪ್ರಜ್ಞಾವಾದೋತ್ಥಿತ) ಸಮಯಗಳನ್ನೂ ನಿರ್ಮಿಸಿದರು. ಈ ಸಮಯಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯ ಮತ್ತು ವಿರೋಧಗಳಿದ್ದವು. ಪ್ರಸ್ಥಾನತ್ರಯಗಳ (ಸೂತ್ರ, ಗೀತಾ, ಉಪನಿಷತ್ತುಗಳ) ಮೇಲೆ ನಿರ್ಮಿತವಾದ ವ್ಯಾಖ್ಯಾನಗಳಲ್ಲಿ ಏಕಾಭಿಪ್ರಾಯವಿಲ್ಲದಿರುವದಲ್ಲದೇ ವಿರೋಧಗಳೂ ಕಂಡು ಬಂದವು. ಇವರೆಲ್ಲರೂ ಭಾಷ್ಯಕಾರರೇ. ಹನ್ನೆರಡನೆಯ ಶತಮಾನದ ಕೊನೆಯುವರೆಗೆ ಇಪ್ಪತ್ತೊಂದು ಭಾಷ್ಯಗಳು ರಚಿತವಾಗಿದ್ದವು. "ಅಥಾವಿದ್ಯಾಪಟಲಪಿಹಿತನಯನೈಃ ಅನ್ಯೈಃ ಅನ್ಯಥಾವ್ಯಾಖ್ಯಾತೈಃ........" ಯಾಕೆ ಹೀಗಾಯಿತೆಂದರೆ ಇವರೆಲ್ಲರ ಜ್ಞಾನದೃಷ್ಟಿಗೆ ಅವಿದ್ಯೆಯ ಪೊರೆ

ಇರುವದರಿಂದ ಇವರ ವ್ಯಾಖ್ಯಾನವು ಅನ್ಯಥಾ ಅಗಿವೆ. ಆದರೆ ಈ ಭಾಷ್ಯಗಳೆಲ್ಲ ಶ್ರೀವೇದವ್ಯಾಸರ ಅಭಿಪ್ರಾಯಕ್ಕಿಂತ ಅತ್ಯಂತ ಭಿನ್ನವಾಗಿಯೂ, ವಿರೋಧವಾಗಿಯೂ ಮತ್ತು ಅಯಥಾರ್ಥವಾಗಿಯೂ ಇದ್ದುದರಿಂದ, ಶ್ರೀವ್ಯಾಸರು ಸಜ್ಜನೋದ್ಧಾರಕ್ಕಾಗಿ ಗ್ರಂಥಗಳನ್ನು ರಚಿಸಿದಾಗ್ಯೂ ಯೋಗ್ಯ ಅಧಿಕಾರಿಗಳಿಗೆ ಅವುಗಳಿಂದ ಪ್ರಯೋಜನವಾಗದಂತೆ ಸಮೀಚೀನ/ಯಥಾರ್ಥ ಜ್ಞಾನ ಪ್ರಾಪ್ತಿಗೆ ಪ್ರತಿಬಂಧಕವಾದ್ದರಿಂದ, ಗ್ರಂಥಗಳನ್ನು ರಚಿಸಿದರೂ ರಚಿಸದಂತೆಯೇ ಆಯಿತು.

ಮುಮುಕ್ಷುಗಳಿಗೆ ಕಲಿಪ್ರಾಬಲ್ಯದಿಂದಲೂ ಮತ್ತು ಈ ಮತ ಪ್ರವರ್ತಕರ ವಿರೋಧ ಬರಹಗಳಿಂದಲೂ ಯಥಾರ್ಥಜ್ಞಾನಲಾಭವಿಲ್ಲದಂತಾಯಿತು. ಈ ಗ್ರಂಥಗಳಲ್ಲಿ ಬಂದ ಸಂದೇಹ, ವಿರೋಧ, ಆಪಾತರಮಣೀಯತೆ, ಅಯಥಾರ್ಥ ಬೋಧಕ ವಿಷಯಗಳನ್ನು ಸರಿಪಡಿಸುವರಾರು. ಹೀಗೆಯೇ ಕಳೆಯಿತು ಕಾಲ. ಅಸಮಂಜಸ ಗುರುಗಳು ಅಯಥಾರ್ಥ ಉಪದೇಶ.

ಹೀಗೆಲ್ಲ ವೈಪರೀತ್ಯ ಸ್ಥಿತಿ ಉಂಟಾಗಿದ್ದರೂ, ಶ್ರೀಹರಿಯು ಮತ್ತು ದೇವತೆಗಳ ಸಜ್ಜನರ ಮೇಲಿನ ಅನುಕಂಪದಿಂದ, ದೇವಸಭೆಯಲ್ಲಿ ಮುಮುಕ್ಷುಗಳಿಗೆ ಯಥಾರ್ಥ/ಮೋಕ್ಷ ಸಾಧನೀಭೂತವಾದ ಜ್ಞಾನದ ಕೊರತೆ ಮತ್ತು ಅದನ್ನು ನೀಗಿಸುವ ಅವಶ್ಯಕತೆಯನ್ನರಿತು, ಅದನ್ನು ಒದಗಿಸುವ ನಿರ್ಧಾರಕ್ಕೆ ಬಂದರು. ಆದರೆ ಆ ಕೆಲಸ ನಿರ್ವಹಿಸುವರಾರು ?

ಪರಮಾತ್ಮನು ಮೂರು ಯುಗದಲ್ಲಿ ಮಾತ್ರ ಅವತಾರ ಮಾಡುವದರಿಂದ ಅವನಿಗೆ "ತ್ರಿಯುಗಹೂತಿ" ಎಂದು ವೇದ ಪ್ರಸಿದ್ಧ ನಾಮ.

ಅಲ್ಲರೀ, ಯಾವವಾದರೂ ಮೂರು ನಿರ್ದಿಷ್ಟಯುಗಗಳೋ ಅಥವಾ ಅನಿರ್ದಿಷ್ಟ ಯುಗಗಳೊ, ಎಂದರೆ—ಪರಮಾತ್ಮನದು ಕಲಿಯುಗದಲ್ಲಿ ಮಾತ್ರ ಅವತಾರವಿಲ್ಲ. ಉಳಿದ ಮೂರು ಯುಗಗಳಲ್ಲಿ ನಿಯಮೇನ ಅವತಾರಗಳುಂಟು. ಈ ವಿಷಯ ಪುರಾಣ ಪ್ರಸಿದ್ಧ.

ಏನ್ರೀ, ಕೃಷ್ಣಪರಮಾತ್ಮನೇ ಘೋಷಿಸಿದ್ದಾನೆ "ಸಂಭವಾಮಿಯುಗೇ ಯುಗೇ" ಎಂದು. ಈ ಕೆಳಗಿನ ಭಗವದ್ಗೀತೆಯ ಶ್ಲೋಕಗಳನ್ನು ನೋಡಿರಿ.

**ಯದಾಯದಾಹಿ ಧರ್ಮಸ್ಯಗ್ಲಾನಿರ್ಭವತಿಭಾರತ ।**
**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂಸೃಜಾಮ್ಯಹಂ ॥**
**ಪರಿತ್ರಾಣಾಯಸಾಧೂನಾಂ ವಿನಾಶಾಯಚದುಷ್ಕೃತಾಂ ।**
**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿಯುಗೇಯುಗೇ ॥**

॥ ಭ. ಗೀತಾ ॥

ಗೀತೆಯ ಈ ವಚನವು ಪರಮಾತ್ಮನ ಆಶ್ವಾಸನವಲ್ಲವೇ. ನಾಲ್ಕು ಯುಗಗಳಲ್ಲಿ, ಉಳಿದ ಮೂರು ಯುಗಗಳಿಗಿಂತಲೂ ಕಲಿಯುಗದಲ್ಲಿಯೇ ಧರ್ಮಗ್ಲಾನಿ ಹೆಚ್ಚು. ಅಂಥದರಲ್ಲಿ ಕಲಿಯುಗದಲ್ಲಿಯೇ ಏಕೆ ಅವತಾರವಿಲ್ಲ. ಎಂದರೆ, ಈ ಶ್ಲೋಕಗಳನ್ನು ಶ್ರೀಮಧ್ವ ಭಾಷ್ಯದ ವಿವರಣೆಯೊಂದಿಗೆ ನೋಡಿ ಸಂದೇಹ ಪರಿಹಾರ ಮಾಡಿಕೊಳ್ಳಬೇಕು. ಅವರ ವಿವರಣೆ ಹೀಗಿದೆ.

**"ನ ಜನ್ಮನೈವ ಪರಿತ್ರಾಣಾದಿಕಂ ಕಾರ್ಯಮಿತಿ ನಿಯಮಃ । ತಥಾಪಿ ಲೀಲಯಾಸ್ವಭಾವೇನಚಯಥೇಷ್ಟಚಾರೀ ॥" ತಥಾಹ್ಯುಕ್ತಂ "ದೇವಸ್ಯೈಷಸ್ವಭಾವೋಽಯಂ", "ಲೋಕವತ್ತುಲೀಲಾಕೈವಲ್ಯಂ" ॥**

॥ ಗೀತಾಭಾಷ್ಯ ॥

**"ಜನ್ಮನಾವಿನಾಪಿ ಕರ್ತುಂ ಸಮರ್ಥತ್ವಾದಿತಿ ಭಾವಃ" ॥**

॥ ಪ್ರಮೇಯದೀಪಿಕಾ ॥

"ಯದಾಯದಾಹಿ" ಎಂಬದು ಸಾಮಾನ್ಯೋಕ್ತಿ. "ತ್ರಿಯುಗಹೋತಿ" ಎಂಬದು ಉತ್ಸರ್ಗ. ಅವತಾರವಿಲ್ಲದೆಯೂ ಸಹ ತಾನು ಮಾಡತಕ್ಕಕಾರ್ಯಗಳನ್ನು ನಿರ್ವಹಿಸಬಲ್ಲನು. ಬೇಕಾದರೆ ತನ್ನ ಸಮರ್ಥಭೃತ್ಯರನ್ನು ಕಳುಹಿಸುತ್ತಾನೆ. ಇವೆಲ್ಲವೂ ಅವನ ಸ್ವೇಚ್ಛಾವ್ಯಾಪಾರ. ಈ ರೀತಿ ಪರಮಾತ್ಮನಿಗೆ ಅನೇಕ ಮಾರ್ಗಗಳಿವೆ.

ಪ್ರಕೃತ ಈ ಕಲಿಯುಗದಲ್ಲಿಯೂ ಅಂಥದೊಂದು ಸಂದರ್ಭ ಪ್ರಾಪ್ತವಾಯಿತು. ವೇದ, ಉಪನಿಷತ್, ಬ್ರಹ್ಮಸೂತ್ರ, ಭಾರತ, ಭಾಗವತ ಇತ್ಯಾದಿ ಶಾಸ್ತ್ರಗ್ರಂಥಗಳಿಗೆ ಅನೇಕ ಮತ ಪ್ರವರ್ತಕರು ಅನೇಕ ರೀತಿ ವ್ಯಾಖ್ಯಾನಗಳನ್ನು ರಚಿಸಿದರು. ಮುಮುಕ್ಷುಗಳು ಸಂಶಯಗ್ರಸ್ಥರಾದರು. ಯಾವದು ತತ್ವ ? ಯಾವದು ಯಥಾರ್ಥ ಯಾವದು ಅಯಥಾರ್ಥ? ಯಾವ

ಮಾರ್ಗವನ್ನವಲಂಬಿಸಿದರೆ ಮೋಕ್ಷಲಭ್ಯ ? ಯಾವ ಮಾರ್ಗವು ತ್ಯಾಜ್ಯ ಇದನ್ನು ನಿರ್ಧರಿಸುವ ಬಗೆ ಹೇಗೆ ? ಈ ಸಜ್ಜನರ ಸಮಸ್ಯೆಗಳು ಬಗೆಹರಿಯಲೇ ಇಲ್ಲ.

ಆಗ ದೇವತೆಗಳಿಂದ ಪ್ರಾರ್ಥಿತನಾದ ಪರಮಾತ್ಮನು (ತನ್ನ ಅವತಾರ ಪ್ರಸಕ್ತಿ ಇಲ್ಲದ್ದರಿಂದ)ವಾಯುದೇವರ ಕಡೆಗೆ ಮಂದಹಾಸದಿಂದ ನೋಡಿದನು. "ಸ್ಮೇರಾನನೋಭುವನ ಜೀವನ ಮಾಬಭಾಷೆ." ॥ ಸುಮಧ್ವವಿಜಯ ॥ ವಾಯುದೇವರು ಪರಮಾತ್ಮನ ಅಭಿಪ್ರಾಯವನ್ನು ತಿಳಿದವರಾಗಿ, ಆತನ ಆಜ್ಞೆಯನ್ನು ಶಿರಸಾವಹಿಸಿ ದೇವತೆಗಳಿಂದ ಪ್ರಾರ್ಥಿತರಾಗಿ ಪಾಜಕ ಕ್ಷೇತ್ರದಲ್ಲಿ (ಪರಶುರಾಮ ಕ್ಷೇತ್ರದಲ್ಲಿ) ಅವತರಿಸಿದರು. ಅವರ ಮೊದಲಿನ ಹೆಸರು ವಾಸುದೇವ. ಶೈಶವ, ಬಾಲ್ಯಾವಸ್ಥೆಯಿಂದಲೂ ಅನೇಕ ಅದ್ಭುತ ಮತ್ತು ಆಶ್ಚರ್ಯಕರವಾದ ಲೀಲೆಗಳನ್ನು ತೋರಿಸುವವರಾಗಿ, ಗುರುಕುಲವಾಸಾ ನಂತರ ನೈಜ ವೈರಾಗ್ಯ ಹೊಂದಿ ಅವರು ಸನ್ಯಾಸವನ್ನು ಸ್ವೀಕಾರಮಾಡಿದರು. ಮೊದಲು ಕೆಲವು ದಿನಗಳು ಅವರು ಪರಕೀಯಶಾಸ್ತ್ರಗಳನ್ನೇ ಅಧ್ಯಯನ ಮಾಡಿದರು. ಅವುಗಳಲ್ಲಿರತಕ್ಕ ದೋಷಗಳನ್ನು ಎಲ್ಲ ಸಭೆಯಲ್ಲಿಯೂ ಎತ್ತಿ ತೋರಿದರು. ಯಥಾರ್ಥವಾದ ಇನ್ನೊಂದು ವ್ಯಾಖ್ಯಾನದ ಅವಶ್ಯಕತೆ ಇದೆ ಎಂದು ಸಜ್ಜನರಿಗೆ ಮನದಟ್ಟಾದ ಮೇಲೆ ಅವರಿಂದ ಪ್ರಾರ್ಥಿತರಾಗಿ ತಾವು ಸ್ವತಃ ಗೀತಾಭಾಷ್ಯ ಗ್ರಂಥವನ್ನು ರಚನೆಮಾಡಿದರು. ನಂತರ ಶ್ರೀನಾರಾಯಣ ದೇವರ ದರ್ಶನವನ್ನು ಬದರಿಯಲ್ಲಿ ಪಡೆದು ಅವರಿಗೆ ಗೀತಾ ಭಾಷ್ಯಗ್ರಂಥವನ್ನು ಸಮರ್ಪಿಸಿದರು. ಇದಾದ ಮೇಲೆ ಶ್ರೀ ಬಾದರಾಯಣರ ದರ್ಶನ ಪಡೆದು ಕೊಂಡು ಸೂತ್ರ ಭಾಷ್ಯಾದಿ ಒಟ್ಟು ಮೂವತ್ತೇಳುಗ್ರಂಥಗಳನ್ನು ರಚನೆ ಮಾಡಿದರು. ಇವೆಲ್ಲವೂ ನಿರ್ಣಯಗ್ರಂಥಗಳೇ, ಪರಮತಗಳಲ್ಲಿಯ ದೋಷೋ ತ್ಥಾಪನೆಮಾಡಿ ಅವುಗಳನ್ನು ನಿರಾಕರಣೆ ಮಾಡಿ ಯಥಾರ್ಥ ಮತ್ತು ನಿಶ್ಚಿತ ಜ್ಞಾನ ಸಾಧನೆಯನ್ನು ಮಾಡಿಕೊಟ್ಟಿದ್ದಾರೆ. ಈ ಗ್ರಂಥಗಳು ಲೋಕದಲ್ಲಿ ಸರ್ವಮೂಲವೆಂದು ಪ್ರಸಿದ್ಧಿ ಇವೆ. ಗ್ರಂಥಗಳ ಅಂತ್ಯದಲ್ಲಿ ತಾವು ವಾಯು ದೇವರ ತೃತೀಯ ಅವತಾರರೆಂದು(ಮಧ್ವೋಯತ್ತು ತೃತೀಯಮೇತದಮುನಾ ಗ್ರಂಥಃ ಕೃತಃ ಕೇಶವೇ) ಘೋಷಿಸಿದರು. ಅವತಾರ ಕಾರ್ಯಾನಂತರ ದೇವತೆ ಗಳ ಪ್ರಾರ್ಥನೆಯಂತೆ, ಉಡುಪಿಯಲ್ಲಿ ಪುಷ್ಪರಾಶಿಯಲ್ಲಿ ಅದೃಶ್ಯರಾದರು.

ಬದರಿಕಾಶ್ರಮಕ್ಕೆ ತೆರಳಿ ಅಲ್ಲಿಯೇ ಈಗಲೂ ವೇದವ್ಯಾಸದೇವರ ಸನ್ನಿಧಿಯಲ್ಲಿರುವರೆಂದು ಪ್ರತೀತಿ. ಅವರು ಪಾರ್ಥಿವ ಶರೀರ ಬಿಡಲಿಲ್ಲ. ಆದ್ದರಿಂದ ಅವರ ಬೃಂದವನಗಳಾಗಲಿ ಇತರ ಅವಶೇಷಗಳಾಗಲಿ ಇರಲು ಅವಕಾಶವಿಲ್ಲ. ಆದರೆ ಪ್ರಾಜ್ಞರ ಮತದಂತೆ ಇವರ ಸನ್ನಿಧಾನವು ಮೂರು ಸ್ಥಳಗಳಲ್ಲಿರುತ್ತದೆ. ಮೊದಲನೆಯದು ಉಡುಪಿ ಶ್ರೀಕೃಷ್ಣಕ್ಷೇತ್ರದಲ್ಲಿ; ಎರಡನೆಯದು ಬದರಿಕಾಶ್ರಮ ಬಾದರಾಯಣರ ಸನಿಹದಲ್ಲಿ; ಮೂರನೆಯದು ಅವರು ರಚಿಸಿದ ಭಾಷ್ಯಾದಿ ಗ್ರಂಥಗಳಲ್ಲಿ.

ಇವರ ಅವತಾರ ಪರಿಸಮಾಪ್ತಿಯಾದ ಮೇಲೆ ಅಚಿರಕಾಲದಲ್ಲಿಯೇ ಅನೇಕದೇವತೆಗಳು ಆನಂದ ತೀರ್ಥರ ಶಾಸ್ತ್ರಗಳಿಗೆ ವ್ಯಾಖ್ಯಾನ ರೂಪವಾದ ವಾಙ್ಮಯ ಸೇವೆಯನ್ನು ಮಾಡಿದರು. ಆ ದೇವತೆಗಳೆಲ್ಲರಿಗೂ ತಮ್ಮ ಸ್ವರೂಪವನ್ನು ತಿಳಿಸದಿರಲು ಆಜ್ಞೆ. ಅಂತೆಯೇ ಅವರು ಸ್ವತಃ ತಿಳಿಸಲಿಲ್ಲ. ಬೇರೆ ಜ್ಞಾನಿಗಳು ತಿಳಿಸಿದರು. ಇಂದ್ರಾದಿ ದೇವತೆಗಳ ತಂಡವೇ ಧರಾತಳಕ್ಕಿಳಿದರು. ಮೊದಲು ಮೂಲಗ್ರಂಥಗಳಿಗೆ ವ್ಯಾಖ್ಯಾನ ಟೀಕಾಗಳು ರಚನೆಯಾದವು. ನಂತರ ಬಂದ ದೇವತೆಗಳು ಟಿಪ್ಪಣಿ ಗ್ರಂಥಗಳನ್ನು ರಚಿಸಿದರು. ಇನ್ನು ಕೆಲವರು ಅವತಾರೀ ಪುರುಷರು ಈ ಟೀಕಾ ಟಿಪ್ಪಣಿ ಗ್ರಂಥಗಳನ್ನಿಟ್ಟುಕೊಂಡು ಪಾಠ, ಪ್ರವಚನ ಮಾಡಿ ಸತ್ಸಂಪ್ರದಾಯ ಪ್ರವರ್ತಕರಾದರು. ಟೀಕಾ ಟಿಪ್ಪಣಿಗಳಲ್ಲಿರತಕ್ಕ ಗೂಢ ವಿಷಯಗಳನ್ನು ಶಿಷ್ಯರಿಗೆ ಬೋಧಿಸುವದರ ಮೂಲಕ ಗ್ರಂಥಗಳ ಹಿರಿಮೆಯನ್ನು ಸ್ಥಿರಪಡಿಸಿದರು. ಇದರಲ್ಲಿ ಅನೇಕರು ಶ್ರೀಮನ್ಮಧ್ವ ಜ್ಞಾನ ಪೀಠವನ್ನು ಯತಿಗಳಾಗಿ ಅಲಂಕರಿಸಿದರು.

ಇಂಥ ಭವ್ಯ ಪರಂಪರೆಯಲ್ಲಿ ಸತ್ಸಂಪ್ರದಾಯದಲ್ಲಿ, ಸನಾತನಧರ್ಮದ ಕಟ್ಟೆನಲ್ಲಿ ಶ್ರೀಮನ್ಮಧ್ವರಮೂಲಜ್ಞಾನಪೀಠವನ್ನು ಅಲಂಕರಿಸಿದ (ಉತ್ತರಾದಿ ಮಠದ ಶ್ರೇಣಿಯಲ್ಲಿ) ಮೂವತ್ತ ನಾಲ್ಕನೆಯ (೩೪) ಯತಿವರೇಣ್ಯರು ಪ್ರಾತಃಸ್ಮರಣೀಯರಾದ ಶ್ರೀ ೧೦೦೮ ಶ್ರೀ ಸತ್ಯಪರಾಕ್ರಮ ತೀರ್ಥರು. ಇವರ ಆಶ್ರಮನಾಮಧೇಯವು ಕೇವಲ ಸಾಂಕೇತಿಕವಲ್ಲ. ಅದು ಅನ್ವರ್ಥಕ. ಇವರು ಬಾಲಕರಾಗಿದ್ದಾಗ ಮತ್ತು ಗ್ರಹಸ್ಥಾಶ್ರಮಿಗಳಾಗಿದ್ದಾಗ ಇವರ ವಿದ್ಯಾಪರಾಕ್ರಮವನ್ನು ನೋಡಿ ಆಶ್ಚರ್ಯಪಡದ ವ್ಯಕ್ತಿಗಳೇ ಇಲ್ಲ. ಇವರ ಜೀವನದಲ್ಲಿ

ಅನೇಕ ಅಪೂರ್ವ ಘಟನೆಗಳಿವೆ. ಅಸಾಧಾರಣ ಹಿರಿಮೆಗಳು, ಉಜ್ವಲ ಪಾಂಡಿತ್ಯದ ಪ್ರಖರ ಸನ್ನಿವೇಶಗಳು, ಭಗವಂತನ ಅನುಗ್ರಹ ವಿಶೇಷಗಳೂ ನಿಬಿಡವಾಗಿ ತುಂಬಿವೆ. "ಮನೋವಿ ಶುದ್ಧ್ಯೈ ಚರಿತಾನುವಾದಃ" ಸುಮಧ್ವ ವಿಜಯ. ಮನಸಿನ ಮಾಲಿನ್ಯವನ್ನು ಪರಿಹಾರ ಮಾಡಿ ಶುದ್ಧೀಕರಣ ಮಾಡು ತ್ತದೆ, ಶ್ರೀ ಮಧ್ವಪೀಠಸ್ಥ ಈ ಯತಿಗಳ ಚರಿತ್ರೆ.

ಯಥಾರ್ಥವೆಂದು ನಮಗೆ ಶ್ರೀಹರಿವಾಯುಗಳು ತಿಳಿಸಿದಷ್ಟನ್ನು ಯಥಾಮತಿ ಯಥಾಶಕ್ತಿ ವರ್ಣಿಸಲು ಪ್ರಯತ್ನಮಾಡುವೆವು.

## ವಂಶಪರಿಚಯ-೨

ಶ್ರೀಮನ್ಮಧ್ವಪೀಠದಲ್ಲಿ ಬಂದ ಯತಿವರೇಣ್ಯರನ್ನು ಸ್ಮರಣೆ ಮಾಡುವಾಗ ಸುಮಧ್ವವಿಜಯದ ಕೆಲವು ವಾಕ್ಯಗಳು ಇವರೆಲ್ಲರಿಗೂ ಯಥೋಚಿತವಾಗಿ ಅನ್ವಯಿಸುತ್ತವೆ ಇಂಥಮಹನೀಯರ ಚರಿತಾನುವಾದ, ಶ್ರವಣಮನನಾದಿ ಗಳಿಂದ ಪ್ರಯೋಜನವೇನು ಎಂಬ ಪ್ರಶ್ನೆಗಳಿಗೆ ಸುಮಧ್ವವಿಜಯವೇ ಉತ್ತರ ವೀಯುತ್ತದೆ. "ಮುಕುಂದ ಭಕ್ತ್ಯೈಗುರುಭಕ್ತಿಜಾಯೈ", "ಗುರುಗಳಲ್ಲಿ ಉತ್ಪನ್ನವಾಗುವ ಭಕ್ತಿಯೇ ಮುಕುಂದನಲ್ಲಿ ಭಕ್ತಿಗೆ ಕಾರಣವಾಗುತ್ತದೆ".

"ಮನೋವಿಶುಧ್ಯೈ ಚರಿತಾನುವಾದಃ", ಮಹಾತ್ಮರ ಚರಿತ್ರೆಯಿಂದ ಮನಃಶುದ್ಧೀಕರಣವೇ ಉದ್ದೇಶ.

"ಗಮನಾಸನ ಸನ್ಕಥಾದಿ ಲೀಲಾಸ್ಮೃತಿಮಾತ್ರಾತ್ ಭವತಾಪವರ್ಗ- ದಾತ್ರೀ" ಇಲ್ಲಿ ಬಂದರು ಅಲ್ಲಿಗೆ ಹೋದರು ಇತ್ಯಾದಿ ಸತ್ಕಥೆಗಳು ಭವತಾಪ ಗಳನ್ನು ನೀಗಿಸಿ ಪಾರಲೌಕಿಕ ಉತ್ತಮಫಲಗಳನ್ನು ಕೊಡುತ್ತವೆ.

"ಭುವನಾದ್ಭುತಮಧ್ವಚೇಷ್ಟಿತಂನವದೇಮಾಪಿಸುರಾಯುಷಾವಯಂ" ಅದ್ಭುತ ಆಶ್ಚರ್ಯಕರವಾದ ಗುರುಗಳ ಚರಿತ್ರೆಯನ್ನು ಸುರಾಯುಷವನ್ನು ಪಡೆದರೂ ಹೇಳಿ ಮುಗಿಸಲಾರೆವು. ಇತ್ಯಾದಿ ಸುವಾಕ್ಯಗಳ ಹಿನ್ನೆಲೆಯಲ್ಲಿ ಶ್ರೀ ಸತ್ಯಪರಾಕ್ರಮ ತೀರ್ಥರ ಚರಿತೆಯನ್ನು ತಿಳಿಸುವಾ

ಈ ಮನೆತನದ ಮೂಲ ಪುರುಷರು ಮಹಾರಾಷ್ಟ್ರ ಪ್ರಾಂತದ ಸತಾರಾ ಜಿಲ್ಲೆಯ ವಾಯಿಎಂಬ ಊರಿನವರು. ಈ ಊರು ಅಂಥ ದೊಡ್ಡಶಹರವೂ ಅಲ್ಲ. ಅಥವಾ ಚಿಕ್ಕ ಹಳ್ಳಿಯೂ ಅಲ್ಲ. ಮಧ್ಯವರ್ತಿಯ ಊರು. ಸ್ವಲ್ಪ ಉನ್ನತ ಪ್ರದೇಶದಲ್ಲಿದೆ. ಉತ್ತಮ ವಾತಾವರಣವನ್ನು ಹೊಂದಿದೆ. ಇಲ್ಲಿ ಜನಿಸಿದ ಅನೇಕ ವ್ಯಕ್ತಿಗಳು ಬಹಳ ಖ್ಯಾತಿವಂತರೂ ಮತ್ತು ಬುದ್ಧಿವಂತರೆಂದೂ ಪರಿಗಣಿಸಿದ್ದಾರೆ. ಈ ಊರಿನಿಂದ ಬಂದವರಿಗೆ ಊರಿನ ಹೆಸರೇ ಮನೆತನದ ಹೆಸರಾಯಿತು. ಪ್ರಕೃತ ಈ ಗ್ರಂಥಕ್ಕೆ ವಿಷಯೀಭೂತರಾದ ವ್ಯಕ್ತಿಗಳ ಮನೆತನವೂ 'ವಾಯಿ'ಯವರ ವಂಶವೆಂದೇ ಪ್ರಸಿದ್ಧಿ.

ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ವಾಯಿಯಲ್ಲಿ ಜನಾರ್ದನಾಚಾರ್ಯ/ವಿಟ್ಠಲಾಚಾರ್ಯರೆಂಬ ವಿಪ್ರೋತ್ತಮರಿದ್ದರು. ಇವರು ಧರ್ಮಶಾಸ್ತ್ರಗಳಲ್ಲಿಯೂ ಮತ್ತು ಮಧ್ವಶಾಸ್ತ್ರದಲ್ಲಿಯೂ ಪಾರಂಗತರಿದ್ದರು. ಇವರನ್ನು ಆಗಾಗ್ಗೆ ಪೇಶ್ವೆಯವರ ಆಸ್ಥಾನಕ್ಕೆ (ದರ್ಬಾರಿಗೆ) ಕರೆಸಿಕೊಳ್ಳುತ್ತಿದ್ದರು. ನ್ಯಾಯಾಲಯಗಳಲ್ಲಿಯೂ ಸಹ ಈ ಧರ್ಮಜ್ಞಾನಿಗಳ ಅವಶ್ಯಕತೆ ಇತ್ತು. ಈಗಿನಂತೆ ಕಾನೂನು ಗ್ರಂಥಗಳು ತಯಾರಾಗಿರಲಿಲ್ಲ. ಧರ್ಮಶಾಸ್ತ್ರದ ಕಟ್ಟಳೆಗಳೇ ನ್ಯಾಯಾಲಯದ ತೀರ್ಪಿಗೆ ಆಧಾರಗಳಾಗಿದ್ದವು. ಈ ಕಾರಣಗಳಿಂದ ಇವರು ಆಗಾಗ್ಗೆ ಪುಣೆ ನಗರಕ್ಕೆ ಭೇಟಿಕೊಡುತ್ತಿದ್ದರು. ನ್ಯಾಯಾಲಯಗಳಲ್ಲಿ, ನ್ಯಾಯಾನ್ಯಾಯಗಳ ನಿರ್ಣಯಗಳನ್ನು ಇವರ ಸಲಹೆಯ ಮೇರೆಗೆ ನಿರ್ಣಯಮಾಡುತ್ತಿದ್ದರು. ಹೀಗೆ ಸನಾತನಧರ್ಮದ ಸಂಪ್ರದಾಯವನ್ನು ಅನುಸರಿಸಿ ಲೌಕಿಕ-ಧಾರ್ಮಿಕ ಜೀವನವನ್ನು ನಡೆಸುತ್ತಿದ್ದರು. ಇವರದು ಉತ್ತರಾದಿಮಠ ಅಲ್ಲಿಯೇ ವಿಶೇಷದೀಕ್ಷೆ. ಇದಲ್ಲದೇ ಇವರು ಸೋದೆ ಶ್ರೀವಾದಿರಾಜರಲ್ಲಿಯೂ ಸಹ ಭಕ್ತ್ಯಾದರ ಉಳ್ಳವರಿದ್ದರು.

ಇವರಿಗೆ ಶ್ರೀ ಪಾಂಡುರಂಗಾಚಾರ್ಯರೆಂಬ ಒಬ್ಬ ಸತ್ಪುತ್ರರಿದ್ದರು. ತಮ್ಮ ಹಿರಿಯರಂತೆ ಇವರೂ ಕೂಡ ಧರ್ಮಶಾಸ್ತ್ರ, ನ್ಯಾಯಶಾಸ್ತ್ರ ಮತ್ತು ಮಧ್ವಶಾಸ್ತ್ರಗಳಲ್ಲಿ ಪ್ರವೀಣರಾಗಿದ್ದರು. ಕಾಲಕ್ರಮೇಣ ಕೆಲವು ಸಾಮಾಜಿಕ, ಧಾರ್ಮಿಕ, ಮತ್ತು ರಾಜಕೀಯ ವಿಪ್ಲವಗಳಿಂದಲೂ ಮತ್ತು ಪೇಶ್ವೆಯವರ ಆಡಳಿತ ಕೊನೆಗೆ ಬಂದ ಮೇಲೆ ಅನಿವಾರ್ಯವಾದ ಪರಧರ್ಮೀಯರ ಉಪಟಳ

ದಿಂದಲೂ, ಶ್ರೀ ಪಾಂಡುರಂಗಾಚಾರ್ಯರು ವಾಯಿಯನ್ನು ತೊರೆದು ದಕ್ಷಿಣ ದಿಕ್ಕಿಗೆ ಪ್ರಯಾಣಮಾಡಿ ಗದುಗಿಗೆ ಬಂದು ತಲುಪಿದರು. ಅಲ್ಲಿ ಶ್ರೀಮಧ್ವರ ಅನುಯಾಯಿಗಳು ವಿಶೇಷ ಸಂಖ್ಯೆಯಲ್ಲಿದ್ದದ್ದು ಕಂಡರು. ಶ್ರೀ **ವೀರನಾರಾಯಣನ** ಸನ್ನಿಧಿಯೂ ಮನಸ್ಸಿಗೆ ಪ್ರಸನ್ನತೆಯನ್ನೂ ಶಾಂತಿಯನ್ನೂ ತಂದುಕೊಟ್ಟಿತು. ಸನಿಹದಲ್ಲಿಯೇ ವಾಸಮಾಡಲು ಉಪಕ್ರಮಿಸಿದರು. ಕೇವಲ ಸ್ವಲ್ಪದಿನಗಳಲ್ಲಿಯೇ ಇವರವಿದ್ವತ್ತು ತಿಳಿದು ಶಾಸ್ತ್ರ ಪಾಠ ಪ್ರವಚನಗಳು ಪ್ರಾರಂಭವಾದವು. ಶಿಷ್ಯರೂ ಅಧಿಕ ಸಂಖ್ಯೆಯಲ್ಲಿ ಬರತೊಡಗಿದರು. ಇವರಿಗೆ ವಿವಾಹನಂತರ ಕೆಲವು ವರ್ಷಗಳು ಸಂತಾನಪ್ರಾಪ್ತಿಯಾಗಿರಲಿಲ್ಲ. ಶ್ರೀವೀರನಾರಾಯಣದೇವರ ನಿರಂತರ ಸೇವೆಯಿಂದ ಹನ್ನೆರಡು ವರ್ಷದ ನಂತರ ಶ್ರೀಹರಿ ಪ್ರಸನ್ನತೆಯ ಪ್ರಸಾದವೆನ್ನುವಂತೆ ಪುತ್ರರತ್ನ ಒಂದನ್ನು ಪಡೆದರು. ಆ ಶಿಶುವಿಗೆ ಬಾಳಾಚಾರ್ಯನೆಂದು ಹೆಸರಿಟ್ಟರು. ನಂತರ ದ್ವಿತೀಯಪುತ್ರ ನರಸಿಂಹಾಚಾರ್ಯರು.

ಶ್ರೀಪಾಂಡುರಂಗಾಚಾರ್ಯರಲ್ಲಿ ಚಿರಕಾಲ ಪಾಠಪ್ರವಚನ ಪ್ರಯೋಜನ ಹೊಂದಿದ ಶ್ರೀಮಂತ ಶಿಷ್ಯರು ಗುರುದಕ್ಷಿಣಾರೂಪವಾಗಿ ಮತ್ತು ದಾನಧರ್ಮ ರೀತಿಯಲ್ಲಿ ಅವರಿಗೆ ಮರಡೂರು ಗ್ರಾಮದಲ್ಲಿ ವಿಶಾಲವಾದ ಒಂದು ಮನೆ, ಆ ಊರ ಸುತ್ತ-ಮುತ್ತ ಜಮೀನುಗಳನ್ನು ದಾನವಾಗಿ ಕೊಟ್ಟರು. ಇವೆಲ್ಲವೂ ವರದಾನದಿಯ ತೀರದಲ್ಲಿದ್ದದ್ದು ಒಂದು ವಿಶೇಷಗುಣವನ್ನು ಹೊಂದಿದ್ದವು.

ಶ್ರೀ ಪಾಂಡುರಂಗಾಚಾರ್ಯರ ಮನೆಯೇ ಗುರುಕುಲವಾದ್ದರಿಂದಲೂ ಮತ್ತು ಅಲ್ಲಿ ಉದ್ಗ್ರಂಥಗಳ ಅಧ್ಯಯನಕ್ಕೆ ಅವಕಾಶವಿದ್ದುದರಿಂದಲೂ ಬಾಲಕರಾದ ಬಾಳಾಚಾರ್ಯರಿಗೆ, ಅಧ್ಯಯನಕ್ಕಾಗಿ ಅನ್ಯತ್ರ ಹೋಗತಕ್ಕ ಅವಶ್ಯಕತೆಯೇ ಬಿಳಲಿಲ್ಲ. ಅವರು ೧೮-೨೦ ವಯಸ್ಸಿನೊಳಗೆ ಪ್ರೌಢ ಉನ್ನತ ವ್ಯಾಸಂಗವನ್ನು ಮುಗಿಸಿ ಉತ್ತಮ ವಿದ್ವಾಂಸರಾದರು. "ಕ್ಷಣಶಃ ಕಣಶಃ ಶ್ಚೈವ ವಿದ್ಯಾಮರ್ಥಂಚ ಸಾಧಯೇತ್" ಎಂಬ ಸುಭಾಷಿತೋಕ್ತಿಯಂತೆ ಇವರು ಕಾಲವನ್ನು ವ್ಯರ್ಥ ಮಾಡದೆ ಅಧಿಕ ವಿದ್ಯೆಯನ್ನು ಸಂಪಾದಿಸಿ ಚತುಶ್ಶಾಸ್ತ್ರ ಪಂಡಿತರೆನಿಸಿಕೊಂಡರು. ಜ್ಯೋತಿಷ್ಯ ಶಾಸ್ತ್ರದಲ್ಲಿಯೂ ಇವರು ಸಾಕಷ್ಟು ಪರಿಣತಿಯನ್ನು ಹೊಂದಿದ್ದರು.

ಬಾಳಾಚಾರ್ಯರು ಪ್ರೌಢವಯಸ್ಕರಾದಾಗ ಅವರಿಗೆ ಶ್ರೀಮತಿ ಗೋದಾಬಾಯಿ ಎಂಬ ಕನ್ನೆಯೊಡನೆ ವಿವಾಹವಾಯಿತು. ಶ್ರೀಪಾಂಡುರಂಗಾಚಾರ್ಯರ ಕಾಲದಲ್ಲಿ ಮರಡೂರಲ್ಲಿ ಕೆಲವು ಅಸ್ತಿಸ್ವಾಸ್ತಿಗಳು ಸಂಪಾದನೆಯಾಗಿದ್ದವು. ಅವರು ಯಾತ್ರೆ ಮಾಡಿದ ನಂತರ ಶ್ರೀ ಬಾಳಾಚಾರ್ಯರು ಪೂರ್ಣವಾಗಿ ಮರಡೂರವಾಸಿಗಳೇ ಆಗಿ ಬಿಟ್ಟರು ಮತ್ತು ಅಲ್ಲಿಯೇ ಅಭಿವೃದ್ಧಿ ಹೊಂದಿದರು.

## ಜನನ ಮತ್ತು ಬಾಲ್ಯ—೩

ಶ್ರೀ ಬಾಳಾಚಾರ್ಯರು ವಾಸಿಸುತ್ತಿದ್ದ ಮರಡೂರು ಗ್ರಾಮವು ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನಲ್ಲಿ ವರದಾನದಿಯ ತೀರದಲ್ಲಿದೆ. ಈ ಊರಿಗೆ ಸನಿಹದಲ್ಲಿ ಸವಣೂರು ಶ್ರೀಸತ್ಯಬೋಧರ ಸನ್ನಿಧಾನವಿದೆ. ಅನತಿ ದೂರದಲ್ಲಿ ವರದಾ ತೀರದಲ್ಲಿಯೇ ಹೊಸರಿತ್ತಿ ಧೀರೇಂದ್ರರ ಸನ್ನಿಧಾನವೂ ಇದೆ.

ಪೂರ್ವಿಕರು ನದೀ ತೀರವನ್ನರಸಿ ಅಲ್ಲಿಯೇ ನೆಲೆಸುತ್ತಿದ್ದರು. ನಮ್ಮ ಸನಾತನ ಧರ್ಮಕ್ಕೂ ನೀರಿಗೂ ನಿಕಟ ಸಂಬಂಧವಿದೆ. ದ್ವಿಜವರ್ಗದ ಸಕಲ ಕರ್ಮಗಳೂ ಪ್ರಾತಃ ಸ್ನಾನ ಸಂಧ್ಯಾದಿಗಳಿಂದಲೇ ಪ್ರಾರಂಭಿಸುತ್ತವೆ. ದೇವತಾರ್ಚನೆಗೆ ನದಿಯ ನೀರು ಪ್ರಶಸ್ತ, ಕುಡಿಯುವದಕ್ಕೆ ಸಿಹಿ ಮತ್ತು ಆರೋಗ್ಯ. ನೈರ್ಮಲ್ಯತೆಗೂ ನೀರಿಗೂ ಹಾಗೆಯೇ ಸನಿಹಸಂಬಂಧ. ನದಿಯಲ್ಲಿ ಸ್ನಾನವು ಮನಸ್ಸಿಗೆ ಉಲ್ಲಾಸವನ್ನು ತರುತ್ತದೆ. ಪಾವಿತ್ರ್ಯವೂ ಅಧಿಕ. ನರ, ಮೃಗ, ಪಶು ಮತ್ತು ಪಕ್ಷಿಗಳಗಳಿಗೆ ಉತ್ತಮ ಜಲಾಶಯಗಳನ್ನು ನೋಡಿದಾಗ ವಿಚಿತ್ರ ಆನಂದವಾಗುತ್ತದೆ. ವರದಾ ನದಿಯು ಬಹಳ ದೊಡ್ಡ ಪಾತಳಿಯ ನದಿಯಲ್ಲ; ವರ್ಷವೆಲ್ಲ ನೀರು ಹರಿಯುತ್ತದೆ. ಮಹಾಪೂರ ಬಂದಾಗ ರಭಸ ಹೆಚ್ಚು. ನದಿಯಲ್ಲಿ ಆರು ತಿಂಗಳು ನೀರು ಹೆಚ್ಚು, ಆರು ತಿಂಗಳು ಕಡಿಮೆ. ಈ ಪ್ರದೇಶಕ್ಕೆ ಬೈಲು ಸೀಮೆ ಎನುತ್ತಾರೆ. ಭೂಮಿ ಕಪ್ಪು

(Black Cotton soil)ಅನಾದ್ರ ಹವಾಮಾನ. ನದಿಯ ದಡದ ಉದ್ದಕ್ಕೂ ತೋಟಪಟ್ಟಿಗಳಿವೆ. ಪಚ್ಚೆಹಸಿರು ಸಸ್ಯಗಳೂ ವೃಕ್ಷಗಳೂ ಪಸರಿಸಿವೆ. ವೃಕ್ಷಗಳು ಬಳ್ಳಿಗಳು ಫಲಭರಿತವಾಗಿವೆ. ಮಾನವರಿಗೆ ಮತ್ತು ವೃಕ್ಷವಾಸಿ ಜೀವಿಗಳಿಗೆ ಪ್ರಕೃತಿ ಮಾತೆಯ ಯೋಗಕ್ಷೇಮವಿದು. ಸ್ವಲ್ಪ ಉನ್ನತ ಸ್ಥಳದಲ್ಲಿ ನಿಂತು ನೋಡಿದರೆ ನಿಸರ್ಗಮಾತೆಯು ಹಸಿರು ಸೀರೆಯನ್ನುಟ್ಟು ಹಳದಿಕುಪ್ಪಸ ತೊಟ್ಟಿರುವಳೋ ಎಂಬಂತೆ ಶೋಭಾಯಮಾನವಾಗಿದೆ. ವರದೆಯು ಕೂಡಲ ಸಂಗಮದಲ್ಲಿ ತುಂಗಭದ್ರೆಯನ್ನು ಸೇರಿ ಮುಂದೆ ಸಾಗುತ್ತಾಳೆ.

ನದಿಯ ದಡದಲ್ಲಿ ಅನತಿ ದೂರದಲ್ಲಿಯೇ ಬಾಳಾಚಾರ್ಯರ ವಿಶಾಲವಾದ ಮನೆ ವಿರಾಜಿಸುತ್ತಿದೆ. ಬಾಳಾಚಾರ್ಯರು ವೇದ, ವೇದಾಂತ ಚತುಶ್ಯಾಸ್ತ್ರ ಪಂಡಿತರೆಂದು ಖ್ಯಾತಿ ಪಡೆದಿದ್ದರು. ಅನೇಕ ಸ್ಥಳಗಳಿಂದ ವಿದ್ಯಾರ್ಜನೆಗಾಗಿ ವಿದ್ಯಾರ್ಥಿಗಳು ಬರುತ್ತಿದ್ದರು. ವಿದ್ಯಾರ್ಥಿಗಳಿಗೆಲ್ಲ ಶುಲ್ಕ ಶೂನ್ಯ ಭೋಜನ ವಸತಿಗಳು ಮತ್ತು ವಿದ್ಯಾಲಾಭ ದೊರೆಯುತ್ತಿತ್ತು. ಸುಮಾರು ಐವತ್ತು-ಅರವತ್ತು ವಿದ್ಯಾರ್ಥಿಗಳು ಮನೆಯಲ್ಲಿರುತ್ತಿದ್ದರು. ಗೃಹವೇ ಗುರುಕುಲವಾಗಿತ್ತು. ಇದೇ ವಿದ್ಯಾಕ್ಷೇಂದ್ರ ಪ್ರಾರಂಭ ದೆಶೆಯಲ್ಲಿದ್ದ ವಿದ್ಯಾರ್ಥಿಗಳೂ ಮತ್ತು ಕ್ರೋಡಪತ್ರ-ಸುಧಾದಿ ಉದ್ಗ್ರಂಥ ಓದತಕ್ಕ ಪ್ರೌಢವಿದ್ಯಾರ್ಥಿಗಳೂ ಇದ್ದರು. ವಿದ್ಯೆದಾನವೆಂದರೆ ಇದೇ. ಯಾಕೆಂದರೆ ಇದು ಸಾಮಾನ್ಯ ವಿದ್ಯೆಯಲ್ಲ. ಇದು ಅಧ್ಯಾತ್ಮ ವಿದ್ಯೆ ಅಥವಾ ಬ್ರಹ್ಮವಿದ್ಯೆ. ಎಲ್ಲ ವಿದ್ಯೆಗಳಲ್ಲಿಯೂ ಶ್ರೇಷ್ಠತೆ ಪಡೆದ ವಿದ್ಯೆ ಇದು. "ಅಧ್ಯಾತ್ಮ ವಿದ್ಯಾ-ವಿದ್ಯಾನಾಂ" ಎಂದು ಈ ವಿದ್ಯೆಯ ಉನ್ನತ ಸ್ಥಾನವನ್ನು ಗೀತೆಯೇ ಸಾರಿದೆ. ಈ ಗುರುಕುಲ ಸನ್ನಿವೇಶದ ಕಾಲವು ಹತ್ತೊಂಬತ್ತನೆಯ ಶತಮಾನದ ಆದಿಭಾಗವಾದರೂ ಉಪನಿಷತ್‌ಕಾಲವನ್ನು ಸ್ಮರಣೆಗೆ ತಂದುಕೊಡುತ್ತಿತ್ತು.

ನದೀ ದಡದಲ್ಲಿರುವ ಈ ಗುರುಕುಲದಲ್ಲಿ ಗಂಗಾಪ್ರವಾಹದಂತೆ ಶ್ರೀಬಾಳಾಚಾರ್ಯವಾಣಿಯು ಪ್ರವಹಿಸುತ್ತಿದ್ದರೆ, ಅದರ ಕೆಳಭಾಗದಲ್ಲಿ ವರದಾನದಿಯು ಭಿನ್ನಭಿನ್ನ ಪ್ರವಾಹ ಗಾತ್ರದಿಂದ, ವಿವಿಧ ಶಬ್ದ ವಿನ್ಯಾಸಗಳೊಡನೆ ಮಂಜುಳವಾಗಿ ಹರಿಯುತ್ತಿದ್ದಾಳೆ. ಇತ್ತ ಗುರುಕುಲದಲ್ಲಿ ಬಾಳಾರ್ಯರು ಬ್ರಹ್ಮ ಸೂತ್ರ ಪ್ರಥಮಾಧ್ಯಾಯ ಪಾಠದಲ್ಲಿ ಸರ್ವವರ್ಣಾತ್ಮಕ

ಶಬ್ದಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಿದರೆ, ಅತ್ತೆವರದೆಯು ನಾದ, ಘೋಷಾದಿ ಸರ್ವಧ್ವನ್ಯಾತ್ಮಕ ಶಬ್ದಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡವಳೇನೋ ಎನ್ನುವಂತಿತ್ತು. ಯಾಕೆಂದರೆ ಸರ್ವವರ್ಣಾತ್ಮಕ ಧ್ವನ್ಯಾತ್ಮಕ ಶಬ್ದಗಳು ವಿಷ್ಣುವಿನಲ್ಲಿ ಸಮನ್ವಯವಾಗುತ್ತವೆ. ಹಾಗೆಯೇ ಇಲ್ಲಿ ಸೂತ್ರದ ಕೊನೆಯ ಅಧ್ಯಾಯದಲ್ಲಿಯೂ ಸಾಮ್ಯವನ್ನು ಕಾಣುತ್ತೇವೆ. ಇತ್ತ ಗುರುಕುಲದಲ್ಲಿ ಚತುರ್ಥಾಧ್ಯಾಯ, ದ್ವಿತೀಯಪಾದ ದೇವಲಯ ಉತ್ಕ್ರಾಂತಿ ಪಾದವನ್ನು ವರ್ಣಿಸುತ್ತಿದ್ದರೆ ಅತ್ತೆ ವರದೆ ಅನ್ನುತ್ತಾಳೆ. "ಗುರುಗಳೇ ಈ ಭಾಗವನ್ನು ವಿವರಿಸುವಾಗ ನನ್ನ ಉದಾಹರಣೆಯನ್ನೇ ತೆಗೆದು ಕೊಳ್ಳಿರಿ" ಎನ್ನುವಂತಿತ್ತು. ಯಾಕಂದರೆ "ನಾನು ನನ್ನ ಕಿಂತ ಹಿರಿಯಳಾದ ತುಂಗಭದ್ರೆಯಲ್ಲಿ (ಕೂಡಲಸಂಗಮದಲ್ಲಿ)ಲಯ ಹೊಂದುವೆನು. (ದೇಹಲಯ). ತುಂಗಭದ್ರೆಯು (ನನ್ನೊಡನೆ) ಕೃಷ್ಣೆಯಲ್ಲಿ ಲಯ ಹೊಂದುವಳು. ಕೃಷ್ಣೆಯು (ನಮ್ಮಿಬ್ಬರೊಡನೆ) ಸಿಂಧುರಾಜನಲ್ಲಿ ಲಯ". ಇದೇ ಪ್ರಕಾರವಿದೆ ದೇವತಾಲಯವುಕೂಡ. ಗುರುಗಳಿಂದ ಉಪದಿಷ್ಟವಾದ ಪಾಠ ನದೀದೇವತೆಯಿಂದ ಮೌನವಾಗಿಯೇ ಸ್ಪಷ್ಟೀಕರಣವಾಗುತ್ತಿತ್ತು.

ಗುರುಕುಲದಲ್ಲಿ ವಿದ್ಯಾರ್ಜನೆಯು ಅವಿರತವಾಗಿ ನಡೆಯುತ್ತಿತ್ತು. ವಿರಾಮಕಾಲವೆಂದು ಪ್ರತ್ಯೇಕ ರಜಾದಿನಗಳಿರಲಿಲ್ಲ. ಏಕೆಂದರೆ ವಕ್ತ್ರಾನುಕೂಲ್ಯ ಶ್ರೋತ್ರಾನುಕೂಲ್ಯಗಳು ಎಷ್ಟರ ಮಟ್ಟಿಗೆ ಅನುಕೂಲವಾಗಿದ್ದವೆಂದರೆ ವಿರಾಮ ಪ್ರಸಂಗಕ್ಕೆ ಅನುಕೂಲವಿಲ್ಲದಂತಾಯಿತು. ಅಂದರೆ ಪ್ರಸಂಗಾನುಕೂಲ್ಯ ಸದಾಕಾಲದಲ್ಲಿ ಸಮಗ್ರವಾಗಿತ್ತು.

ಬಾಳಾಚಾರ್ಯ ದಂಪತಿಗಳು ಗುರುಕುಲದ ಕಾರ್ಯಕ್ರಮಗಳಲ್ಲಿ, ಗೋವುಗಳ ರಕ್ಷಣೆಯಲ್ಲಿ, ಜಮೀನುಗಳ ಮೇಲೆ ಮೇಲ್ವಿಚಾರಣೆಯಲ್ಲಿ ಬಂದ ಬೆಳೆಗಳ ಉಚಿತ ಸದ್ವಿನಿಯೋಗದಲ್ಲಿ ಇತ್ಯಾದಿ ನಿರಂತರ ಕೆಲಸಗಳಲ್ಲಿ ಸಮೃದ್ಧಿ ವಾತಾವರಣದಲ್ಲಿ ಸಂತಾನ ಪ್ರಾಪ್ತಿಯ ವಿಳಂಬವು ಅವರನ್ನು ಚಿಂತೆಗೀಡು ಮಾಡಿರಲಿಲ್ಲ. ಅಂಥ ಚಿಂತೆಯೊಂದು ಪ್ರಾರಂಭವಾಗುವ ಮೊದಲೇ ಘಟನೆಯೊಂದು ನಡೆಯಿತು.

ಒಂದು ದಿನ ಬಾಳಾಚಾರ್ಯರು ಪ್ರಾತಃಕಾಲ ಶಿಷ್ಯರಿಗೆ ಪಾಠ ಹೇಳುತ್ತಿದ್ದ ಸಮಯದಲ್ಲಿ, ಸುಮಾರು ಹತ್ತು ಗಂಟೆಗೆ ಬ್ರಾಹ್ಮಣರೊಬ್ಬರು ಹೆಗಲಿಗೆ ಹಸಿವಿ ಹಾಕಿ ಕೊಂಡು ಇವರ ಮನೆಯಲ್ಲಿ ಕೇಳುತ್ತ ವಿಚಾರಿಸುತ್ತ ಇಣಿಕಿ ನೋಡಿ ; ಒಳಗೆ ಹೋಗಿ ಕುಳಿತರು. ಸ್ವಲ್ಪ ಹೊತ್ತು ಇದ್ದು ಪಾಠ ಕೇಳಿ ಸ್ವಲ್ಪವೂ ಸದ್ದು ಮಾಡದಂತೆ ಎದ್ದು ಹಸಿವಿ ಹೆಗಲಿಗೆ ಹಾಕಿಕೊಂಡು ಹೊರಟರು. ಇದನ್ನು ನೋಡಿ ಚಕಿತರಾದ ಬಾಳಾರ್ಯರು ಶಿಷ್ಯರ ಮೂಲಕ ಇಲ್ಲಿಯೇ ತೀರ್ಥಪ್ರಸಾದ ಸ್ವೀಕಾರ ಮಾಡಿಕೊಂಡು ಹೋಗಬೇಕೆಂದು ಹೇಳಿ ಕಳುಹಿಸಿದರು. ಈ ಆಹ್ವಾನಕ್ಕೆ ಆ ವಿಪ್ರರು ಹೇಳಿದ್ದೇನೆಂದರೆ, “ಆಚಾರ್ಯರು ಮನೆತನ ಸಂಪ್ರದಾಯಸ್ಥರೂ, ವಿದ್ವಾಂಸರೂ ಮತ್ತು ನಿಯಮಿಷ್ಟರೂ ಇದ್ದಂತೆ ಕಾಣುತ್ತದೆ. ಆದರೆ ನಮ್ಮದು ಸ್ವಂತ ನೈವೇದ್ಯನಿಯಮವಿದೆ.” ಪ್ರಾಯಶಃ ಇಲ್ಲಿ ಅವಕಾಶವಿರಲಾರದೆಂದು ತಿಳಿದು ನಾವು ಅನ್ಯತ್ರ ಹೊರಟಿದ್ದೇವೆ. ಎಂದು ಹೇಳಿ ಕಳುಹಿಸಿದರು. ಶಿಷ್ಯರು ಹೋಗಿ ಗುರುಗಳಿಗೆ ಹೇಳಿದೊಡನೆಯೇ, ಬಾಳಾರ್ಯರು ಅನ್ಯವಿಚಾರ ಮಾಡದೇ, ಅವರ ನಿಯಮದಂತೆಯೇ ಆಗಲಿ. ನಮಗೆ ಯಾವ ತರಹದ ಅಭ್ಯಂತರವೂ ಇಲ್ಲ. ಮಧ್ಯಾಹ್ನ ಬಂದ ಅತಿಥಿಗಳನ್ನು ಹಾಗೆಯೇ ಕಳಿಸುವದು ಉಚಿತವಲ್ಲ. ವಿನಯದಿಂದ ಪ್ರಾರ್ಥಿಸಿ ಕರೆದುಕೊಂಡು ಬನ್ನಿರೆಂದು ಪುನಃ ಶಿಷ್ಯರ ಮೂಲಕ ಹೇಳಿಕಳುಹಿಸಿದರು. ಆಚಾರ್ಯರ ಪುನಃ ಪ್ರಾರ್ಥನೆಯನ್ನು ಅಂಗೀಕಾರ ಮಾಡಿ ಬ್ರಾಹ್ಮಣರು ಮನೆಗೆ ಬಂದರು. ಕುಶಲ ಪ್ರಶ್ನೆಗಳಾದವು. ಆದರೋಪಚಾರಗಳಾದವು. ತದ ನಂತರ ಸ್ನಾನ ದೇವತಾರ್ಚನೆ ಆಗಬೇಕೆಂದು ವಿಪ್ರರಿಗೆ ತಿಳಿಸಿದರು. ಅದರಂತೆ ಅವರ ಸ್ನಾನಾಹ್ನಿಕ ದೇವತಾರ್ಚನೆಗಳು ಮುಗಿದವು ನೈವೇದ್ಯವನ್ನು ಅವರೇ ಮಾಡಿದರು. ಅತಿಥಿಗಳು, ಆಚಾರ್ಯರು ಮತ್ತು ಶಿಷ್ಯರು ಆನಂದದಿಂದ ಭೋಜನ ಮಾಡಿದರು. ಭೋಜನಾನಂತರ ಆತಿಥ್ಯದಿಂದ ಸಂತುಷ್ಟರಾದ ಬ್ರಾಹ್ಮಣರು ತಮ್ಮ ಪೂಜೆಯ ನಿರ್ಮಾಲ್ಯ ತುಳಸಿ, ಹೂವು ಫಲಮಂತ್ರಾಕ್ಷತೆಗಳನ್ನು ಬಾಳಾಚಾರ್ಯರ ಕೈಯಲ್ಲಿಟ್ಟು “ಆಚಾರ್ಯರೇ ನಿಮಗೆ ಶೀಘ್ರದಲ್ಲಿ ಒಬ್ಬ ದೇವಾಂಶ ಕುಮಾರನು ಉದಯಿಸುವನು. ಅಲ್ಲದೇ ಇನ್ನಿಬ್ಬರು ದೊಡ್ಡವರು ಅವತರಿಸುವರು. ನಿಮ್ಮಿಂದ ಏಳು ತಲೆಯುವರೆಗೂ ನಿಮ್ಮ ವಂಶೀಯರಿಗೆ ಅನ್ನವಸ್ತ್ರಾದಿಗಳಿಗೆ ತಾಪತ್ರಯವೇ

ಇರುವುದಿಲ್ಲ. ಈ ನಮ್ಮ ಅನುಗ್ರಹವು ನಿಮಗೆ ಯಾವಾಗಲೂ ಜ್ಞಾಪಕವಿರುವಂತೆ ಒಂದು ಸಂಕೇತ ಮಾಡುತ್ತೇವೆಂದು ಹೇಳಿ ಶ್ರೀ ಬಾಳಾಚಾರ್ಯರ ಯಜ್ಞೋಪವೀತಕ್ಕೆ ಒಂದು ಗಂಟು ಹಾಕಿ ಪ್ರಯಾಣಕ್ಕೆ ಸಿದ್ಧರಾದರು."

ಸ್ವಾಮೀ, ತಮ್ಮದು ಯಾವ ಊರು ? ತಮ್ಮ ನಾಮಧೇಯವೇನು ? ದಯವಿಟ್ಟು ತಿಳಿಸಬೇಕೆಂದು ಬಾಳಾರ್ಯರು ಕೇಳಲು, ಆ ಬ್ರಾಹ್ಮಣರು ನಸು ನಕ್ಕು "ಆಚಾರ್ಯರೇ ನಮ್ಮದು ಶ್ರೀ ಮುಷ್ಣ" ಎಂದಿಷ್ಟೇ ಹೇಳಿ ಸ್ವಲ್ಪದೂರ ಹೋಗಿ ಅದೃಶ್ಯರಾಗಿಬಿಟ್ಟರು. ಈ ಆಶ್ಚರ್ಯವನ್ನು ಕಂಡು ಬಂದವರು ಯಾವ ಮಹಾನುಭಾವರೊ, ಯಾವ ದೇವಾಂಶರೊ ತಿಳಿಯೆವು. ಅಪ್ರಾರ್ಥಿತರಾಗಿ ಆಗಮಿಸಿ ನಮ್ಮ ಮೇಲೆ ಅನುಗ್ರಹಿಸಿದರು. ಒಂದು ವೇಳೆ ನಾವು ನಮ್ಮ ನೈವೇದ್ಯ ಇತ್ಯಾದಿಗಳಿಗೆ ಆಗ್ರಹಮಾಡಿದ್ದರೆ ಅದೆಂಥ ಅಪರಾಧವಾಗುತ್ತಿತ್ತೋ ಎಂದು ಆಚಾರ್ಯರು ಶಿಷ್ಯರ ಮುಂದೆ ಉದ್ಗಾರ ತೆಗೆದರು. ಆ ಘಟನೆ ಬಾಳಾರ್ಯರಿಗೆ ಪರಮಸಂತೋಷವನ್ನುಂಟು ಮಾಡಿತು.

ಈ ಸ್ಮರಣಾರ್ಹ ಸಂದರ್ಭದ ಸ್ಮಾರಕವಾಗಿ, ಈಗಲೂ ಈ ವಂಶೀಯರು ಶ್ರಾವಣೆಯಲ್ಲಿ ಯಜ್ಞೋಪವೀತವನ್ನು ಬದಲಾಯಿಸುವಾಗ "ಶ್ರೀಮುಷ್ಣಾಚಾರ್ಯರ ಗಂಟು" ಎಂದು ತಮ್ಮ ಯಜ್ಞೋಪವೀತಗಳಿಗೆ ಹಾಕಿಕೊಳ್ಳುತ್ತಾರೆ. ಅವರ ಮನೆಗಳಲ್ಲಿ ಪರಮೋತ್ಸವ ಸಂದರ್ಭದಲ್ಲಿ ಶ್ರೀಮುಷ್ಣಾಚಾರ್ಯರದಯವೆಂದು ಸ್ಮರಿಸುತ್ತಾರೆ.

"ನದೇವ ತೋಷಣಂ ವೃಥಾ" ಎಂಬ ವಾಕ್ಯದ ಅನುಭವ ಜನ್ಯಜ್ಞಾನವು ಬಾಳಾರ್ಯರಿಗೆ ಅಚಿರಕಾಲದಲ್ಲಿಯೇ ಒದಗಿತು. ಇವರಿಗೆ ಪ್ರಥಮ ಪತ್ನಿಯಲ್ಲಿ ಈಗಾಗಲೇ ಇಬ್ಬರು ಪುತ್ರರು, ಹಯಗ್ರೀವಚಾರ್ಯ ಮತ್ತು ವೆಂಕಟೇಶಾಚಾರ್ಯ ಜನಿಸಿದ್ದರು. ಪ್ರಕೃತ ಬಾಳಾಚಾರ್ಯರಿಗೆ ದ್ವಿತೀಯ ಪತ್ನಿ ಕುಂ|| ಸೌ|| ಗೋದುಬಾಯಿಯವರ ಗರ್ಭಾಂಬುಧಿಯಿಂದ ಒಬ್ಬರ ನಂತರ ಒಬ್ಬರು ಮೂರು ಪುತ್ರರತ್ನಗಳು ಉದ್ಭವಿಸಿದವು. ಮೊದಲನೆಯವರು ಶ್ರೀನಿವಾಸಾಚಾರ್ಯರು, ಈ ಗ್ರಂಥದ ಕಥಾನಾಯಕರು. ಎರಡನೆಯವರು ಜಯರಾಯಾಚಾರ್ಯರು. ಮೂರನೆಯವರು ವಾಸುದೇವಾಚಾರ್ಯರು.

ಒಬ್ಬೊಬ್ಬರಿಗೂ ಮಧ್ಯೆ ಅಂದಾಜು ಎರಡು ವರ್ಷ ಅಂತರ. ಬಾಲಕರು ಶುಕ್ಲಪಕ್ಷದ ಚಂದ್ರನಂತೆ ಕ್ರಮವಾಗಿ ಮತ್ತು ಕ್ರಮೇಣ ವೃದ್ಧಿ ಹೊಂದಿದರು. ಬಾಲಕ್ರೀಡಾದಿಗಳಿಂದ ಮಾತಾಪಿತೃಗಳನ್ನು ನೆರೆಹೊರೆಯುವರನ್ನು ಮತ್ತು ಶಿಷ್ಯವೃಂದವನ್ನು ತೋಷಣೆಗೊಳಿಸಿದರು.

ಮೂರು ವರ್ಷದವರಿದ್ದಾಗಿನಿಂದಲೇ ಇವರುಗಳ ವಿದ್ಯಾರ್ಜನೆ ಪ್ರಾರಂಭ. ಸಂಸ್ಕೃತ ಅಧ್ಯಯನದ ವೈಶಿಷ್ಟ್ಯವೆಂದರೆ ಮುಖೋದ್ಗತವಾಗತಕ್ಕ ಕೆಲವು ಭಾಗಗಳಿವೆ. ಉದಾಹರಣಾರ್ಥವಾಗಿ ಅಮರಕೋಶ, ಶಬ್ದ ಮತ್ತು ಧಾತುಗಳು ಸುಬಂತ-ತಿಙಂತಗಳೊಡನೆ, ಸಮಾಸ ಚಕ್ರ, ಸ್ತೋತ್ರ ಪದ್ಯಗಳು ಇತ್ಯಾದಿ ಬಾಲ್ಯ ವಿದ್ಯಾಭ್ಯಾಸ, ಕ್ರಮೇಣ ಅಕ್ಷರಾಭ್ಯಾಸ, ಪ್ರಾರಂಭಿಕ ಪಾಠಗಳನ್ನು ಬರೆಯುವದು, ಓದುವದು ಇತ್ಯಾದಿ. ಏಳುವರ್ಷದಲ್ಲಿ ಉಪನಯನ ನಂತರ ಮಣಿಮಂಜರಿ-ಸುಮಧ್ವವಿಜಯ ಕಾವ್ಯ ಸಾಹಿತ್ಯ ಗ್ರಂಥಗಳು ಕ್ರಮೇಣ ಪ್ರಮಾಣ ಚಂದ್ರಿಕಾ ಇತ್ಯಾದಿ. ತದನಂತರ ನ್ಯಾಯಶಾಸ್ತ್ರ ಅಧ್ಯಯನ ತರ್ಕ ಸಂಗ್ರಹದಿಂದಾರಂಭ. ಇವುಗಳ ಜೊತೆಗೇ ವ್ಯಾಕರಣ ಪಾಣಿನೀ ಪಾಠಗಳು. ಬಾಳಾಚಾರ್ಯರಿಗೆ ಮಕ್ಕಳಿಗೆ ಪಾಠ ಹೇಳಲು ಸಮಯವೇ ಇರುತ್ತಿರಲಿಲ್ಲ. ಪ್ರೌಢ ವಿದ್ಯಾರ್ಥಿಗಳಿಗೆ ಇವರಿಗೆ ಪಾಠ ಹೇಳುವ ಜವಾಬ್ದಾರಿಯನ್ನು ವಹಿಸಿದ್ದರು.

## ಪ್ರಾಥಮಿಕ ವಿದ್ಯಾರ್ಜನೆ ಮತ್ತು ವಿವಾಹ-೪

ಬಾಳಾಚಾರ್ಯರು ಆಗಿಂದಾಗ್ಗೆ ಮಕ್ಕಳ ವಿದ್ಯಾಭ್ಯಾಸದ ಪ್ರಗತಿಯನ್ನು ವಿಚಾರಿಸುತ್ತಿದ್ದರು. ಪರೀಕ್ಷಿಸುತ್ತಿದ್ದರು. ಅಭಿವೃದ್ಧಿಯನ್ನು ನೋಡಿ ಸಂತೋಷಿಸುತ್ತಿದ್ದರು.

ಹದಿನಾಲ್ಕು ವಯಸ್ಸು ಮುಟ್ಟುವದರೊಳಗೆ ಶ್ರೀನಿವಾಸಾಚಾರ್ಯರು ವಿದ್ಯಾರ್ಜನೆಯಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದ್ದು ಎಲ್ಲರಿಗೂ

ವೇದ್ಯವಾಯಿತು. ಅವರು ತಮಗೆ ಕಲಿಸಿದ ಪಾಠಗಳನ್ನು ಮಾತ್ರ ಸ್ವಾಧೀನ ಮಾಡಿಕೊಳ್ಳುವದಲ್ಲದೇ ಪ್ರೌಢ ವಿದ್ಯಾರ್ಥಿಗಳ ಪಾಠಗಳನ್ನು ಶ್ರವಣಮಾಡು ತ್ತಿದ್ದರು. ಅಷ್ಟೇ ಅಲ್ಲ, ಅವುಗಳನ್ನು ಧಾರಣ ಮಾಡುವದು ಚಿಂತನ ಮಾಡುವದು ಇತ್ಯಾದಿಗಳಲ್ಲಿ ಗಮನಕೊಡುತ್ತಿದ್ದರು. ಹಿರಿಯ ವಿದ್ಯಾರ್ಥಿಗಳ ಸಂಗಡ ಗಹನ ವಿಷಯಗಳನ್ನು ಚರ್ಚಿಸುತ್ತಿದ್ದರು. ಈ ಸಂದರ್ಭಗಳಲ್ಲಿ ಶ್ರೀನಿವಾಸಾಚಾರ್ಯರ ಬುದ್ಧಿ ಪರಾಕ್ರಮವನ್ನು ನೋಡಿ ಪ್ರತಿಭಾಪರಿತುಷ್ಟ ರಾದ ಶಿಷ್ಯವರ್ಗವೆಲ್ಲವೂ ಗುರುಗಳ ಮುಂದೆ ವರ್ಣಿಸಿದರು.

ಒಂದು ದಿನ ಈ ಹೊಗಳಿಕೆಯ ಪರಿಕ್ಷಾ ಕಾಲವೋ ಏನೋ ಎಂಬ ಒಂದು ಸಂದರ್ಭ ಒದಗಿತು. ಗುರುಗಳ ಸಮ್ಮುಖದಲ್ಲಿ ಶಿಷ್ಯವೃಂದವೆಲ್ಲವೂ ಕುಳಿತಿದೆ. ಅವರ ಜೊತೆ ಶ್ರೀನಿವಾಸಾಚಾರ್ಯರೂ ಅವರ ತಮ್ಮಂದಿರೂ ಇದ್ದರು. ಅಂದು ಒಬ್ಬೊಬ್ಬ ವಿದ್ಯಾರ್ಥಿಯೂ ತಮಗೆ ಇಷ್ಟವಾದ ಒಂದೊಂದು ವಿಷಯ ವನ್ನು ಆರಿಸಿಕೊಂಡು ಅದನ್ನು ಅನುವಾದಮಾಡಿದರು. ಶ್ರೀನಿವಾಸಾಚಾರ್ಯ ರಿಗೂ ಅವಕಾಶವಿದ್ದಿತು. ಇವರೂ ನ್ಯಾಯಶಾಸ್ತ್ರದ ಒಂದು ವಿಷಯವನ್ನು ಆರಿಸಿಕೊಂಡು ಅಸ್ಖಲಿತ ವಾಣಿಯಲ್ಲಿ ಅತ್ಯುತ್ತಮ ರೀತಿಯಲ್ಲಿ ವಿಷಯವನ್ನು ನಿರೂಪಿಸಿದರು. ಎಲ್ಲ ಪ್ರೌಢ ಪ್ರಬಲ ಶಿಷ್ಯರೂ ಇವರ ಪ್ರತಿಭೆಗೆ ತಲೆ ದೂಗಿದರು.

ಶ್ರೀನಿವಾಸಾಚಾರ್ಯರದು ಅವರು ಅಧ್ಯಯನ ಮಾಡಿದ ಎಲ್ಲ ಶಾಸ್ತ್ರ ಗಳಲ್ಲಿಯೂ ಸ್ಪಷ್ಟವ್ಯುತ್ಪತ್ತಿ ಇತ್ತು. ಜ್ಞಾನದಲ್ಲಿ ಸ್ಥಿರತೆ ಇತ್ತು. ನೂತನ ಪಾಠಗಳಲ್ಲಿ ಆಸಕ್ತಿ ಉತ್ಸಾಹ ತುಂಬಿತ್ತು. ಇವರಂತೆಯೇ ಇವರ ಇಬ್ಬರು ತಮ್ಮಂದಿರೂ ಬಹಳ ಕುಶಲಮತಿಗಳು. ಕೊನೆಯವರಾದ ವಾಸುದೇವಾ ಚಾರ್ಯರು ನ್ಯಾಯಶಾಸ್ತ್ರದಲ್ಲಿ ಬಹಳ ನೈಪುಣ್ಯತೆಯನ್ನು ಪಡೆದರು. ಇವರ ಮನೆತನದವರು ಈಗಲೂ "ಚಿಗಾನೂರಿ"ನಲ್ಲಿರುತ್ತಾರೆ.

ಪುತ್ರತ್ರಯರೂ ವಿದ್ಯಾಪ್ರಸಂಗದಲ್ಲಿ ಉತ್ಸಾಹಿಗಳೂ ಅತಿಶಯ ಕುಶಲ ಮತಿಗಳೂ ಆಗಿದ್ದರು. ಇತರ ವಿದ್ಯಾರ್ಥಿಗಳನ್ನು ನೋಡಿ ಇವರುಗಳು ಯಾರಿಗಿಂತಲೂ ಕಡಿಮೆಯಾಗಬಾರದೆಂದೂ ಎರಡನೆಯವರಾಗಬಾರದೆಂದೂ

ಅಧ್ಯಯನದಲ್ಲಿ ವಿಶೇಷಾಸಕ್ತಿಯನ್ನು ಪೈಪೋಟಿ ದೃಷ್ಟಿಯಿಂದ ಇಟ್ಟಿದ್ದರು. (Competitive Spirit). ಮೂವರು ಬಾಲಕರೂ ಕುಶಲಮತಿಗಳಾದರೂ ಜೇಷ್ಟಪುತ್ರರ ಬುದ್ಧಿ ಅತಿ ಸೂಕ್ಷ್ಮಗಳನ್ನುಗ್ರಹಿಸುತ್ತಿತ್ತು. ಇವರುಗಳ ಪ್ರಗತಿಯನ್ನು ನೋಡಿದ ಬಾಳಾಚಾರ್ಯರು ಅಂತರಂಗದಲ್ಲಿಯೇ ತೋಷಣೆ ಹೊಂದಿದರು. ಪ್ರೌಢ ಪಾಠಗಳಿಗೆ ಅರ್ಹತೆ ಬಂದದ್ದು ಮನವರಿಕೆಯಾಯಿತು.

ಒಂದು ಸಲ ಬಾಳಾಚಾರ್ಯರ ಶಿಷ್ಯರು ಗದ್ವಾಲ ವಿದ್ವತ್ಸಭೆಗೆ ಹೋಗಿ ಬಂದು, ಅಲ್ಲಿ ಜರುಗಿದ ವಾದ ಪ್ರಸಂಗಗಳನ್ನೆಲ್ಲ ವಿವರಣೆ ಮಾಡುತ್ತ ಒಂದು ವಿಷಯವನ್ನು ಅತಿ ಪ್ರೌಢವಾದುದೆಂದು ಕೋಟಿ ಕ್ರಮಗಳನ್ನು ಅನುವಾದ ಮಾಡಿ ವಿದ್ವತ್ಸಭೆಯು ವಿರಮಿಸಿದ ಸ್ಥಳವನ್ನು ಹೇಳಿ ತಮ್ಮ ಮಾತನ್ನು ನಿಲ್ಲಿಸಿದರು.

ಈ ಎಲ್ಲ ವಾದವಿವಾದಗಳನ್ನೂ ಅತಿ ಸೂಕ್ಷ್ಮ ಬುದ್ಧಿಯಿಂದ ಅನುಸರಿಸುತ್ತ ಸನಿಹದಲ್ಲಿಯೇ ಕುಳಿತಿದ್ದ ಹದಿನಾಲ್ಕುವರ್ಷದ ಶ್ರೀನಿವಾಸಾಚಾರ್ಯರು ತಕ್ಷಣವೇ ವಿಷಯವಿರಮಿಸಿದ ಸ್ಥಳದಿಂದ ಮುಂದಿನ ಕೋಟಿ ಕ್ರಮಗಳನ್ನು ಅನಾಯಾಸವಾಗಿ ಅನುವಾದಿಸಿದರು. ಇದನ್ನು ನೋಡಿದ ತಂದೆಯವರು ಮತ್ತು ಶಿಷ್ಯವೃಂದವೂ ಆನಂದಸಾಗರದಲ್ಲಿಯೇಮುಗ್ನರಾದರು. ಯಾಕೆಂದರೆ ಅದು ವಯಸ್ಸಿಗೆ ಮೀರಿದ ಪ್ರತಿಭೆ.

ಬಾಳಾಚಾರ್ಯರು ಬಾಲಕನ ಗ್ರಹಣ ಧಾರಣ ಸಾಮರ್ಥ್ಯಗಳನ್ನು ನೋಡಿ, "ಮಾರನೆಯ ದಿನದಿಂದ ಶ್ರೀನಿವಾಸನು ಪ್ರತಿ ಪ್ರೌಢಪಾಠಗಳಿಗೂ ತರಗತಿಯಲ್ಲಿ ಉಪಸ್ಥಿತನಿರಬೇಕೆಂದು" ತಿಳಿಸಿದರು. ಗುರುಗಳ ಆಜ್ಞಾ ಪ್ರಕಾರ ಶ್ರೀನಿವಾಸಾಚಾರ್ಯರು ಎಲ್ಲ ಉದ್ಗ್ರಂಥಪಾಠಗಳ ತರಗತಿಗಳಿಗೂ ಉಪಸ್ಥಿತರಿರುತ್ತಿದ್ದರು. ಇವರ ಬುದ್ಧಿಗೆ ಕ್ಷೋಭೆಯಾಗಲಿ, ಆಯಾಸವಾಗಲಿ ಬೇಸರವಾಗಲಿ ಅಥವಾ ವಿರಾಮದ ಅಪೇಕ್ಷೆಯಾಗಲಿ ಕಾಣುತ್ತಿರಲಿಲ್ಲ. ಗುರುಗಳು ನದೀಸ್ನಾನಕ್ಕೆ ತೆರಳಿದೊಡನೆ ವ್ಯಾಸಪೀಠದಲ್ಲಿಯ ಗ್ರಂಥಗಳನ್ನು ತೆಗೆದುಕೊಂಡು ಚಿಂತನೆ ಮಾಡುವದು, ಶ್ರೀ ನಿವಾಸಾಚಾರ್ಯರ ದಿನಚರಿಯಾಗಿತ್ತು. ಹೊಸಪಾಠಗಳು, ಹೊಸ ಉತ್ಸಾಹ, ಹೊಸ ಅಭ್ಯಾಸ.

ಒಂದೊಂದು ಸಲ ಪಾಠದ ಮಧ್ಯದಲ್ಲಿ ಶ್ರೀನಿವಾಸಾಚಾರ್ಯರು ಪ್ರಶ್ನೆಮಾಡಿದರೆ ಝಟಿತಿ ಉತ್ತರ ಕೊಡುವದು ಕೆಲವೊಂದು ಸಾರೆ ಕಷ್ಟವಾಗುತ್ತಿತ್ತು. ಆದ್ದರಿಂದ ಗುರುಗಳು, ಪ್ರಶ್ನೆಗಳನ್ನು ಪಾಠದ ಮಧ್ಯದಲ್ಲಿ ಕೇಳದೇ ಸಾಯಂಕಾಲ ಪ್ರಾಣದೇವರ ದೇವಾಲಯಕ್ಕೆ ಹೋದಾಗ ಅಲ್ಲಿ ಎಷ್ಟು ಪ್ರಶ್ನೆಗಳನ್ನು ಬೇಕಾದರೂ ಕೇಳಿರಿ ಎಂದು ಅಜ್ಞೆಮಾಡಿದರು. ಮುಂದೆ ಆ ಪ್ರಕಾರವೇ ಶಿಷ್ಯರು ಆಜ್ಞೆಯನ್ನು ಪರಿಪಾಲಿಸುತ್ತಿದ್ದರು. ಹಾಗೆಯೇ ಮುಂದೆ ಎರಡು ಮೂರು ವರ್ಷಗಳು ಪಾಠಪ್ರವಚನಗಳು ನಿರ್ವಿಘ್ನವಾಗಿ ಭರದಿಂದ ಸಾಗಿದವು.

ಬಾಳಾಚಾರ್ಯರ ಶಿಷ್ಯಕೋಟಿಯಲ್ಲಿ ಮುಖ್ಯತಃ ಶ್ರೀ ಹುನಗುಂದ ನರಸಿಂಹಾಚಾರ್ಯರು, ಶ್ರೀಹನುಮಸಾಗರದ ವೆಂಕಟಕೃಷ್ಣಾಚಾರ್ಯರು, ಸೊರಟೂರು ಶ್ರೀನಿವಾಸಾಚಾರ್ಯರು, (ದ್ವೈತಭೂಷಣ ಗ್ರಂಥಕರ್ತರು) ತುಳಜಾಪುರದ ಜಯರಾಮಾಚಾರ್ಯರು ಇವರೇ ಮೊದಲಾದವರು ಶಿಷ್ಯಕೋಟಿ ಪ್ರವಿಷ್ಟರು.

ಬಾಳಾಚಾರ್ಯರು ಜ್ಯೋತಿಷ್ಯಶಾಸ್ತ್ರದಲ್ಲಿ ಉದ್ಧಾಮ ಪಂಡಿತರಾಗಿದ್ದು ಶಿಷ್ಯರಿಂದ ಅನೇಕ ಗ್ರಂಥಗಳನ್ನು ಬರೆಯಿಸಿದರು.

ಮರಡೂರಲ್ಲಿ ಮತ್ತು ಸುತ್ತಮುತ್ತಲಿನ ಊರುಗಳಲ್ಲಿ ಕೇವಲ ತಮ್ಮ ಹಿರಿಯರ ಆಸ್ತಿ ಮಾತ್ರವಲ್ಲದೇ ತಮ್ಮಕಾಲದಲ್ಲಿಯೂ ಅನೇಕ ಸ್ಥಿರಾಸ್ತಿಗಳನ್ನು ಸಂಪಾದಿಸಿದ್ದರು. ತಮ್ಮಲ್ಲಿ ಚಿರಕಾಲ ವಿದ್ಯಾರ್ಜನೆಮಾಡಿದವರಿಗೆ ಶಿಷ್ಯವಾತ್ಸಲ್ಯದಿಂದ ಭೂಮಿ ಗೃಹ ಮತ್ತು ಪ್ರತಿಮೆ ಸಾಲಗ್ರಾಮಗಳನ್ನೂ ಅನುಗ್ರಹಿಸಿದರು. ಯಾಕೆಂದರೆ ಶಿಷ್ಯರು ಆಯಾಸ್ಥಳಗಳಲ್ಲಿ ನಿತ್ಯ ಸರ್ವಜ್ಞಾಚಾರ್ಯರ ಪಾಠ ಪ್ರವಚನಗಳೊಂದಿಗೆ ಸದ್ಧರ್ಮದಲ್ಲಿ ಬಾಳಲೆಂದು ಬಾಳಾಚಾರ್ಯರ ಆಶೆ.

ಶ್ರೀನಿವಾಸಾಚಾರ್ಯರಿಗೆ ಏಳುವರ್ಷಕ್ಕೆ ಉಪನಯನವಾಗಿತ್ತು. ಹದಿನಾಲ್ಕನೆಯ ವಯಸ್ಸಿನಲ್ಲಿ ಹರ್ಲಾಪುರದ ಶ್ಯಾನಭೋಗರ ಮನೆಯ ಕನ್ಯೆ ಕು|| ಲಕ್ಷ್ಮೀಬಾಯಿಯನ್ನು ಕೊಟ್ಟು ವಿವಾಹಮಹೋತ್ಸವವು ಎಂಟುದಿನ

ಜರುಗಿತು. ಈ ಸಂದರ್ಭ ಶ್ರೀನಿವಾಸಾಚಾರ್ಯರ ವೈಷ್ಣವ ದೀಕ್ಷೆಯ ಪರೀಕ್ಷಾ ಕಾಲವೆಂಬಂತ್ತಿತು.

ವಿವಾಹವೇನೋ ಎಂಟುದಿನಗಳು ಜರುಗಿತು. ಆದರೆ ಮಧ್ಯ ಏಕಾದಶಿ ಹರಿದಿನ ಪ್ರಾಪ್ತವಾಯಿತು. ಉಭಯಪಕ್ಷದ ಬೀಗರು ನೂತನ ವಧುವರರಿಗೆ ಫಲಾಹಾರಾದಿಗಳನ್ನು ಮಾಡಿಸಬೇಕೆಂದು ಯೋಚಿಸಿದರು. ಈ ಸಮಾಚಾರ ಶ್ರೀನಿವಾಸಾಚಾರ್ಯರಿಗೆ ಕ್ರಮೇಣ ತಿಳಿದೊಡನೆಯೇ ಅವರು ಈ ಸೂಚನೆಯನ್ನು ತೀವ್ರವಾಗಿ ವಿರೋಧಿಸಿದರು. ಹಿರಿಯರು ಹೇಳಿದರು. "ಮಕ್ಕಳೇ, ನೀವು ವಧುವರರಿನ್ನೂ ಎಳೆಯರು. ಕೆಲವು ಕಾಲಾನಂತರ ಉಪೋಷಣ ವ್ರತವನ್ನು ಕೈಕೊಂಡರಾಯಿತು. ಇಂದು ಉಪಾಹಾರ ಮಾಡಿರಿ." ಎಂದು ತಿಳಿಸಿ ಹೇಳಿ ಫಲಾಹಾರಕ್ಕೆ ಒಪ್ಪಿಸಲು ವಿಶ್ವ ಪ್ರಯತ್ನ ಮಾಡಿದರು. ಅವರೆಲ್ಲರೂ ಈ ಸಾಹಸದಲ್ಲಿ ವಿಫಲರಾದರು. ಶ್ರೀನಿವಾಸಾಚಾರ್ಯರೆಂದರು, "ಏಕಾದಶಿ ಮಾಡುವ ಅಭ್ಯಾಸ ನನಗಿದೆ. ಏಕಾದಶೀ ಉಪೋಷಣವು ಪ್ರಾಣಕ್ಕೆ ಸಮಾನ. ಉಪಾಹಾರಾದಿಗಳಿಂದ ಉಪೋಷಣೆಯನ್ನು ತ್ಯಜಿಸಿ ಮನಸ್ಸಿಗೆ ಕ್ಲೇಶ ತಂದು ಕೊಳ್ಳಲು ನನಗೆ ಸುತರಾಂ ಇಷ್ಟವಿಲ್ಲವೆಂದು" ತಮ್ಮ ಕಟು ನಿರ್ಧಾರವನ್ನು ಹಿರಿಯರೆಲ್ಲರಿಗೂ ವಿನಯದಿಂದಲೇ ತಿಳಿಸಿದರು. ಹರಿದಿನದ ಉಪೋಷಣೆ ವೈಷ್ಣವ ದೀಕ್ಷೆಯ ಹೆಗ್ಗುರುತು ಎಂದು ಎಲ್ಲರೂ ಭಾವಿಸಿ, ಯಾವ ಬಾಂಧವರೂ ಆಗ್ರಹವನ್ನು ಮುಂದುವರಿಸಲು ಮುಂದಾಗಲಿಲ್ಲ. ಶ್ರೀನಿವಾಸಾಚಾರ್ಯರು ಪಾಂಡಿತ್ಯ ಸಂಪಾದನೆಯ ಪೂರ್ವದಲ್ಲಿಯೇ ಅಪರಿಮಿತ ಶುದ್ಧ ವೈಷ್ಣವ ದೀಕ್ಷೆಯನ್ನು ಪಡೆದಿದ್ದರು, ಎಂಬ ವಿಷಯ ಪ್ರಕಟವಾಗಿ ಸಕಲರೂ ಇವರ ಧರ್ಮದೀಕ್ಷೆಯನ್ನು ನೋಡಿ ಆಶ್ಚರ್ಯ, ಆನಂದ ಮಗ್ನರಾದರು. ಹಿರಿಯರ ಆಶೀರ್ವಾದ ಬಲದಿಂದ ಇವರು ಸುಖ ದಂಪತಿಗಳಾಗಿ ಬಾಳಿದರು.

# ಆಕಸ್ಮಿಕ ಆಘಾತ ಮತ್ತು ಅನಂತರ ವಿದ್ಯಾರ್ಜನೆ-೫

ಬಾಳಾಚಾರ್ಯರಿಗೆ ಶಿಷ್ಯಸಂಪತ್ತು, ಪುತ್ರಸಂಪತ್ತು, ಭೂ ಸಂಪತ್ತು ಸಂಸಾರದಲ್ಲಿ ನೆಮ್ಮದಿ ಇತ್ಯಾದಿಗಳು ಸಮೃದ್ಧಿಯಾಗಿದ್ದವು. ಇದೆಲ್ಲವೂ ಬಾಹ್ಯ ದೃಷ್ಟಿಯಿಂದ ನೋಡುವವರಿಗೆ ಮಾತ್ರ. ಆದರೆ ಅವರು ಸಂಸಾರದಲ್ಲಿ ಮುಳುಗಿಯೂ ಇರಲಿಲ್ಲ ಮತ್ತು ಯಾವ ಸಂಪತ್ತನ್ನು ಬಯಸುತ್ತಲೂ ಇರುತ್ತಿರಲಿಲ್ಲ. ಇವರಿಗೆ ನೈಜ ವೈರಾಗ್ಯವಿತ್ತು. ಜೀವನದಲ್ಲಿ ಯದೃಚ್ಛಾ ಲಾಭ ಸಂತುಷ್ಟರು. "ಯದೃಚ್ಛಾ ಲಾಭ ಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ" ಎಂಬ ಗೀತೆಯ ವಾಕ್ಯದ ಅನುಕರಣವನ್ನು ಇವರ ಜೀವನದಲ್ಲಿ ಕಾಣಬಹುದಾಗಿತ್ತು. ನಿರ್ಮತ್ಸರರು ಮತ್ತು ಶಾಂತರು. ವೈರಾಗ್ಯ ಹೇಗೆ ಮನದಲ್ಲಿ ನೆಲೆ ಬೀಡಾಗಿದೆಯೋ, ಹಾಗೆಯೇ ಭಕ್ತಿ ಕೂಡ. ಇವರು ಶ್ರೀಹರಿ ಯಲ್ಲಿ ಮಾಡತಕ್ಕ ಭಕ್ತಿಯು ತನ್ನ ಒಡಲಲ್ಲಿ ಮಹಾತ್ಮ್ಯಜ್ಞಾನವನ್ನು ತುಂಬಿಕೊಂಡಿತ್ತು. ಇಂಥ ಭಕ್ತಿಯೇ ಮೋಕ್ಷ ಸಾಧಕವೆಂದು ಶ್ರೀ ಮಧ್ವರ ಖಚಿತವಾಣಿ. "ಮಾಹಾತ್ಮ್ಯ ಜ್ಞಾನ ಪೂರ್ವಸ್ತು...." (ಮ.ಭಾ.ತಾ.ನಿ.)

ಹೀಗೆ ಬಾಳಾರ್ಯರು ತಮ್ಮ ಸಕಲ ಪರಿವಾರದೊಂದಿಗೆ ಹಿಂದೆ ವರ್ಣಿಸಿದ ಪ್ರಕಾರ ಸಂತತಶಾಸ್ತ್ರವಿಮರ್ಶೆಯಲ್ಲಿ ಕಾಲಕಳೆಯುತ್ತಿರುವಾಗ ಒಂದುದಿನ ಆಕಸ್ಮಿಕವಾಗಿ ಅವರು ಪರಲೋಕ ಯಾತ್ರೆ ಮಾಡಿದರು. ಅವರು ಹೀಗೆ ಹರಿ ಪದವನ್ನು ಸೇರಿದಾಗ ಅವರ ಹಿರಿಯಮಕ್ಕಳು ಹದಿನಾರ_ಹದಿನೇಳು ವಯಸ್ಸಿನವರು. (ಕ್ರಿ.ಶ.1840) ಮಡದಿ, ಮಕ್ಕಳು, ಶಿಷ್ಯರು ಮತ್ತು ಗ್ರಾಮಸ್ಥರು ಗಾಢಾಂಧಕಾರದಲ್ಲಿ ಮತ್ತು ದುಃಖಸಾಗರದಲ್ಲಿ ಮುಳುಗಿದರು. ಬಾಲಕರು ದುಃಖವನ್ನು ಸಂಯಮನ ಮಾಡಿಕೊಂಡು ಹಿರಿಯ ವಿದ್ಯಾರ್ಥಿಗಳ ಸಹಕಾರ ದೊಂದಿಗೆ ಔರ್ಧ್ವದೈಹಿಕ ಕ್ರಿಯಾದಿಗಳನ್ನು ಮಾಡಿ ಮುಗಿಸಿದರು. ನಂತರ ಹೊರಗಿನಿಂದ ಬಂದ ವಿದ್ಯಾರ್ಥಿಗಳೆಲ್ಲ ಸ್ವಸ್ಥಳಗಳಿಗೆ ವಿಮನಸ್ಕರಾಗಿ ಹಿಂತಿರುಗಿದರು. ಕೆಲವರಿಗೆ ಅಧ್ಯಯನ ಪೂರ್ಣವಾಗಿದ್ದಿತು. ಇನ್ನು ಕೆಲವರಿಗೆ ಇನ್ನೂ

ಕೆಲವು ಭಾಗ ಶೇಷ ಅಧ್ಯಯನ ಉಳಿದಿದ್ದಿತು. ಹರೀಚ್ಛೆ-ದೈವೇಚ್ಛೆ ಲಭ್ಯವಾದಷ್ಟೇ ಪರಮಾನುಗ್ರಹವೆಂದುಕೊಂಡರು.

ಪಿತೃವಿಯೋಗದ ನಂತರ ಶ್ರೀನಿವಾಸಾಚಾರ್ಯರು ತಮ್ಮ ಇಬ್ಬರು ಪ್ರಬಲ ತಮ್ಮಂದಿರೊಡನೆ, ಮಾತೆಯೊಡನೆ, ತಮ್ಮ ಮಡದಿಯೊಡನೆ ಕೂಡಿದ ಸಂಸಾರ ಯಾತ್ರೆಯನ್ನು ವಿವೇಕದಿಂದಲೂ ಸುಗಮವಾಗಿಯೂ ಸಾಗಿಸುತ್ತಿದ್ದರು.

ಒಂದೆರಡು ತಿಂಗಳು ಕಳೆಯುವದರೊಳಗಾಗಿ ಮುಂದಿನ ವಿದ್ಯಾರ್ಜನೆಯ ಯೋಚನೆ ಮೂರು ಜನರನ್ನೂ ಬಾಧಿಸಹತ್ತಿತು. ತಮ್ಮಂದಿರಿಗೇನೋ ಅಣ್ಣಂದಿರು ಪಾಠ ಹೇಳುವರೆಂಬ ನಂಬಿಕೆ, ಆದರೆ ಅಣ್ಣಂದಿರ ಮುಂದಿನ ಪಾಠ ? ಇವರಿಗೆ ಕೊರಗು ಹೆಚ್ಚಾಯಿತು. ಅಧ್ಯಯನಕ್ಕೆ ಯಾರಲ್ಲಿ ಹೋಗುವದು ? ಯಾವ ಊರಿಗೆ ಹೋಗುವದು ? ತಮ್ಮ ತಂದೆಯವರಂತೆ ಇರತಕ್ಕ ಪ್ರತಿಭಾವಂತ ವ್ಯಕ್ತಿಗಳು ಇನ್ಯಾರಾದರೂ ಗುರುಗಳು ಇರುವರೋ? ಆಕಸ್ಮಿಕ ಇದ್ದರೂ ಸಿಕ್ಕಾರೋ ? ಇತ್ಯಾದಿ ಚಿಂತೆಗೊಳಗಾದರೂ ತೋರ್ಪಡಿಸದೆ ಮನದಲ್ಲಿ ವ್ಯಥೆ ಪಡುತ್ತಿದ್ದರು. ಶ್ರೀನಿವಾಸಾಚಾರ್ಯರು ತಮ್ಮಂದಿರೊಡನೆ ಎಲ್ಲಿಯಾದರೂ ಪರಸ್ಥಳಕ್ಕೆ ವಿದ್ಯಾರ್ಜನೆಗೆ ಹೋಗುವರೇನೋ ಎಂದು ಮಾತೆ ಮತ್ತು ಮಡದಿಯರ ವಿಯೋಗ ಚಿಂತೆ. ಹೀಗೆ ಮನೆಯವರೆಲ್ಲರಿಗೂ ಒಂದೊಂದು ತರಹದ ಚಿಂತೆ. ಬಾಳಾಚಾರ್ಯರ ವಿಯೋಗದ ಪರಿಣಾಮವಾಗಿ ಶ್ರೀನಿವಾಸಾಚಾರ್ಯರ ಗೃಹವು, ಗ್ರಹಗ್ರಸ್ಥವಾದಂತಿತ್ತು.

ಈ ಎಲ್ಲರ ಚಿಂತೆಗಳನ್ನು ಮಹಾನುಭಾವರಾದ ಬಾಳಚಾರ್ಯರು ಕೇಳಿಸಿ ಕೊಂಡರೇನೋ ಎನ್ನುವಂತೆ ಅಚಿರಕಾಲದಲ್ಲಿ ಅವರೇ ಚಿಂತೆಯನ್ನು ಪರಿಹಸಿದರು. ಅವರು ಶ್ರೀನಿವಾಸಾಚಾರ್ಯರ ಸ್ವಪ್ನದಲ್ಲಿ ಸ್ಪಷ್ಟವಾಗಿ ತಿಳಿಸಿದ್ದೇನೆಂದರೆ, "ಮಕ್ಕಳೇ, ಇನ್ನು ಮುಂದೆ ನೀವು ಅನ್ಯತ್ರಯಾರಲ್ಲಿಯೂ ಉನ್ನತ ವಿದ್ಯಾರ್ಜನೆಗೆ ಹೋಗಬೇಕಾದ್ದಿಲ್ಲ. ನಿಮಗೆ ಯಾವ ಅಧ್ಯಯನ ಮುಂದುವರಿಯಬೇಕೋ ಅದೆಲ್ಲವನ್ನೂ ನಾವೇ ಹೇಳುತ್ತೇವೆ." ಎಂದು ಆಜ್ಞೆ ಮಾಡಿದರು. ಇದು ಕೇವಲ ಬಾಳಾಚಾರ್ಯರ ಆಜ್ಞೆ ಅಲ್ಲ. ತೈಜಸನಾಮಕ ಪರಮಾತ್ಮನ ಆಜ್ಞೆ, ಶ್ರೀನಿವಾಸಾಚಾರ್ಯರ ಸುದೈವ.

ಮರುದಿನ ಶ್ರೀನಿವಾಸಾಚಾರ್ಯರು ಈ ಸ್ವಪ್ನವನ್ನು ಮಾತೋಶ್ರೀಯವರಿಗೂ, ತಮ್ಮಂದಿರಿಗೂ ತಿಳಿಸಿದರು. ಪರಮಾಶ್ಚರ್ಯವಾಯಿತು. ಎಲ್ಲರ ವ್ಯಕ್ತಿಗತ ಚಿಂತೆಗಳು ಮನಸ್ಸಿನಿಂದ ಮೆಲ್ಲಗೆ ಮಾಯವಾದವು. ಎಲ್ಲರಲ್ಲಿಯೂ ಈ ಸ್ವಪ್ನ ವೃತ್ತಾಂತವು ನೂತನ ಚೈತನ್ಯವನ್ನು ತುಂಬಿತು. ಪ್ರತಿಯೊಬ್ಬರಿಗೂ ಮುಂದೆ ಆಗತಕ್ಕದ್ದನ್ನು ನಿರೀಕ್ಷಿಸಲು ಕುತೂಹಲ.

ಸ್ವಪ್ನದಲ್ಲಿ ಇತ್ತ ಆದೇಶವನ್ನು ಸರಿಯಾಗಿ ಅರ್ಥಮಾಡಿಕೊಂಡು, ಭಕ್ತಿಯಿಂದ ಬಾಲಕರು ಶಾಂತಿ ಪಾಠ ಹಾಕಿ ಆಚಾರ್ಯರು ಆಜ್ಞೆ ಮಾಡಿದ ರೀತಿಯಲ್ಲಿ ಅವರ ಬೆನ್ನು ಮಣೆಯ ಮುಂದೆ ಕುಳಿತು ಗ್ರಂಥ ವ್ಯಾಸಂಗ ಪ್ರಾರಂಭ ಮಾಡಿದರು. ಶ್ರೀನಿವಾಸಾಚಾರ್ಯರು ಗ್ರಂಥಗಳನ್ನು ಓದಿ ಮನನ ಮಾಡಿಕೊಂಡು, ಬುದ್ಧಿಯಲ್ಲಿ ಗ್ರಂಥಗತ ವಿಷಯಗಳನ್ನು ಸ್ಥಿರೀಕರಿಸಿಕೊಂಡು ನಂತರ ತಮ್ಮಂದಿರಿಬ್ಬರಿಗೂ ಪಾಠ ಹೇಳುತ್ತಿದ್ದರು. ಈ ವ್ಯವಸ್ಥೆಯು ತಮ್ಮಂದಿರಿಗೆ ಇಷ್ಟವಾಗಿತ್ತು. ಅವರಿಗೆ ಅಣ್ಣಂದಿರು ಹೇಳುವ ಪಾಠ ಇವರಿಗೆ ಮನನ ರೂಪವಲ್ಲದೇ, ಸಂದೇಹಾದಿಗಳನ್ನು ನಿವಾರಣೆಮಾಡಿ "ಇದಂ ಇತ್ಥಂ" ಎಂಬ ದಾರ್ಢ್ಯಜ್ಞಾನ ಬುದ್ಧಿಯಲ್ಲಿ ರೂಢಿಸುತ್ತಿತು, "आचार्यात्पादमाधत्ते" ಎಂಬ ವಾಕ್ಯಾನುಸಾರ ಇವರುಗಳ ವಿದ್ಯಾಪ್ರಗತಿ ಸಾಗಿತು.

ಹೀಗೆಯೇ ಮೂರು ವರ್ಷಗಳು ಸಂಪೂರ್ಣವಾಗಿ ಕಳೆಯುವ ವೇಳೆಗೆ ಇವರೆಲ್ಲರ ವ್ಯಾಸಂಗವು ಮುಗಿದವು. ಈ ವೇಳೆಯಲ್ಲಿ ಶ್ರೀನಿವಾಸಾಚಾರ್ಯರು ತಮ್ಮಂದಿರಿಗೆ ಸಮಗ್ರ ಮಧ್ವಶಾಸ್ತ್ರವನ್ನು ಸುಧಾಂತದವರೆಗೂ ಭಾಗವತ ಭಾರತಾದಿ ಪುರಾಣಗಳು, ನ್ಯಾಯಶಾಸ್ತ್ರದಲ್ಲಿ ಕಾಣಾದ, ವೈಶೇಷಿಕ ಸೂತ್ರಗಳು ಉದಯನರ ಭಾಷ್ಯಗಳೂ, ಮಣಿ-ದೀಧಿತಿ ಮತ್ತು ಗಾದಾಧರಿ ಗ್ರಂಥಗತ ವಾದಗಳೂ ಅಂತಿಮ ಘಟ್ಟವಾದ ಕ್ರೋಡಪತ್ರಗಳನ್ನೂ (Research Papers) ಪಾಠ ಹೇಳಿ ಉದ್ದಾಮ ಪಂಡಿತರನ್ನಾಗಿ ಮಾಡಿದರು. ಅತ್ಯಾಶ್ಚರ್ಯವೆಂದರೆ, ಬಾಳಾಚಾರ್ಯರ ದಯದಿಂದ, ಇವರೆಲ್ಲರಿಗೂ ತಾವುಗಳು ಗುರುಮುಖೇನ ಮನದಟ್ಟಾಗುವಂತೆ ಸಂದೇಹಾದಿಗಳನ್ನು ದೂರೀಕರಿಸಿ ಮಾಡಿದ ಅಧ್ಯಯನದ ತೃಪ್ತಿ ಇತ್ತು. ಆಚಾರ್ಯರ ದಯದಿಂದ ಶಾಸ್ತ್ರಗಳು ಸ್ವಾಧೀನವಾದವು.

ಪೂರ್ವಪಕ್ಷಗಳ ಮಂಡನ ರೀತಿ, ಅದರ ಮೇಲೆ ವಿಸ್ತೃತಗೊಳ್ಳುವ ವಾಕ್ಯಾರ್ಥ ಸ್ವರೂಪ, ಕೋಟಿ ಕ್ರಮ, ವಾದ ವೈಖರಿ, ಸ್ವಮತ ಯುಕ್ತಿಗಳ ಸ್ವಾರಸ್ಯ, ಬಲಾಬಲಗಳ ಚಿಂತನ, ಶ್ರೀಮದಾಚಾರ್ಯರ, ಟೀಕಾರಾಯರ, ವಾದಿರಾಜರ, ವ್ಯಾಸತೀರ್ಥರ, ರಾಘವೇಂದ್ರತೀರ್ಥರ ಇತ್ಯಾತಿ ಮಧ್ವ/ಮಾಧ್ವರ ವಾದಿಗಳಿಗೆ ಮಣಿಯದ ವಾಗ್ವೈಖರಿ (uncompromising arguments), ಅಖಂಡಿತವಾದ ಮಾನಗಳು/ಯುಕ್ತಿಗಳು. ದ್ವೈತ ಸಿದ್ಧಾಂತದ ಮೇಲ್ಮೆ ಮತ್ತು ಚಮತ್ಕೃತಿ, ಆಶ್ಚರ್ಯಗೊಳಿಸುವ/ಅದ್ಭುತ ವ್ಯಾಖ್ಯಾನಗಳು ಹಂತ ಹಂತವಾಗಿ ಮನನವಾದವು. ಅಚಿರಕಾದದಲ್ಲಿಯೇ ಖಂಡನ-ಮಂಡನ ಸ್ವಮತ ಸ್ಥಾಪನೆಗಳಲ್ಲಿ ಪ್ರಾವಿಣ್ಯತೆ ಪಡೆದು ಧೀಮಂತರಾದರು. ವೇದ, ವೇದಾಂತ ನ್ಯಾಯ ವ್ಯಾಕರಣ, ಸಾಹಿತ್ಯ ಇತ್ಯಾದಿ ಕ್ಷೇತ್ರಗಳಲ್ಲಿ ಶ್ರೇಷ್ಠ ವಿದ್ವಾಂಸರ ಮಟ್ಟಕ್ಕೇರಿದರು. ಇದೆಲ್ಲವೂ ಕೇವಲ ಮೂರು ವರ್ಷಗಳಲ್ಲಾದ ಸಾಧನೆ.

ಇಷ್ಟು ಜ್ಞಾನವನ್ನು ಅಲ್ಪಕಾಲಾವಧಿಯಲ್ಲಿ ಸಾಧಿಸಿದ್ದು ಕೇವಲ ಬುದ್ಧಿವಂತಿಕೆಯ ಸಾಹಸವಲ್ಲ. ಎಂಥ ತೀಕ್ಷ್ಣಬುದ್ಧಿಯುಳ್ಳ ಬಾಲಕನಿಗೂ ಇಷ್ಟೆಲ್ಲ ಸ್ವಾಧೀನವಾದರೂ ಆಗಲೂ ಹತ್ತು-ಹನ್ನೆರಡು ವರ್ಷಗಳ ಅವಧಿ ಬೇಕೆಬೇಕಾಗುತ್ತದೆ. ಆದರೆ ಈ ಯುವಕರ ಪಾಲಿಗೆ ಇದ್ದದ್ದು ಎಲ್ಲಕ್ಕೂ ಹೆಚ್ಚಿನದು ಗುರುಗಳಾದ ಬಾಳಾಚಾರ್ಯರ ಅನುಗ್ರಹ-ಅದೇ ದೈವೀಬಲ. "ಗುರು ಪ್ರಸಾದೋ ಬಲವಾನ್ ನ ತಸ್ಮಾತ್ ಬಲವತ್ತರಂ" ಎಂಬ ಭಾಷ್ಯೋಕ್ತಿಯಂತೆ ಇವರ ಅನುಭವ. ಬಾಳಾಚಾರ್ಯರು ಪಾಠ ಹೇಳುವಾಗ ಉಪಯೋಗಿಸುತ್ತಿದ್ದ ಆ ಬೆನ್ನು ಮಣೆಯು ಮತ್ತು ಅವರ ಪುತ್ರರು ಯಾವ ಮಣೆಯ ಮುಂದೆ ಅಭಿಮುಖವಾಗಿ ಕುಳಿತು ವ್ಯಾಸಂಗ ಮಾಡಿ ವಿದ್ಯಾಸಂಪತ್ತನ್ನು ಪಡೆದರೋ ಆ ಪವಿತ್ರವಾದ ಬೆನ್ನು ಮಣೆಯು ಶ್ರೀಸತ್ಯಪರಾಕ್ರಮತೀರ್ಥರ ಸನ್ನಿಧಾನದಲ್ಲಿ ಈಗಲೂ ವಿರಾಜಮಾನವಾಗಿದೆ.

ಸ್ವಪ್ನ ಸತ್ಯವೆಂಬುದು ಕೇವಲ ಪುಸ್ತಕ ಪ್ರಪಂಚದ ಜ್ಞಾನವಾಗದೇ ಅನುಭವಜನ್ಯಜ್ಞಾನವಾಯಿತು. "**ಓಂ ಸಂಧ್ಯೇಸೃಷ್ಟಿರಾಹಹಿ ಓಂ**" ಎಂಬ ಬ್ರಹ್ಮಸೂತ್ರದ ತೃತೀಯ ಅಧ್ಯಾಯದ, ಎರಡನೆಯ ಪಾದದ ಮೊದಲಸೂತ್ರದ

ವಿವರಣೆಯಂತೆ ಸ್ವಪ್ನಾವಸ್ಥಾಪ್ರೇರಕ ತೈಜಸನಾಮಕ ಪರಮಾತ್ಮನ ಆದೇಶ ವನ್ನು ನಿಸ್ಸಂದೇಹವಾಗಿ ಪರಿಪಾಲಿಸಿ, ಅನುಭವಜನ್ಯಜ್ಞಾನರೂಪ ಫಲಭಾಗಿ ಗಳಾದ ವ್ಯಕ್ತಿಗಳಿವರು. ಇವರ ವಿದ್ಯಾರ್ಜನೆಯಲ್ಲಿ ಹೇಗೆ ಒಂದು ಅಸಾಧಾರಣ ಸ್ವರೂಪವಿದೆಯೋ ಅದೇ ರೀತಿ ಇವರ ವಿದ್ವತ್ತಿನಲ್ಲಿಯೂ ಒಂದು ಅಸಾಧಾರಣ ಉತ್ಕೃಷ್ಟ ಪ್ರಖರತೆ ಇರುತ್ತದೆಂಬ ಅಂಶವನ್ನು ಗಮನಿಸುತ್ತಾ ಈ ಗ್ರಂಥದಲ್ಲಿ ಮುಂದುವರಿಯುವಾ.

## ಕೀರ್ತಿ ವಿಸ್ತೃತಿ–೩

ವಾಯಿ ಬಾಳಾಚಾರ್ಯರು ವೈಕುಂಠ ಯಾತ್ರೆ ಮಾಡಿದ ಮೇಲೆ, ಅವರ ಶಿಷ್ಯರೇನೋ ಸ್ವಂತ ಸ್ಥಳಗಳಿಗೆ ತೆರಳಿದರೂ, ಮರಡೂರಿನಲ್ಲಿ ಏನು ನಡೆಯುತ್ತಲಿದೆ ? ಮೇಧಾವಿಗಳಾದ ಗುರುಪುತ್ರರು ಎಲ್ಲಿ ಇದ್ದಾರೆ ? ಏನು ಮಾಡುತ್ತಿದ್ದಾರೆ ? ಮುಂದಿನ ವ್ಯಾಸಂಗ ಎಲ್ಲಿ ನಡೆಯುತ್ತದೆ ? ಹೇಗೆ ನಡೆಯುತ್ತದೆ ? ಎಂಬ ಮುಂತಾದ ವಿಷಯಗಳಲ್ಲಿ ಅವರಿಗೆ ಕುತೂಹಲ ಇದ್ದೇ ಇತ್ತು. ಅವರು ಇಲ್ಲಿಯ ಸಮಾಚಾರಗಳನ್ನು ಆಗಾಗ್ಗೆ ತಿಳಿದು ಕೊಳ್ಳುತ್ತಿದ್ದರು.

ಗುರುಪುತ್ರರು ವ್ಯಾಸಂಗಕ್ಕಾಗಿ ಬೇರೆ ಎಲ್ಲಿಗೂ ಹೋಗಿಲ್ಲವೆಂದೂ ಅವರು ಮರಡೂರಿನಲ್ಲಿಯೇ, ಬಾಳಾಚಾರ್ಯರ ಬೆನ್ನು ಮಣೆಯ ಮುಂದೆ ಕುಳಿತು (ಗುರುಮುಖೇನ)ಅಧ್ಯಯನ ಮಾಡುತ್ತಾರೆಂಬುದು ವಿದ್ಯಾರ್ಥಿಗಳು ವಾರ್ಷಿಕ ಪುಣ್ಯ ತಿಥಿಗೆ ಬಂದಾಗಲೇ ಸರ್ವರಿಗೂ ವಿದಿತವಾಯಿತು. ಗುರು ಪುತ್ರರ ಅಧ್ಯಯನ ಕ್ರಮಾದಿಗಳೂ ಅವರ ಜ್ಞಾನಾಭಿವೃದ್ಧಿಯೂ ಸಹವೇದ್ಯ ವಾದವು. ಇದೊಂದು ಬಾಳಾಚಾರ್ಯರ ಮಹಿಮೆ ಎಂದು ಪ್ರಸಿದ್ಧಿಯಾಯಿತು. ಶಿಷ್ಯರು ಗುರುಗಳ ಈ ಮಹಿಮೆಯನ್ನು ಕೊಂಡಾಡಿದರು.

ಗುರುಗಳ ಮಹಿಮೆ ಒಂದು ಪ್ರಕಾರವಾದರೆ, ಅವರ ಪುತ್ರರು ಅತ್ಯಂತ ಅಲ್ಪವೇಳೆಯಲ್ಲಿ ಅಧ್ಯಯನ ಮುಗಿಸಿ ಪ್ರಕಾಂಡ ಪಂಡಿತರಾದದ್ದು ಇನ್ನೊಂದು ಮಹಿಮೆ. ಹೀಗೆ ಗುರಶಿಷ್ಯರ ಕೀರ್ತಿ ದಶ ದಿಕ್ಕುಗಳಲ್ಲಿ ತುಂಬಲು ಬಹಳ ಸಮಯ ಹಿಡಿಸಲಿಲ್ಲ.

ಶ್ರೀನಿವಾಸಾಚಾರ್ಯರ ಮತ್ತು ಅವರ ತಮ್ಮಂದಿರ ಅಧ್ಯಯನ ಮುಗಿಯುವ ವೇಳೆಗೆ ಇವರ ವಿದ್ಯಾ ಪ್ರಗತಿ ಮತ್ತು ಪಾಂಡಿತ್ಯದ ಕೀರ್ತಿ ಬಹುಸ್ಥಳಗಳಲ್ಲಿ ಕೇಳಲ್ಪಟ್ಟಿತ್ತು.

ಇದಾದ ಸ್ವಲ್ಪ ದಿನಗಳಲ್ಲಿಯೇ ಬಾಳಾಚಾರ್ಯರ ಪುಣ್ಯದಿನ ಬಂದಿತು. ಆಗ ಅವರ ಮೊದಲಿನ ಶಿಷ್ಯರೆಲ್ಲ ಸೇರಿದ್ದರು. ಪುಣ್ಯದಿನಕ್ಕೆ ಸಂಬಂಧಪಟ್ಟ ವಿಶೇಷ ಕಾರ್ಯಕ್ರಗಳೆಲ್ಲ ನಿರ್ವಿಘ್ನ ಪರಿಸಮಾಪ್ತಿ ಹೊಂದಿದವು. ನಂತರ ಶ್ರೀನಿವಾಸಾಚಾರ್ಯರು ಎಲ್ಲ ವಿದ್ವಾಂಸರನ್ನು ಕುರಿತು ಹೀಗೆ ಹೇಳಿದರು. "ಹೇ ವಿದ್ವನ್ಮಣಿಗಳೇ ನೀವೆಲ್ಲರೂ ಒಂದಾಗಿ ಚತುಶ್ಶಾಸ್ತ್ರದಲ್ಲಿಯೂ ನಿರ್ಭೀತಿ ಯಿಂದಲೂ ನಿರ್ದಾಕ್ಷಿಣ್ಯವಾಗಿಯೂ ಪೂರ್ವಪಕ್ಷಮಾಡಿ ನಮ್ಮನ್ನು ನಿರುತ್ತರ ರನ್ನಾಗಿಮಾಡಬೇಕು. ಇದೇ ನಿಮ್ಮ ಗುರುಗಳಿಗೆ ಮಾಡತಕ್ಕ ಉತ್ತಮ ಪೂಜೆ. ಇಂಥ ವಿದ್ವತ್ ಪ್ರತಿಭೆ ಪ್ರಕಟನಾದಿಗಳಿಂದಲೇ ಗುರುಗಳಿಗೆ ತೃಪ್ತಿಕರ ವಾದ ಗುರುದಕ್ಷಿಣೆ ಸಲ್ಲಿಸಿದಂತಾಗುವದು" ಎಂದು ನುಡಿದರು.

ಬಾಳಾಚಾರ್ಯರ ಶಿಷ್ಯರೆಲ್ಲ ಒಂದಾಗಿ ವಿಚಾರ ಮಾಡಿದರು. ಗುರು ಪುತ್ರರ ಇಚ್ಛಾನುಸಾರ ಎಲ್ಲರೂ ಒಂದೇ ಪಕ್ಷಕ್ಕೆ ಸೇರಿ ವಾದ ಮಾಡುವದಾಗಿ ನಿರ್ಧರಿಸಿದರು. ಗುರು ಪುತ್ರತ್ರಯರು ಒಂದು ಕಡೆ ಆದರು.

ಅನೇಕ ಶಾಸ್ತ್ರ ವಿಷಯಗಳಲ್ಲಿ ವಾಕ್ಯಾರ್ಥವು ನಡೆಯಿತು. ಪಕ್ಷ ಪ್ರತಿ ಪಕ್ಷದವರೂ ಜಿಗೀಷುತಾ ಇಚ್ಛೆಯುಳ್ಳವರಾಗಿ ವಾದ ಮಾಡಿದರು. ಮಾರ್ಮಿಕ ವಾದ ಪ್ರಶ್ನೆಗಳನ್ನು ಕೇಳಿದರು. ಗುರುಪುತ್ರರನ್ನು ನಿರುತ್ತರ ಮಾಡತಕ್ಕ ಎಲ್ಲ ತರಹದ ಯುಕ್ತಿ, ಪ್ರಶ್ನೆ, ಖಂಡನ ಇತ್ಯಾದಿಗಳ ಸುರಿಮಳೆಸುರಿಸಿದರು. ಮುಖಭಂಗ ಮಾಡುವ ಪ್ರಯತ್ನವೇನೋ ಅನ್ನುವಂತಿತ್ತು. ಈ ತರಹ ಕಾರ್ಯ ಮೂರುದಿನಗಳು ನಿರಂತರ ಜರುಗಿದವು. ಗುರುಪುತ್ರರುಗಳು ಮಾತ್ರ ಎಲ್ಲ ಪೂರ್ವಪಕ್ಷೀಯ ಪ್ರಶ್ನೆಗಳಿಗೂ ಸಮಂಜಸವಾದ ಉತ್ತರವನ್ನು

ಪ್ರಶಾಂತಚಿತ್ತರಾಗಿಯೇ ಕೊಡುತ್ತಿದ್ದರು. ಶಾಸ್ತ್ರ ಸಾಗರದಲ್ಲಿ ಲೀಲಾಜಾಲವಾಗಿ ವಿಹರಿಸುತ್ತಿದ್ದರು. "ಮಧ್ವಮತಾಬ್ಧಿಯಲಿ ಮೀನಾಗಿ ಇರಬೇಕು" ಎಂಬ ಪುರಂದರದಾಸರ ವಾಣಿ ಸಾರ್ಥಕ್ಯಮಾಡಿದ ಮಹನೀಯರೇನೋ ಇವರು ಎಂಬಂತ್ತಿತ್ತು. **ನ್ಯಾಯವೇದಾಂತಾದಿ ಚತುಶ್ಶಾಸ್ತ್ರಗಳಲ್ಲಿ ಇವರುಗಳ ಪರಿಶ್ರಮ ಪರಿಣತಿಗಳನ್ನು ನೋಡಿದರೆ, ಭವಿಷ್ಯತ್ಕಾಲದಲ್ಲಿ ಇವರುಗಳ ಪಾಲಿಗೆ ಬರತಕ್ಕ ಮಾಧ್ವಪೀಠದ ರಕ್ಷಣಾಭಾರವನ್ನು ನಿರ್ವಹಿಸತಕ್ಕ ರಕ್ಷಣಾ ಪಡೆಯ ವೀರ ವೈಷ್ಣವಭಟರಂತಿದ್ದಾರೆ ಈ ಮಹನೀಯರು.** ಬಾಳಾಚಾರ್ಯರ ಶಿಷ್ಯರೆಲ್ಲರೂ ಗುರುಪುತ್ರರ ವಿದ್ವತ್ತನ್ನು ಕಂಡು ಆನಂದಸಾಗರದಲ್ಲಿ ಮುಳುಗಿದರು. ಇದಲ್ಲದೆ ತಮ್ಮ ಗುರುಗಳಾದ ಬಾಳಾಚಾರ್ಯರ ಪೀಠದ ಮಹಿಮೆಯನ್ನು ಕೊಂಡಾಡುತ್ತ, ತಮಗೆಲ್ಲ ಅಂಥ ಶ್ರೇಷ್ಠ ಸದ್ಗುರುಗಳ ಶಿಷ್ಯತ್ವ ಭಾಗ್ಯ ಸಿಕ್ಕಿದ್ದು ಸುದೈವವೆಂದು ಮನಸ್ಸಿನಲ್ಲಿಯೇ ಸಂತೋಷ/ಹೆಮ್ಮೆಪಡುತ್ತ ಸ್ವಸ್ಥಳಗಳಿಗೆ ತೆರಳಲುದ್ಯುಕ್ತರಾದರು. ಹೊರಡುವ ಮುನ್ನ ಇನ್ನೂ ಒಂದು ಮುಖ್ಯ ವಿಷಯದ ಬಗ್ಗೆ ವಿಚಾರ ಮಾಡಿದರು. ಶಿಷ್ಯರೆಲ್ಲರೂ ಗುರುಪುತ್ರರೊಂದಿಗೆ ಗದ್ವಾಲದ ವಿದ್ವತ್ಸಭೆಗೆ ಹೋಗಬೇಕೆಂದು ನಿರ್ಧರಿಸಿದರು. ಈ ಮುಖ್ಯ ನಿರ್ಣಯದ ನಂತರ ತಮ್ಮ ಊರಿಗೆ ತೆರಳಿದರು.

ಇದಾದ ನಂತರ ಸ್ವಲ್ಪ ಕಾಲದಲ್ಲಿಯೇ ಸಂಚಾರ ಕ್ರಮೇಣ ಶ್ರೀಪರ್ತಗಾಳಿ ಮಠಾಧೀಶರು ಮರಡೂರಿಗೆ ದಯಮಾಡಿಸಿದರು. ಅವರೂ ಸಹ ಈ ಶ್ರೀನಿವಾಸಾಚಾರ್ಯರ ಖ್ಯಾತಿಯನ್ನು ಕೇಳಿಯೇ ಬಂದವರು. ಆ ಮಠದ ಪ್ರಧಾನ ಪಂಡಿತರಾದ ಆನಂದ ಬಾಳಾಚಾರ್ಯರು ನ್ಯಾಯಶಾಸ್ತ್ರದಲ್ಲಿ ಅದ್ಭುತ ಪಂಡಿತರೆಂದು ಪ್ರಖ್ಯಾತರಾಗಿದ್ದರು. ಅವರಿಗೂ ವಾಯಿಶ್ರೀನಿವಾಸಾಚಾರ್ಯರಿಗೂ ಪರಸ್ಪರ ಭೇಟಿಯಾದೊಡನೆ "ಬಾಧ" ಗ್ರಂಥದಲ್ಲಿ ಒಂದು ಪೂರ್ವಪಕ್ಷ ಮಾಡಿ ಅಲ್ಲಿ ಅನುಗಮ ಮಾಡಿ ತೋರಿಸಬೇಕೆಂದು ವಾಯಿ ಆಚಾರ್ಯರನ್ನು ಪ್ರಶ್ನಿಸಿದರು.

"ಪ್ರಸಕ್ತವಾದ ಈ ಗ್ರಂಥದಲ್ಲಿ ಅನುಗಮ ಮಾಡಲು ಬರುತ್ತದೆ ಎಂದು ತಿಳಿಸಿದರು" ವಾಯಿ ಆಚಾರ್ಯರು.

"ಬ್ರಹ್ಮಣಾಪಿಕರ್ತುಂ ನ ಶಕ್ಯತೇ" ಎಂದು ನುಡಿದ ಅನಂದ ಬಾಳಾಚಾರ್ಯರ ಮಾತು ಮುಗಿಯುವದರೊಳಗೆ, ಶ್ರೀನಿವಾಸಾಚಾರ್ಯರ ಉತ್ತರ ಪ್ರಾರಂಭವಾಗಿಯೇ ಬಿಟ್ಟಿತು. ಅತ್ಯಂತ ಅನಾಯಾಸವಾಗಿ(**ನಿರರ್ಗಳವಾದ**) ಅಸ್ಖಲಿತ ವಾಣಿಯಲ್ಲಿ ಅನುಗಮ ಮಾಡಿ ತೋರಿಸಿಯೇ ಬಿಟ್ಟರು. ಇವರಿಂದ ಉತ್ತರ ಹೇಳಲು ಸಾಧ್ಯವಿಲ್ಲೆಂದು ಊಹಿಸಿದ ಆನಂದ ಬಾಳಾಚಾರ್ಯರಿಗೆ ಪರಮಾಶ್ಚರ್ಯವಾಯಿತು. ಇವರ ಅಪ್ರತಿಮ ಪಾಂಡಿತ್ಯಕ್ಕೆ ಮೆಚ್ಚಿ ಪುಷ್ಕಳ ಪ್ರಶಂಸಾ ಮಾಡಿ ಆನಂದಪಟ್ಟರು. ಮುಂದೆ ಮಠಾಧೀಶರು ಗಳಗನಾಥಕ್ಕೆ ಪ್ರಯಾಣ ಬೆಳೆಸಿದರು.

ಇತ್ತ ಶ್ರೀನಿವಾಸಾಚಾರ್ಯರು ತಮ್ಮ ಪಿತೃಗಳ ಉಪಾಸ್ಯಮೂರ್ತಿಯಾದ ಶ್ರೀರಾಮಚಂದ್ರದೇವರ ಪ್ರತಿಮೆಯನ್ನು ಯಥಾಸಾಂಗವಾಗಿ ಉಪಾಸನೆ/ಪೂಜೆಗಳನ್ನು ಮಾಡುತ್ತ ಕೆಲವು ಕಾಲ ಕಳೆಯುವದರೊಳಗಾಗಿ ಮೊದಲೇ ವಿಚಾರ ಮಾಡಿದ ಗದ್ವಾಲ ಸಭೆಯಕಾಲ ಸಮೀಪಿಸಲಾರಂಭಿಸಿತು. ಆಗ ಇವರು ತಮ್ಮ ತಮ್ಮಂದಿರಾದ ಜಯಾಚಾರ್ಯರೊಡನೆ ಗದ್ವಾಲಕ್ಕೆ ಹೊರಡಲು ಸನ್ನದ್ಧರಾದರು. ಅವರು ಮೊದಲು ಲಕ್ಷ್ಮೇಶ್ವರ, ಕರ್ಜಗಿ ಮಾರ್ಗವಾಗಿ ಶ್ರೀಸತ್ಯಬೋಧ ಶ್ರೀಪಾದಂಗಳವರ ಕ್ಷೇತ್ರವಾದ ಸವಣೂರಿಗೆ ಸಂಚಾರ ಕ್ರಮದಿಂದ ತಲುಪಿದರು. ಅಲ್ಲಿಂದ ಮುಂದೆ ಸಮೀಪಸ್ಥಳವಾದ ಹತ್ತೀಮತ್ತೂರು ಎಂಬ ಊರಿಗೆ ದಯಮಾಡಿಸಿದರು. ಅದು ಶ್ರೀ ಸತ್ಯೇಷ್ಟ ತೀರ್ಥ ಶ್ರೀಪಾದಂಗಳವರ (ಶ್ರೀ ನರಸಿಂಹಾಚಾರ್ಯರ) ಪೂರ್ವಾಶ್ರಮದ ಜನ್ಮಭೂಮಿ. ಅವರಲ್ಲಿ ಜ್ಞಾನ, ಭಕ್ತಿ ಮತ್ತು ವೈರಾಗ್ಯಗಳ ಆಕರ ಸ್ಥಾನವಾಗಿದ್ದುದನ್ನು ಕಾಣಬಹುದು.

ಅವರ ಕಾಲದಲ್ಲಿ ಗ್ರಂಥಗಳು ಅಚ್ಚಾಗುವ ಸೌಕರ್ಯವಿಲ್ಲದ್ದರಿಂದ ವಿದ್ವಾಂಸರು ವಿದ್ಯಾರ್ಥಿಗಳು ಹಸ್ತಲೇಖನದಿಂದ ಗ್ರಂಥಗಳನ್ನು ಬರೆಯಬೇಕಾಗಿತ್ತು. ಈ ವಿಧಾನಕ್ಕೆ ಸಾಕಷ್ಟು ಕಾಲಾವಕಾಶಬೇಕಾಗಿತ್ತು. ಆದರೆ ಬರೆಯುವದೂ ಒಂದು ಅಧ್ಯಯನ ಕ್ರಮವೇ. ಅದೂ ಉತ್ತಮ ಧಾರ್ಮಿಕ/ಆಧ್ಯಾತ್ಮಿಕ ಗ್ರಂಥಗಳನ್ನು ಬರೆಯಬೇಕಾದರೆ ಸಮೀಪವರ್ತಿ ನದಿಗಳಲ್ಲಿ ಭಾಗೀರಥೀ ಸನ್ನಿಧಾನ ಬಂದಾಗ ನೀರು ತಂದು ಅದರಿಂದ ಮಸೀ ತಯಾರಿಸಿ

ಗ್ರಂಥಗಳನ್ನು ಬರೆಯುತ್ತಿದ್ದರು. ಶ್ರೀ ನರಸಿಂಹಾಚಾರ್ಯರು ಸಹ ಇಂಥ ಮಸಿಯನ್ನು ತಯಾರಿಸಿ ಮೂರು ಪ್ರತಿ ಶ್ರೀಮನ್ನ್ಯಾಯಸುಧಾಗ್ರಂಥಗಳನ್ನು ತಯಾರಿಸಿದ್ದರು. ಅದರಲ್ಲಿ ಒಂದು ಪ್ರತಿಯನ್ನು ಆಗಿನ ಕಾಲದಲ್ಲಿದ್ದ ಉತ್ತರಾದಿ ಮಠದ ಶ್ರೀ ಸತ್ಯಕಾಮತೀರ್ಥ ಶ್ರೀಪಾದಂಗಳವರಿಗೆ ಸಮರ್ಪಿಸಿದರು. ಎರಡನೆಯ ಪ್ರತಿಯನ್ನು ತಮ್ಮ ನಿತ್ಯ ಪಾಠ ಪ್ರವಚನಗಳಿಗೆ ಇಟ್ಟುಕೊಂಡರು. ಮೂರನೆಯ ಪ್ರತಿ ಹಾಗೆಯೇ ಇತ್ತು.

ವಾಯೀ ಆಚಾರ್ಯರು ಹತ್ತೀಮತ್ತೂರಿಗೆ ಬರಲು, ಅವರೊಂದಿಗೆ ಪುಷ್ಕಳ ಶಾಸ್ತ್ರಾರ್ಥ ವಿಚಾರಗಳನ್ನು ಮಾಡಲಾಗಿ ನರಸಿಂಹಾಚಾರ್ಯರು, ಇವರ ಜ್ಞಾನ ಪ್ರತಿಭೆ, ವಿನಯ, ಶಾಂತ, ಸ್ವಭಾವ, ಶ್ರೀಮದಾಚಾರ್ಯರ ಗ್ರಂಥಗಳಲ್ಲಿ ಪರಮಾಸಕ್ತಿ ಇತ್ಯಾದಿಗಳಿಂದ ಸಂತೃಪ್ತಿ ಹೊಂದಿ, ಅವರೇ ಸತ್ಪಾತ್ರರೆಂದು ಮೂರನೆಯ ಪ್ರತಿ ಶ್ರೀಮನ್ನ್ಯಾಯ ಸುಧಾ ಗ್ರಂಥವನ್ನು ಆಚಾರ್ಯರಿಗೆ ದಾನಕೊಟ್ಟು ಧನ್ಯತೆಪಡೆದರು. "ದಾನಂ ಧ್ರುವಂ ಫಲತಿ ಪಾತ್ರಗುಣಾನುಕೂಲ್ಯಾತ್" ಎಂಬ ಮಧ್ವವಿಜಯದ ವಾಕ್ಯದಂತೆ, ಎರಡು ಪ್ರತಿ ಶ್ರೀಮನ್ನ್ಯಾಯಸುಧಾಗ್ರಂಥಗಳನ್ನು ಸತ್ಪಾತ್ರರಿಗೆ ದಾನ ಮಾಡಿದ ಫಲವೋ ಎಂಬಂತೆ ನರಸಿಂಹಾಚಾರ್ಯರು ಶ್ರೀಸತ್ಯೇಷ್ಟತೀರ್ಥರಾಗಿ ಸರ್ವಜ್ಞಾಚಾರ್ಯರ ಪೀಠವನ್ನಲಂಕರಿಸಿದರು. ಪ್ರಕೃತ, ಮೂರು ದಿನಗಳ ನಂತರ ವಾಯೀ ಆಚಾರ್ಯರನ್ನು ಬೀಳ್ಕೊಟ್ಟರು.

ಅಲ್ಲಿಂದ ಶ್ರೀನಿವಾಸಾಚಾರ್ಯರು ಧಾರವಾಡಕ್ಕೆ ಪ್ರಯಾಣ ಬೆಳೆಸಿದರು ಅಲ್ಲಿ ವಾಸವಾಗಿದ್ದ ಪಂಡಿತರೊಬ್ಬರು "ನ್ಯಾಯರತ್ನ"ವೆಂಬ ಗ್ರಂಥವನ್ನು ರಚಿಸಿದ್ದರು. ಆಚಾರ್ಯರಿಗೂ ಮತ್ತು ನ್ಯಾಯರತ್ನಕಾರರಿಗೂ ಎರಡು ಮೂರುದಿನ ವಾಕ್ಯಾರ್ಥವಾಯಿತು. ನ್ಯಾಯರತ್ನವೆಂಬ ಗ್ರಂಥಸ್ಥ ಸತ್ಪ್ರತಿಪಕ್ಷ ವಿಷಯದಲ್ಲಿ ಅನೇಕ ದೋಷಗಳನ್ನು ಸಪ್ರಮಾಣವಾಗಿ ತೋರಿಸಿ, ದೂಷಣ ಗ್ರಂಥವನ್ನೇ ಪ್ರಚಾರ ಮಾಡಿದರು.

ಅದೇ ಊರಿನಲ್ಲಿದ್ದ, ಲಕ್ಷ್ಮೀನರಸಿಂಹ ಶಾಸ್ತ್ರಿಗಳೆಂಬ ತರ್ಕ ವಿದ್ವಾಂಸರು "ಶತಕೋಟಿ" ಎಂಬ ಗ್ರಂಥವನ್ನು ಖಂಡಿಸಿ "ಶತಕೋಟಿ ಖಂಡನ"ವೆಂಬ ಗ್ರಂಥವನ್ನು ರಚಿಸಿದ್ದರು. ಶ್ರೀವಾಯಿ ಆಚಾರ್ಯರು ಶಾಸ್ತ್ರಿಗಳ ಸಂಗಡ

ವಾಕ್ಯಾರ್ಥ ಮಾಡಿದರು. ಆಚಾರ್ಯರು ಖಂಡನಕ್ಕೆ ಪುನಃ ಮಂಡನವನ್ನು ಸಪ್ರಮಾಣವಾಗಿ ವಾದಿಸಿ ಸ್ಥಿರಪಡಿಸಿದರು. ಇಲ್ಲಿ ಆಚಾರ್ಯರಿಂದ ವ್ಯಕ್ತವಾದ ಪಾಂಡಿತ್ಯಕ್ಕೆ ಶಾಸ್ತ್ರಿಗಳು ಬಹುವಾಗಿ ಶ್ಲಾಘಿಸಿದರು ಮತ್ತು ಜ್ಞಾನಾನಂದವನ್ನು ಉಭಯತರೂ ಹಂಚಿಕೊಂಡರು.

ನಂತರ ಆಚಾರ್ಯರು ಗದಗ ಪಟ್ಟಣಕ್ಕೆ ಪ್ರಯಾಣ ಬೆಳೆಸಿದರು. ಅಲ್ಲಿ ತಮ್ಮ ಹಿರಿಯರಿಗೆ ಆಶ್ರಯಕೊಟ್ಟು ಪರಮಾನುಗ್ರಹ ಮಾಡಿದ ಕರುಣಾಮಯನಾದ ಶ್ರೀವೀರನಾರಾಯಣ ದೇವರದರ್ಶನ ಪಡೆದು ಧನ್ಯರಾದೆವೆಂದು ಕೊಂಡರು. ಆ ಊರಲ್ಲಿ ಸೋರಟೂರು ಶ್ರೀನಿವಾಸಾಚಾರ್ಯರೆಂಬವರು, ಬಾಳಾಚಾರ್ಯರ ಪ್ರಮುಖ ಶಿಷ್ಯರಲ್ಲೊಬ್ಬರು. ಅವರ ಮನೆಯಲ್ಲಿಯೆ ಗುರುಪುತ್ರರು ಬೀಡಾರಮಾಡಿದರು. ಶ್ರೀನಿವಾಸಾಚಾರ್ಯರ ಆನಂದಕ್ಕೆ ಪಾರವೇ ಇಲ್ಲ. ಗುರುಪುತ್ರರನ್ನು ಅತ್ಯಂತ ಆದರ ಗೌರವ ಭಕ್ತಿಯಿಂದ ಸತ್ಕರಿಸಿದರು. ಅಷ್ಟರಲ್ಲಿ ಸೊರಟೂರ ಆಚಾರ್ಯರು "ದ್ವೈತ-ಭೂಷಣವೆಂಬ ಗ್ರಂಥವನ್ನು ರಚಿಸಿದ್ದರು. ಅದು "ಶಂಕರಪಾದಭೂಷಣ"ವೆಂಬ ಅದ್ವೈತ ಗ್ರಂಥದ ಖಂಡನ ರೂಪವಾಗಿತ್ತು. ಆಚಾರ್ಯರು, ಗುರುಪುತ್ರರು ಬಂದ ಸಂದರ್ಭವೇ ಉಚಿತ ಸಂದರ್ಭವೆಂದರಿತು, ಅವರಿಗೆ "ದ್ವೈತ ಭೂಷಣ"ವೆಂಬ ಗ್ರಂಥವನ್ನು ಕಾಣಿಕೆಯಾಗಿ ಸಮರ್ಪಿಸಿದರು. ವಾಯೀ ಆಚಾರ್ಯರು ಆ ಗ್ರಂಥವನ್ನು ಸಂಪೂರ್ಣವಾಗಿ ಅವಲೋಕನ ಮಾಡಿ ಅನುಮೋದಿಸಿದ ನಂತರ "ದ್ವೈತ ಭೂಷಣ"ವೆಂಬ ಗ್ರಂಥವು ಪ್ರಕಾಶನ ಗೊಳಿಸಲ್ಪಟ್ಟಿತು. ಉಭಯತರೂ ಮೂರು ನಾಲ್ಕು ದಿನಗಳು ಶಾಸ್ತ್ರವಿಮರ್ಶಾದಿಗಳನ್ನು ಮಾಡಿ ಆನಂದಸಾಗರದಲ್ಲಿ ತೇಲಾಡುತ್ತಿದ್ದರು.

ಮೊದಲೇ ನಿರ್ಧರಿಸಿದಂತೆ ಈ ಸಮಯಕ್ಕೆ ಸರಿಯಾಗಿ ಬಾಳಾಚಾರ್ಯರ ಇನ್ನೊಬ್ಬ ಪ್ರಮುಖ ಶಿಷ್ಯರಾದ ಹುನಗುಂದ ನರಸಿಂಹಾಚಾರ್ಯರೂ, ಗದ್ವಾಲ ಸಭಾ ಸಂದರ್ಶನವನ್ನುದ್ದೇಶಿಸಿ ಗುರುಪುತ್ರರಿದ್ದ ಸ್ಥಳಕ್ಕೆ ಆಗಮಿಸಿದರು. ಎಲ್ಲರೂ ಸೇರಿ ಪ್ರಯಾಣ ಸಿದ್ಧತೆಯನ್ನು ನಡೆಸಿದರು.

# ಗದ್ವಾಲದಲ್ಲಿ ವಿದ್ವತ್ಸಭೆ-೭

ಹತ್ತೊಂಬತ್ತನೆಯ ಶತಮಾನ ಮತ್ತು ಇಪ್ಪತ್ತನೆಯ ಶತಮಾನ ಪೂರ್ವಾರ್ಧದವರೆಗೂ ಗದ್ವಾಲದಲ್ಲಿ ಪ್ರತಿವರುಷ ನಡೆಯುತಕ್ಕ ವಿದ್ವತ್ಸಭೆಯು ಬಹಳ ಪ್ರಸಿದ್ಧವಾಗಿತ್ತು. ಗದ್ವಾಲ ರಾಜಮನೆತನದವರು ಸಂಸ್ಕೃತದ ಮೇಲಿಟ್ಟ ಒಂದು ಅಭಿಮಾನ ವಿಶೇಷದಿಂದ ಈ ಸಭೆಯು ಅಷ್ಟು ಉತ್ಸಾಹ ವಿಜೃಂಭಣೆಗಳಿಂದ ನೆರವೇರುತ್ತಿತ್ತು. ರಾಜಪೋಷಿತ ಕಾರ್ಯಕ್ರಮವಾದ್ದರಿಂದ ಮೂರುದಿನ ಸಭಾಕಾಲದಲ್ಲಿ ವಿದ್ವಾಂಸರಿಗೆ ಉತ್ತಮ ವಸತಿ ಆದರೋಪಚಾರಗಳು, ವಿದ್ವತ್ತಿಗೆ ತಕ್ಕ ಮರ್ಯಾದೆ, ತೃಪ್ತಿಕರ ಸಂಭಾವನೆ ಇವೆಲ್ಲವೂ ದೊರೆಯುತ್ತಿದ್ದವು. ಅಲ್ಲದೇ ದೇಶವಿದೇಶಗಳಿಂದ ಬಂದ ವಿದ್ವಾಂಸರ ಪರಸ್ಪರ ಪರಿಚಯ, ವಿವಿಧ ವಿದ್ವತ್ ಕ್ಷೇತ್ರಗಳಲ್ಲಿ ನಡೆದ ಪ್ರಗತಿ, ನೂತನ ಗ್ರಂಥ ಪ್ರಕಟಣೆಗಳು, ನೂತನಪರಿಚಯ ಮತ್ತು ಸ್ನೇಹ ಇತ್ಯಾದಿಗಳಿಗೆ ಅತ್ಯುತ್ತಮ ಸುಸಂಧಿಯಾಗಿತ್ತು. ಇದರ ಸದುಪಯೋಗವನ್ನವರು ಪಡೆಯುತ್ತಲೇ ಇರುತ್ತಿದ್ದರು. ಈಗಿನಂತೆ ಸಾರಿಗೆ, ಅಂಚೆ ಮತ್ತು ಅಚ್ಚು ಯಂತ್ರಗಳಿಲ್ಲದ ಕಾಲದಲ್ಲಿ ವಿದ್ವತ್ ಸಭೆಗಳೇ ವಿಚಾರ ವಿನಿಮಯ ಮತ್ತು ಲೇಖನ ಸಂದೇಶಾದಿಗಳನ್ನು ದೇಶಾಂತರಗಳಿಗೆ ಪ್ರಸಾರ ಇತ್ಯಾದಿಗಳಿಗೆ ಇದು ಒಂದು ಉತ್ತಮ ಕೇಂದ್ರ ಸ್ಥಳವಾಗಿತ್ತು. ಇದ್ದ ಸೌಕರ್ಯಗಳಲ್ಲಿಯೇ ಪೂರ್ವಿಕರು ಇಡೀ ಭರತ ಖಂಡದಲ್ಲಿ ಸಂಸ್ಕೃತವನ್ನು ಪ್ರಸಾರ ಮಾಡುವದಲ್ಲಿದೇ ಧಾರ್ಮಿಕ/ಸಾಂಸ್ಕೃತಿಕ/ವೇದೋಕ್ತ ಸಂಸ್ಕಾರಗಳ ಐಕ್ಯತೆಯನ್ನು ಸಾಧಿಸಿದ್ದರು. ಇಲ್ಲಿ ನಡೆದ ಇಂಥ ಒಂದು ವಿದ್ವತ್ ಸಭೆಗೆ ಪ್ರಥಮ ಸಲ ವಾಯಿ ಆಚಾರ್ಯರೂ ಆಗಮಿಸಿದರು.

ಆಚಾರ್ಯರ ಸಂಚಾರವೆಲ್ಲ ಪಲ್ಲಕ್ಕಿಯಲ್ಲಿ ಕುಳಿತೇ ಆಗುತ್ತಿತ್ತು. ಪೂರ್ವದಲ್ಲಿಯೇ ಸಂಕಲ್ಪಿಸಿದಂತೆ ಗದ್ವಾಲ ಸಭೆಗೆ ಪ್ರಾಚೀನ ಅರ್ವಾಚೀನ ಶಿಷ್ಯ ಮಂಡಲಿಯೊಡನೆ ಹೊರಡುವ ವ್ಯವಸ್ಥೆಯಾಗಿತ್ತು. ಹುನಗುಂದ

ನರಸಿಂಹಾಚಾರ್ಯರು ಮತ್ತು ಸೊರಟೂರು ಶ್ರೀನಿವಾಸಾಚಾರ್ಯರು ಇತ್ಯಾದಿ ಬಾಳಾಚಾರ್ಯರ ಶಿಷ್ಯರದು ಪ್ರಾಚೀನ ಪಂಡಿತರ ತಂಡ. ಆಚಾರ್ಯರ ತಮ್ಮಂದಿರೂ ಮತ್ತು ಶಿಷ್ಯರೂ ಆದ ಚಿಕ್ಕಆಚಾರ್ಯರು(ಜಯಾಚಾರ್ಯರು) ಇತ್ಯಾದಿ ಶಿಷ್ಯ ಮಂಡಳಿ, ಸ್ವಶಿಷ್ಯಮಂಡಳಿ, ಇದು ಅರ್ವಾಚೀನ ಪಂಡಿತರ ತಂಡ. ಇವರೆಲ್ಲರನ್ನೂ ಕರೆದು ಕೊಂಡು ಗದ್ವಾಲಕ್ಕೆ ಪ್ರಯಾಣ ಬೆಳೆಸಿದರು.

ಗದ್ವಾಲದಲ್ಲಿ ಆ ವಿದ್ವತ್ಸಭೆಗೆ ಸಂಬಂಧಪಟ್ಟ ಕೆಲವು ನಿಯಮಗಳಿದ್ದವು. ಶ್ರೀಸಂಸ್ಥಾನದಿಂದ ಅಥವಾ ಅಧಿಕೃತವಾದ ಬೇರೆ ಸಂಸ್ಥೆಗಳಿಂದ ಪಂಡಿತರೆಂದು ಪ್ರಸಿದ್ಧರಾದವರೇ ಪಲ್ಲಕ್ಕಿಯಲ್ಲಿ ಕುಳಿತು ಬರಬೇಕಲ್ಲದೇ ವಂಶಗೌರವದಿಂದ ಮಾತ್ರ ಆರೀತಿ ಬಂದರೆ ಅಂಥವರಗೆ ನಗರದಲ್ಲಾಗಲಿ ಅಥವಾ ಸಭೆಯಲ್ಲಾಗಲಿ ಪ್ರವೇಶವಿಲ್ಲೆಂದು ರಾಜದೂತರು ತಡೆಯುತ್ತಿದ್ದರು. ಪ್ರಕೃತ ವಾಯೀ ಆಚಾರ್ಯರ ಪಲ್ಲಕ್ಕಿಗೂ ರಾಜದೂತರಿಂದ ತಡೆ ಉಂಟಾಯಿತು. ಸಂಸ್ಥಾನದ ಅಧಿಕೃತ ವಿದ್ವಾಂಸರಿಗೂ ಮತ್ತು ಆಚಾರ್ಯರ ಶಿಷ್ಯಂದಿರಿಗೂ ಈ ವಿಷಯ ದಲ್ಲಿ ಘರ್ಷಣೆ ಉಂಟಾಯಿತು. ಆಗ ವಾಯಿ ಶ್ರೀನಿವಾಸಾಚಾರ್ಯರು ಮಧ್ಯಪ್ರಸಕ್ತರಾಗಿ ರಾಜಾಲಯಕ್ಕೆ ಈ ರೀತಿ ಹೇಳಿ ಕಳುಹಿಸಿದರು.

"ಉತ್ತರಾದೀ ಮಹಾಸಂಸ್ಥಾನಾಧೀಶರಾದ ನಮ್ಮ ಗುರುಗಳು ಪರಮಾನುಗ್ರಹ ಮಾಡಿ ನಮ್ಮ ಹಿರಿಯರಿಗೆ ಪಲ್ಲಕ್ಕಿ ಮರ್ಯಾದೆಯನ್ನು ದಯ ಪಾಲಿಸಿದ್ದಾರೆ. ನಾವು ಆ ಮರ್ಯಾದಾ ಪ್ರಕಾರವಾಗಿಯೇ ಪಲ್ಲಕ್ಕಿಯಲ್ಲಿ ಕುಳಿತು ಸಭೆಗೆ ಬರುತ್ತೇವೆ. ನೆರೆದಿರುವ ವಿದ್ವತ್ಸಭೆಯಲ್ಲಿ ಸಭಾ ಪಂಡಿತರಿಗೂ ನಮಗೂ ವಾಕ್ಯಾರ್ಥವಾಗಲಿ. ಆ ವಾದದಲ್ಲಿ ನಾವು ಪರಾಜಯ ಹೊಂದಿದರೆ ನಾವು ನಮ್ಮ ಪಲ್ಲಕ್ಕಿಯನ್ನು ರಾಜಾಲಯದಲ್ಲಿಯೇ ಬಿಟ್ಟು ಪಾದಚಾರಿ ಗಳಾಗಿ ಅಲ್ಲಿಂದ ಬಹಿರ್ಗಮನ ಮಾಡುತ್ತೇವೆ. ಅಥವಾ ನಮ್ಮ ಜಯ ಸರ್ವ ಸಮ್ಮತಿಯೊದರೆ ಅದೇ ಪಲ್ಲಕ್ಕಿಯಲ್ಲಿ ಉಪವಿಷ್ಟರಾಗಿ ರಾಜಮರ್ಯಾದೆ ಯೊಂದಿಗೆ ಹೊರಗೆ ಬರುತ್ತೇವೆ".

ಈ ಧೀರೋದಾತ್ತವಾದ ವಾಯಿ ಆಚಾರ್ಯರ ವಾಣಿಯು ರಾಜಭಟ ರಿಂದ ರಾಜಾಲಯಕ್ಕೆ ತಲುಪಿತು. ಇದನ್ನು ಕೇಳಿ ಸಂತೋಷಗೊಂಡ

ಮಹಾರಾಣಿಯವರು ಅವರಿಗೆ ಪಲ್ಲಕ್ಕಿಯಲ್ಲಿಯೇ ಕುಳಿತು ಸಭೆಗೆ ಬರಲು ಅನುಮತಿಇತ್ತರು.

ಮರುದಿನ ಪ್ರಾತಃಕಾಲ ತಮ್ಮ ವಂಶಕ್ಕೆ ಪಲ್ಲಕ್ಕಿ ಮರ್ಯಾದೆಯನ್ನಿತ್ತ ಶ್ರೀಗುರು ಸಾರ್ವಭೌಮರ ಪಾದಾರವಿಂದವನ್ನು ಸ್ಮರಿಸಿಕೊಂಡು ಸಭಾ ಪ್ರವೇಶ ಮಾಡಿದರು. ಶ್ರೀಮತಸ್ಥ ವಿದ್ವಾಂಸರೂ ಸಭೆಯಲ್ಲಿ ಉಪಸ್ಥಿತರಿದ್ದರು. ಕುತೂಹಲ ಜನಸ್ತೋಮ ಸುತ್ತಲೂ ನೆರೆದಿತ್ತು.

ಮಹಾರಾಣಿಯವರು ಸಭಾ ಪ್ರವೇಶಮಾಡಿದರು. ಸಿಬ್ಬಂದಿಯವರು ರಾಣಿಗೆ ಪರಾಕು ಹೇಳಿದರು. ಮಹಾರಾಣಿಯವರು ತಮ್ಮ ಸಿಂಹಾಸನದಲ್ಲಿ ಅಲಂಕೃತರಾದರು. ವಿದ್ವಾಂಸರೂ. ಸಭಿಕರೂ, ತಮ್ಮ ತಮ್ಮ ನಿರ್ದಿಷ್ಟ ಸ್ಥಳಗಳಲ್ಲಿ ಉಪವಿಷ್ಟರಾದರು. ಸಭೆಯು ವೇದ ಘೋಷದೊಡನೆ ಪ್ರಾರಂಭ ವಾಯಿತು.

ಪ್ರಥಮದಿನ ನ್ಯಾಯಶಾಸ್ತ್ರದಲ್ಲಿ "ಸತ್ಪ್ರತಿಪಕ್ಷ"ಗ್ರಂಥಗತ ವಿಷಯಕ ವಾದ ನಡೆಯಿತು. ನೆರೆದ ಸಭೆಯಲ್ಲಿ ವಿದ್ವಾಂಸರೊಬ್ಬರೆದ್ದು ಪೂರ್ವಪಕ್ಷ ವಿಷಯವನ್ನು ಸವಿಸ್ತಾರವಾಗಿ ಮಂಡಿಸಿದರು.

ತಕ್ಷಣವೇ (ಚಿಕ್ಕ ಆಚಾರ್ಯರು) ಜಯಾಚಾರ್ಯರು ತಮ್ಮ ಅಗ್ರಜರ ಸಂಜ್ಞಾ ರೂಪವಾದ ಆಜ್ಞೆ ಪಡೆದು ನಮಸ್ಕರಿಸಿ, ಗುರುಪರಂಪರೆ ಮತ್ತು ಶ್ರೀಹರಿಗೆ ನಮನ ಶ್ಲೋಕಗಳನ್ನು ಹೇಳಿ ವಾದರಂಗಕ್ಕೆ ಧುಮುಕಿದರು. ಇವರು ಕೇವಲ ಹದಿನಾರು–ಹದಿನೇಳರ ತರುಣರು, ಉತ್ಸಾಹಿಗಳು, ಧೀಮಂತರು ಆತ್ಮವಿಶ್ವಾಸ ಉಳ್ಳವರು, ನಿಶ್ಚಿತ ಜ್ಞಾನ ಉಳ್ಳವರು, ಮತ್ತು ವಾದ ಧುರೀಣರು ಕೋಟಿಕ್ರಮದಲ್ಲಿ ವಾದ ಪ್ರಾರಂಭ ಮಾಡಿಯೇ ಬಿಟ್ಟರು. ಪಕ್ಷ ಪ್ರತಿಪಕ್ಷದವರು ಹಂತ ಹಂತವಾಗಿ ಕೋಟಿಕ್ರಮಗಳನ್ನನುಸರಿಸಿ ವಾದ ಮಾಡಿದರು. ನೆರೆದ ಪಂಡಿತರು ಮತ್ತು ವಾದ ಶೂರರು ಇಬ್ಭಾಗವಾಗಿ ಈ ಖಂಡನ ಮಂಡನಗಳನ್ನು ವೀಕ್ಷಿಸುತ್ತಿದ್ದರು. ಎಲ್ಲರ ಕುತೂಹಲ ದೃಷ್ಟಿ ತರುಣರೂ, ವಾಕ್ಪಟುಗಳೂ ಆದ ಜಯಾಚಾರ್ಯರ ಮೇಲೆಯೇ ಇತ್ತು, ಜಯಾಚಾರ್ಯರು ಎರಡು–ಮೂರು ಘಂಟೆಗಳ ಕಾಲ ವಾದ ಮಾಡಿ ಪೂರ್ವಪಕ್ಷವಾದಿಗಳನ್ನು ನಿರುತ್ತರರನ್ನಾಗಿ ಮಾಡಿ ಸಭೆಯನ್ನು ದಿಗ್ಭ್ರಮೆ/ ಆಶ್ಚರ್ಯಗೊಳಿಸಿ ಬಿಟ್ಟರು.

ಮಹಾರಾಣಿಯವರು ಸಂತೋಷವನ್ನೂ ಪಟ್ಟರು ಆಶ್ಚರ್ಯವೂ ಆಯಿತು. "ಯಾರೀ ತರುಣ ಪಂಡಿತರು ಬಹಳ ಪಟುವಾಗಿದ್ದಾರೆ. ನಮ್ಮ ವಿದ್ವತ್ ಸಭೆಗೆ ಪ್ರಥಮ ಬಾರಿ ಬಂದಿರುವರೆಂದು ತೋರುತ್ತದೆ. ಎಂದು ರಾಣಿಯವರು ಉದ್ಗಾರತೆಗೆದರು."

ಇವರ ಆದ್ಯ ದಿನದ ಪರಾಕ್ರಮವನ್ನು ಕಂಡಪಂಡಿತರು, ಜಯಾಚಾರ್ಯರನ್ನು ಕುರಿತು "ನೀವು ಯಾರ ಶಿಷ್ಯರೆಂದು ಕೇಳಿದರು." ಜಯಾಚಾರ್ಯರು ನಸುನಗುತ್ತ ಹೆಮ್ಮೆಯಿಂದ "ನಾವು ಇಲ್ಲಿ ಉಪಸ್ಥಿತರಾದ ಹಿರಿಯ ಆಚಾರ್ಯರ ಶಿಷ್ಯರೆಂದು" ವಿರಮಿಸಿದರು. ಚಿಕ್ಕ ಆಚಾರ್ಯರ ತೇಜಃಪುಂಜವಾದ ಮುಖ ಮುದ್ರೆ, ಗಂಗಾಪ್ರವಾಹದಂತೆ ಅಸ್ಖಲಿತ ಅನುವಾದ, ಬಹು ಪ್ರೌಢವಾಗಿದ್ದ ವಿಷಯದಲ್ಲಿಯೂ ವಿಲಕ್ಷಣ ಪ್ರತಿಭೆ, ಆಲೋಚನಾ ತೀಕ್ಷ್ಣತೆ ಮತ್ತು ಸ್ಪಷ್ಟತೆ ಇತ್ಯಾದಿ ವಯಸ್ಸಿಗೆ ಮೀರಿದ ಪ್ರತಿಭೆಯನ್ನು ಕಂಡು ವಿದ್ವಾಂಸರು ತಲೆದೂಗಿ ಮುಗ್ಧರಾಗಿ ಕುಳಿತರು. ಅಂದಿನ ಸಭೆಯು ಈ ಮೇಲೆ ವಿವರಿಸಿದ ಕಾರ್ಯಕ್ರಮದೊಂದಿಗೆ ಮುಕ್ತಾಯವಾಯಿತು.

ಮರುದಿನ ಸಭೆಯು ಪ್ರಾತಃಕಾಲ ಸರಿಯಾದ ವೇಳೆಗೆ ಸೇರಿತು. ಪ್ರಥಮದಿನದ ವಿದ್ವದ್ಗೋಷ್ಠಿಯು ಮಹಾರಾಣಿಯವರಿಗೆ ಸಾಕಷ್ಟು ಕುತೂಹಲವನ್ನುಂಟು ಮಾಡಿತ್ತು. ಅವರೂ ಸರಿಯಾದ ಸಮಯದಲ್ಲಿ ಬಂದು ಸಿಂಹಾಸನದಲ್ಲಿ ಮಂಡಿಸಿದರು. ವೇದಘೋಷದೊಂದಿಗೆ ಸಭೆಯು ಪ್ರಾರಂಭವಾಯಿತು. ಕೂಡಲೇ ಮಹಾರಾಣಿಯವರು ನುಡಿದರು. ಏನೆಂದರೆ—

"ನಿನ್ನೆ ಚಿಕ್ಕ ಆಚಾರ್ಯರ (ಜಯಾಚಾರ್ಯರ) ಪಾಂಡಿತ್ಯವನ್ನು ನೋಡಿದೆವು. ಈ ದಿನ ಹಿರಿಯರೂ ಮತ್ತು ಪಲ್ಲಕ್ಕಿಯಲ್ಲಿ ಕುಳಿತು ಬಂದವರೂ ಆದ ಶ್ರೀ ಶ್ರೀನಿವಾಸಾಚಾರ್ಯವಾಯಿ ಇವರ ಪಾಂಡಿತ್ಯವನ್ನು ವೀಕ್ಷಿಸಲು ನಾವೂ ಮತ್ತು ಸಭೆಯಲ್ಲಿರುವ ಪಂಡಿತರೆಲ್ಲರೂ ಕುತೂಹಲದಿಂದ ಕಾದಿರುವರೆಂದೂ ಆದ್ದರಿಂದ ಇನ್ನು ಅವರ ಪಾಂಡಿತ್ಯ ಪ್ರಕಟವಾಗಲಿ."

ಸಭೆಯಲ್ಲಿದ್ದ ಕೆಲವರು "ಛಾತ್ರೇಣೋಪಾಧ್ಯಾಯಮುದ್ರಾಕ್ಷೀತ್" ಎಂಬಂತೆ ನ್ಯಾಯಶಾಸ್ತ್ರದಲ್ಲಿ ಇವರ ಪಾಂಡಿತ್ಯವು ನಿನ್ನೆಯೇ ಶಿಷ್ಯಮುಖೇನ ವೇದ್ಯವಾಯಿತು ಎಂದರು. ಇನ್ನು ಕೆಲವರು ನಿನ್ನೆ ನ್ಯಾಯಶಾಸ್ತ್ರ ವಿಚಾರ

ನಡೆಯಿತು, ಇಂದು ವೇದಾಂತ ವಿಷಯ ವಿಚಾರ ನಡೆಯಲಿ ಎಂದು ನುಡಿದರು.

ವೇದಾಂತವೆಂದರೆ ಮತ ವಿಷಯ ಬರುತ್ತದೆ. ಆಗ್ರಹಕ್ಕೆ ಬಿದ್ದು ಯಾರಿಗಾದರೂ ಮನಸ್ತಾಪಾದಿಗಳು ಸಂಭವಿಸಬಹುದು. ಹಾಗಾಗಬಾರದೆಂದು ಕೆಲವು ವಿದ್ವಾಂಸರು ತಮ್ಮ ಅಭಿಪ್ರಾಯವನ್ನು ಮಹಾರಾಣಿಯವರಿಗೆ ನಿವೇದಿಸಿದರು. ಮಹಾರಾಣಿಯರು ವಾಯೀ ಆಚಾರ್ಯರ ಕಡೆಗೆ ನೋಡಲು ಅವರ ಮನದ ಇಂಗಿತವನ್ನು ತಿಳಿದ ಆಚಾರ್ಯರು "ವೇದಾಂತವೂ ಪ್ರೌಢ ಮತ್ತು ಅಧ್ಭುತ ಶಾಸ್ತ್ರ. ಅದು ಚತುಶ್ಶಾಸ್ತ್ರಗಳಲ್ಲೊಂದಾಗಿದೆ. ಅದು ಪ್ರಮಾಣ ಪ್ರಮೇಯ ಪುಂಜರೂಪವಾದದ್ದು. ನ್ಯಾಯ, ವ್ಯಾಕರಣ, ಮೀಮಾಂಸಾಗರ್ಭಿತವಾಗಿದೆ ವೇದಾಂತ ಶಾಸ್ತ್ರ. ಪ್ರಕೃತ ಈ ವೇದಾಂತ ಶಾಸ್ತ್ರದಲ್ಲಿ ನಾವೇ ಒಂದು ವಿಷಯನ್ನು ಪೂರ್ವಪಕ್ಷವನ್ನಾಗಿ ತೆಗೆದುಕೊಂಡು ಸಿದ್ಧಾಂತವನ್ನೂ ಹೇಳುತ್ತೇವೆ. ಈ ಅನುವಾದದಿಂದ ನಮ್ಮ ಚತುಶ್ಶಾಸ್ತ್ರ ಪಾಂಡಿತ್ಯವೂ ಪರೀಕ್ಷೆಯಾದಂತೆ ಆಗುತ್ತದೆ. ಯಾರೂ ಆಗ್ರಹಕ್ಕೆ ಬೀಳುವದಕ್ಕೆ ಅವಕಾಶವೇ ಇಲ್ಲವೆಂದು" ಹೇಳಿದರು. ಆ ವಿಷಯದಲ್ಲಿ ಮಹಾರಾಣಿಯವರ ಅನುಮತಿ ಪಡೆದು, ಶ್ರೀಹರಿವಾಯುಗಳನ್ನು ಕೆಲವು ಶ್ಲೋಕಗಳಿಂದ ನಮಿಸಿ ಉಪನ್ಯಾಸವನ್ನು ಉಪಕ್ರಮಿಸಿದರು.

ಶ್ರೀಮನ್ನ್ಯಾಯ ಸುಧಾದಲ್ಲಿಯ ಕೆಲವೊಂದು ಪ್ರಕ್ರಿಯಗಳನ್ನು ಆರಿಸಿ ಪೂರ್ವಪಕ್ಷವನ್ನು ತಾವೇ ಮಾಡಿಕೊಂಡು ಅತ್ಯಂತ ಪ್ರೌಢ ರೀತಿಯಲ್ಲಿ ನಾಲ್ಕು ತಾಸುಗಳವರೆಗೆ ಅನುವಾದ/ಉಪನ್ಯಾಸವನ್ನು ಮಾಡಿದರು. ಮಹಾರಾಣಿಯವರು, ಉಪಸ್ಥಿತರಾಗಿದ್ದ ವಿದ್ವಾಂಸರು ಸಮಂಜಸವೆಂದು ತಲೆದೂಗಿ ಪರಮಾನಂದ ಭರಿತರಾದರು. "ಶ್ರೀಆಚಾರ್ಯರ ಉಜ್ವಲಪಾಂಡಿತ್ಯವನ್ನು ನೋಡಿ ಅಮೋಘ ವಾಕ್ಯಾರ್ಥ ರೂಪ ಉಪನ್ಯಾಸ ಭಾರತಿಯನ್ನು ಶ್ರವಣ ಮಾಡಿ ನಾವು ಅತ್ಯಂತ ತೃಪ್ತಿ ಹೊಂದಿದ್ದೇವೆ. ಇವರ ಉಪನ್ಯಾಸಾನಂತರ ಯಾರೂ ಮಾತನಾಡುವ ಕಾರಣವಿಲ್ಲವೆಂದು" ಮಹಾರಾಣಿಯವರೇ ನುಡಿದುಬಿಟ್ಟರು.

ಶ್ರೀವಾಯಿಆಚಾರ್ಯರಿಗೆ ಅನರ್ಘ್ಯವಸ್ತ್ರಗಳನ್ನೂ, ಸಹಸ್ರ ರೂಪಾಯಿಗಳ ಸಂಭಾವನೆಯನ್ನೂ ಬಹುಮಾನ ಪುರಸ್ಸರವಾಗಿ ಸಮರ್ಪಿಸಿ ಅನೇಕ

ಮಂಗಳವಾದ್ಯ ವೈಭವಗಳೊಂದಿಗೆ ಅದೇ ಪಲ್ಲಕ್ಕಿಯಲ್ಲಿಯೇ ಕೂಡಿಸಿ ರಾಜ ಮಾರ್ಗಗಳಲ್ಲೆಲ್ಲ ಮೆರವಣಿಗೆ ಮಾಡಿಸಿ ಬೀಳ್ಕೊಟ್ಟರು.

ಇದು ಕೇವಲ ಉತ್ಪ್ರೇಕ್ಷೆಯ ವರ್ಣನೆ ಅಲ್ಲ ಇವರ ವ್ಯಾಸಂಗದ ರೀತಿ ಮತ್ತು ವಿದ್ಯಾ ಸಂಗ್ರಹದ ಬಗೆಯನ್ನು ಹಿಂದೆಯೇ ಈ ಮೊದಲೇ ವಿವರಿಸಿದೆ. ಇವರ ಬುದ್ಧಿಶಕ್ತಿ ಆಗಲಿ, ಜ್ಞಾನದ ನೆಲೆ ಆಗಲಿ, ಅಳತೆಗೆ ಸಿಗುವಂತಿರಲಿಲ್ಲ. ಇವು ಕೇವಲ ಮಾನವೀಯತೆಯಲ್ಲಿ ಪರಿಅವಸಾನವಾಗಿಲ್ಲದೆ ಅಪಾರ ದೈವಿಕ ಹಿನ್ನೆಲೆ ಇರುವದು ಭಾಸವಾಗುತ್ತದೆ.

## ಭಾಗ್ಯನಗರಕ್ಕೆ ಭೇಟಿ–೮

ಶ್ರೀನಿವಾಸಾಚಾರ್ಯರ ಜ್ಞಾನ ಸಂಗ್ರಹ ರೀತಿ ಅತಿ ವಿಲಕ್ಷಣವಾದದ್ದು ಅವರು ಪದ್ಯವನ್ನಾಗಲಿ ಗದ್ಯವನ್ನಾಗಲಿ ತದ್ಭಿನ್ನಯಾವದೇ ಆಗಲಿ ಯಾವ ಭಾಷೆಯಲ್ಲಿಯೇ ಇರಲಿ ಗ್ರಂಥಾವಲೋಕನ ಮಾಡುವದು ಒಂದೇಸಲ (ಸಕೃದಾವರ್ತಿ). ಅಲ್ಲಿಗೆ ಅವರು ಗ್ರಂಥ ನೋಡಿ ಸಂಗ್ರಹಿಸತಕ್ಕ ಅಧ್ಯಯನ ಮುಗಿದಂತಾಯಿತು. ಇನ್ನು ಅವಿರತವಾಗಿ ಆ ವಿಷಯದಲ್ಲಿ ಮನನ ಟೀಕಾ ಟಿಪ್ಪಣಿಗಳನ್ನು ನೋಡುವದು, ಚಿಂತನ, ಸ್ಥಿರೀಕರಣ, ಚರ್ಚೆ, ಪಾಠ ಪ್ರವಚನ, ನೂತನ ವಿಚಾರಸ್ಮರಣೆ, ನೂತನ ರೀತಿ ಪ್ರತಿಪಾದನೆ ಇವೆಲ್ಲವೂ ಇವರ ಪಾಂಡಿತ್ಯದ ಅಸಾಧಾರಣ ಗುಣಗಳಾಗಿದ್ದವು. ಶಿಷ್ಯರು ಯಾವ ದಾದರೂ ವಿಷಯಗಳನ್ನು ಮರೆಯುವದು ಕಂಡರೆ ಇವರಿಗೆ ಆಶ್ಚರ್ಯ. ಶಿಷ್ಯರನ್ನು ಕೇಳುತ್ತಿದ್ದರು. "ನೀವು ಗ್ರಂಥವನ್ನು ಅಧ್ಯಯನ ಮಾಡಿದ ಮೇಲೆ ಹೇಗೆ ಮರೆಯುತ್ತೀರಿ ? ಆದರೆ ನಾವು ಒಮ್ಮೆ ಗ್ರಂಥಾವಲೋಕನ ಮಾಡಿದ್ದನ್ನು ನೀವು ಬೇಕಾದರೆ ಎಷ್ಟು ವರ್ಷಗಳನಂತರ ಬೇಕಾದರೂ ಕೇಳಿರಿ ಹೇಳುತ್ತೇವೆ" ಎನ್ನುತ್ತಿದ್ದರು. ಇವೆಲ್ಲವೂ ಶ್ರೀನಿವಾಸಾಚಾರ್ಯರ ಮೇಧಾತಿಶಯದ ಅಸಾಧಾರಣ ಲಕ್ಷಣಗಳು.

ಶ್ರೀನಿವಾಸಾಚಾರ್ಯರು ಗದ್ವಾಲ ಸಭೆಯನಂತರ, ಸ್ವಲ್ಪದಿನಗಳ ಮೇಲೆ ಇಪ್ಪತ್ತು-ಮೂವತ್ತು ಜನ ಶಿಷ್ಯಮಂಡಲಿ ಸಹಿತ ವನಪರ್ತಿ ವಿದ್ವತ್ ಸಭೆಗೆ ಹೋದರು. ಅಲ್ಲಿಯೂ ವಾಕ್ಯಾರ್ಥಗಳೂ ವಿದ್ವಗ್ಗೋಷ್ಠಿ ಉಪನ್ಯಾಸ ಗಳು ನಡೆದವು. ವಾಯೀ ಆಚಾರ್ಯರಿಗೆ ಅಗ್ರಮರ್ಯಾದೆಯೂ ವರ್ಷಾಶನ ಮರ್ಯಾದೆಯೂ ಲಭಿಸಿತು.

ಇದಾದ ಮೇಲೆ ಸ್ವಲ್ಪಕಾಲಾನಂತರ ಭಾಗ್ಯನಗರವೆಂದು ಪ್ರಸಿದ್ಧವಾದ ಹೈದರಾಬಾದಿಗೆ ದಯಮಾಡಿಸಿದರು. ಅಲ್ಲಿ ಲಿಂಗಂಪಲ್ಲಿಯಲ್ಲಿ ಶ್ರೀ ಉತ್ತರಾದಿ ಮಠ ಸಂಸ್ಥಾನದಲ್ಲಿ ಶ್ರೀಪ್ರಾಣದೇವರ ಸನ್ನಿಧಿಯಲ್ಲಿ ವಾಸವಾಗಿದ್ದರು. ಪ್ರತಿದಿನವೂ ನ್ಯಾಯವೇದಾಂತಾದಿ ಪಾಠಗಳು ಅವಿಚ್ಛಿನ್ನವಾಗಿ ನಡೆಯ ಲಾರಂಭಿಸಿದವು. ಕೇವಲ ಅಲ್ಪಕಾಲದಲ್ಲಿ ಈ ವಿಷಯ ಅಲ್ಲಿಯ ಅನೇಕ ಆಸ್ತಿಕ ಮಹಾಶಯರಿಗೂ, ಶಾಸ್ತ್ರ ಜ್ಞಾನ ಸಂಪಾದನೆಯಲ್ಲಿ ಆಸ್ತಕ್ತರಾದ ಬುಭುತ್ಸು ಬುದ್ಧಿಜೀವಿಗಳಿಗೂ ತಿಳಿಯಿತು. ದೇದೀಪ್ಯಮಾನವಾಗಿ ಪ್ರಜ್ವಲಿಸುವ ಜ್ಞಾನಜ್ಯೋತಿಯನ್ನು ಗುರುತಿಸಲು ಪ್ರತ್ಯೇಕ ಕೈ ದೀಪವು ಬೇಕೇ ! ಇವರ ವಿದ್ವತ್ಪ್ರತಿಭೆ ತಾನಾಗಿಯೇ ಪ್ರಸರಿಸಿತು. ಆ ಕಾಲದಲ್ಲಿ ಸುಪ್ರಸಿದ್ಧ ಗ್ರಹಸ್ಥರೆನಿಸಿದ ಶ್ರೀಯುತರಾದ ರಾಜಾಶಿವರಾಜ ಬಹದ್ದೂರ್, ರಾಜಾರಘೂತ್ತಮರಾವ್, ಬೇಲಪುರ ಹನುಮಂತರಾವ್, ರಾಜಾರಾಮರಾವ್ ಶ್ರೀನಿವಾಸರಾವ್ ಮೊದಲಾದವರು ಆಚಾರ್ಯರ ಮುಖ್ಯ ಶಿಷ್ಯರಾಗಿ ನಿರಂತರ ಪಾಠಕ್ಕೆ ಬರುತ್ತಿದ್ದರು. ಹೀಗೆ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಪಾಠ ಹೇಳುತ್ತ ಮೂರುವರ್ಷಗಳ ಕಾಲ ಹೈದರಾಬಾದಿನಲ್ಲಿಯೇ ಇದ್ದರು. ಕೇವಲ ಸ್ವಸ್ಥಳ ದವರು ಮಾತ್ರವಲ್ಲದೇ ಪರಸ್ಥಳದಿಂದಲೂ, ಪರಪ್ರಾಂತದಿಂದಲೂ ಅನೇಕ ಶಿಷ್ಯರು ಬಂದಿದ್ದರು.

ಆಗ ಹೈದರಾಬಾದಿನಲ್ಲಿ ಮಹಬೂಬ್ ಉದ್ದೌಲಾ ಅವರು ರಾಜ್ಯವಾಳು ತ್ತಿದ್ದರು. ಶ್ರೀ ಸಾಲಾರಜಂಗರು ದಿವಾನ ಪದವಿಯಲ್ಲಿದ್ದರು. ಆಚಾರ್ಯರ ಅಸದೃಶ ಪಾಂಡಿತ್ಯ ಪ್ರಭಾವವನ್ನು ಜನಗಳ ದ್ವಾರಾ ತಿಳಿದುಕೊಳ್ಳುತ್ತಿದ್ದರು. ಮೇಲ್ಕಂಡ ರಾಜಕಾರಣಿಗಳಾದ ಆಸ್ತೀಕ ಮಹಾಶಯರಿಂದ ಬಹು ಪ್ರಕಾರ ವರ್ಣಿತವಾದ ವಿದ್ಯಾ ಸಂಪತ್ತಿಯನ್ನು ಕೇಳಿ ಹರ್ಷಪಟ್ಟರು. ದಿವಾನರು ಸಹ

ಆಗಾಗ್ಗೆ ಪಾತಕಾಲಕ್ಕೆ ಬಂದು ಆಚಾರ್ಯರ ದರ್ಶನ ಪಡೆಯುತ್ತಿದ್ದರು. ಅವರು, ಆಚಾರ್ಯರ ಮುಖದಲ್ಲಿ ಲಾಸ್ಯವಾಡುತ್ತಿದ್ದ ವಾಗ್ದೇವಿಯ ಸೌಭಾಗ್ಯವನ್ನು ಕಂಡು ಆಶ್ಚರ್ಯಬಟ್ಟರು. ಮನಸ್ಸಿನಲ್ಲಿ ಗೌರವ ಆದರಗಳು ಜನಿತವಾದವು. ಅವರು ಕಂಡ ಆಚಾರ್ಯರ ಹೊಂಬಣ್ಣದ ಆಕರ್ಷಕ ಶಾಂತ ವಿಗ್ರಹ, ಶ್ರವಣ ಸಂಭಾಷಣಾದಿಗಳಿಂದಲೂ ದಿವಾನರು ಪುಳುಕಾಂಕಿತ ರಾದರು. ತಮಗಾದ ಈ ಆನಂದಾನುಭವನ್ನು ನವಾಬರಿಗೂ ವರ್ಣಿಸಿದರು.

ದಿವಾನರು, ವಾಯಿ ಆಚಾರ್ಯರನ್ನೂ ಅವರ ಶಿಷ್ಯರನ್ನೂ ಒಂದು ಸಲ ನವಾಬರಗೆ ದರ್ಶನ ಮಾಡಿಸಿ, ಪರಿಚಯ ಮಾಡಿಸಿಕೊಡಬೇಕು ಮತ್ತು ತದ್ವಾರಾ ಅವರಿಗೆ ನವಾಬರಿಂದ ವಿಶೇಷ ಲಾಭದಾಯಕವಾಗುವದೆಂದು ಮನಸ್ಸಿನಲ್ಲಿ ಸಂಕಲ್ಪ ಮಾಡಿದರು. ಒಂದು ಸಲ ಈ ವಿಷಯನ್ನು ನವಾಬ ರೆದುರು ಪ್ರಸ್ತಾಪಿಸಿದರು. ದಿವಾನರ ಸಲಹೆಯನ್ನು ನವಾಬರು ಒಪ್ಪಿ ಕೊಂಡರು. ನಂತರ ಆಚಾರ್ಯರ ಹತ್ತಿರ ಅದೇ ವಿಷಯದಲ್ಲಿ ಸಮ್ಮತಿ ಪಡೆದು, ಒಂದು ದಿನ ನವಾಬರ ಮತ್ತು ಆಚಾರ್ಯರ ದರ್ಶನವನ್ನು ಸ್ಥಿರ ಪಡಿಸಿದರು.

ಗೊತ್ತು ಪಡಿಸಿದ ದಿವಸ ಪೂಜ್ಯ ಆಚಾರ್ಯರು ಸಕಾಲಕ್ಕೆ ತಮ್ಮ ಶಿಷ್ಯಕೋಟಿ ಪ್ರವಿಷ್ಟರಾದ ಸ್ವಸ್ಥಳೀಯರನ್ನೂ ಮತ್ತು ಪರಸ್ಥಳದಿಂದ ಬಂದ ಶಿಷ್ಯರನ್ನೂ ಕರೆದು ಕೊಂಡು ನವಾಬರ ಆಸ್ಥಾನಕ್ಕೆ ಮೇಣೆಯಲ್ಲಿ ತೆರಳಿದರು. ಸಭಾ ಅಧಿಕಾರಿಗಳು ಇವರುಗಳನ್ನು ಸ್ವಾಗತಿಸಿ ಉಚಿತಾಸನದಲ್ಲಿ ಕುಳ್ಳಿರಿಸಿ ದರು. ನವಾಬರು ಸಭೆಗೆ ಆಗಮಿಸಿದರು. ಪ್ರಥಮತಃ ಪರಿಚಯ ಕುಶಲಪ್ರಶ್ನಾದಿ ಗಳಾದವು.

ಶ್ರೀನಿವಾಸಾಚಾರ್ಯರು ಸ್ವಸ್ಥಳದ ಶಿಷ್ಯರನ್ನೂ ಪರಸ್ಥಳದ ಶಿಷ್ಯರನ್ನೂ ನವಾಬರಿಗೆ ಪರಿಚಯ ಮಾಡಿಸಿಕೊಟ್ಟರು. ಪರಸ್ಥಳದವರು ಧಾರವಾಡ, ವಿಜಾಪುರ, ಮೈಸೂರು, ಬಳ್ಳಾರಿ, ಮುಂಬೈ, ಸಾಂಗ್ಲಿ ಇತ್ಯಾದಿ ಅನೇಕ ಪ್ರದೇಶದಿಂದ ಬಂದಿದ್ದರು. ಇವರಲ್ಲದೇ ಸ್ವಸ್ಥಳದವರನೇಕರು ತಮ್ಮ ರಾಜ್ಯ ದಲ್ಲಿ ವೃತ್ತಿಯಲ್ಲಿ ಇರುವವರೂ ತಮಗೆ ಪರಿಚಿತರೂ ಆದವರು. ಅವರ ಉನ್ನತ ಧಾರ್ಮಿಕ ಜ್ಞಾನಾರ್ಜನೆ ನೋಡಿ ಸಂತೋಷಪಟ್ಟರು. ಪರಸ್ಥಳದವರೂ ಇಲ್ಲಿಗೆ ಬಂದು ಇವರಲ್ಲಿ ಶಿಷ್ಯರಾಗಿ ವಿದ್ಯಾರ್ಜನೆ ಮಾಡುತ್ತಿರುವದು ಅವರಿಗೆ

ಸೋಜಿಗವೆನಿಸಿತು. ಎಲ್ಲರೂ ನಿಗರ್ವಿಗಳು, ನಿರಾಡಂಬಿಗಳು, ವಿದ್ವಾಂಸರು, ತೇಜಸ್ವಿಗಳು ಮತ್ತು ವಿನೀತರು. ಇವರುಗಳೆಲ್ಲರನ್ನೂ ನೋಡಿ ನವಾಬರು ಆಚಾರ್ಯರನ್ನು ಒಂದು ವಿವರಣ ರೂಪವಾದ ಪ್ರಶ್ನೆಯನ್ನು ಕೇಳಿದರು. "ಆಚಾರೀಮಹರಾಜ, ನಮ್ಮ ಊರಿನವರು ಮಾತ್ರವಲ್ಲದೇ, ಧಾರವಾಡ, ಬೆಲಗಾವ್, ಮೈಸೂರು, ಮುಂಬೈ ಪ್ರಾಂತಗಳಿಂದ ತಮ್ಮಲ್ಲಿ ಏಕೆ ಅಧ್ಯಯನಕ್ಕೆ ಬಂದಿದ್ದಾರೆ. ಅಲ್ಲಿ ಪಂಡಿತರಿಲ್ಲವೇ ?"

"ಹುಜೂರ್, ಅಲ್ಲಿ ಪಂಡಿತರಿದ್ದರೂ, ತಮ್ಮ ರಾಜ್ಯದಲ್ಲಿದ್ದಂತೆ ಧರ್ಮ ರಕ್ಷಣೆ ಇಲ್ಲ. ನವಾಬರ ಔದಾರ್ಯವನ್ನೂ ಧಾರ್ಮಿಕ ಶ್ರದ್ಧೆಯನ್ನೂ ಮತ್ತು ಈ ರಾಜ್ಯದ ಖ್ಯಾತಿಯನ್ನೂ ಕೇಳಿ ಅವರೆಲ್ಲರೂ ಈ ತಮ್ಮ ಭಾಗ್ಯನಗರ ರಾಜಧಾನಿಗೆ ಬಂದಿದ್ದಾರೆ." ಎಂದು ಭಾವ ತುಂಬಿದ ಧ್ವನಿಯಲ್ಲಿ ಉತ್ತರಿಸಿ ದರು.

ಆಚಾರ್ಯರ ಈ ಉತ್ತರದಿಂದ ಸಮಾಧಾನ ಹೊಂದಿ ಪ್ರೀತರಾದ ನವಾಬರು, "ಈ ಆಚಾರ್ಯರು ಅವರ ಶಿಷ್ಯರೂ ನಮ್ಮ ರಾಜ್ಯದಲ್ಲಿಯೇ ರಕ್ಷಿತರಾಗಲಿ, ಇವರೆಲ್ಲರೂ ಧರ್ಮಿಷ್ಟರು ನಮ್ಮ ಔದಾರ್ಯಕ್ಕೆ ಪಾತ್ರರಾಗಿ ದ್ದಾರೆ" ಎಂದರು.

ಆಚಾರ್ಯರ ನೇರ ಸಂಪರ್ಕದಿಂದ, ಅವರ ಸಮಕ್ಷಮ ದರ್ಶನ ಸಂಭಾಷಣೆಗಳಿಂದ, ದಿವ್ಯತೇಜೋಮೂರ್ತಿಗಳ ಪ್ರಭಾವದಿಂದ, ದಿವಾನರ ಮತ್ತು ಶಿಷ್ಯ ವೃಂದದ ಸದಭಿಪ್ರಾಯಗಳಿಂದ ಪ್ರಭಾವಿತರಾದ ನವಾಬರು, ಆಚಾರ್ಯರಿಗೆ (1) ಚಿತ್ತಾಪುರ (2) ಮಲ್ಲಾಪುರ (3) ಚಿಗಾನೂರು ಎಂಬ ಮೂರು ಗ್ರಾಮಗಳನ್ನು ಜಹಗೀರಿಯಾಗಿ ದಯಪಾಲಿಸಿದರು. ಅಲ್ಲದೇ (2000) ಎರಡು ಸಾವಿರ ಎಕರೆ ಇನಾಂ ಭೂಮಿಯನ್ನು ಮತ್ತು ಒಂದು ಸಾವಿರ (1000) ರೂಪಾಯಿಗಳ ವರ್ಷಾಶನವನ್ನು ಹಾಕಿಕೊಟ್ಟು, ಗೌರವಿಸಿ ದರು. ಅಲ್ಲದೇ, ಆಚಾರ್ಯರು ತಮ್ಮಿಂದ ದತ್ತವಾದ ಕೃಷ್ಣಾ ತೀರದಲ್ಲಿರುವ ಚಿತ್ತಾಪುರ ಜಹಗೀರುಗ್ರಾಮದಲ್ಲಿ ಸುರಕ್ಷಿತವಾಗಿದ್ದು ಪಾಠಪ್ರವಚನ ಮಾಡಿ ಕೊಂಡು ಸುಖವಾಗಿರುವದಾಗಿ ಅಜ್ಞೆಯಾಯಿತು.

ಧರ್ಮ ಮತ್ತು ಕಲೆಗಳು ಉಳಿಯಬೇಕಾದರೆ ಮತ್ತು ಅವುಗಳಿಗೆ ಊರ್ಜಿತಾವಸ್ಥೆ ಬರಬೇಕಾದರೆ, ಧಾರ್ಮಿಕರಿಗೆ ಮತ್ತು ಕಲಾವಿದರಿಗೆ ರಾಜಾಶ್ರಯ ಪೋಷಣೆ, ತೋಷಣೆ, ಪ್ರೋತ್ಸಾಹಗಳು ಬೇಕೇ ಬೇಕಾಗುತ್ತವೆ.* ಈ ಸಂದರ್ಭದಲ್ಲಿ ನಮ್ಮ ಪೂರ್ವಿಕರು ಹೇಳುತ್ತಿದ್ದ ಒಂದು ಪ್ರಸಂಗವನ್ನು ಸ್ಮರಿಸಿಕೊಂಡರೆ ತಪ್ಪಾಗಲಾರದೆಂದು ಭಾವಿಸುತ್ತೇನೆ.

ಇದು ಸುಮಾರು ಮುನ್ನೂರು ವರ್ಷಗಳ ಹಿಂದಿನ ಸಮಾಚಾರವೆನ್ನುವಾ. ಒಂದು ಸಲ ಸೂರ್ಯಗ್ರಹಣ ಬಂದಿತ್ತು. ಸೂರ್ಯಗ್ರಹಣವು ಧರ್ಮದೃಷ್ಟಿಯಿಂದ ಒಂದು ಪರ್ವಕಾಲ. ಮಂತ್ರ, ಜಪ, ತಪಗಳಿಗೆ ಸಿದ್ಧಿಕಾಲ. ಅನೇಕರು ನದಿಗೆ ಸ್ನಾನಕ್ಕೆಂದು ಹೋಗಿದ್ದರು. ಅದರಲ್ಲಿ ಬ್ರಾಹ್ಮಣ ಸಮಾಜವೇ ಹೆಚ್ಚಾಗಿತ್ತು. ಸೂರ್ಯಗ್ರಹಣ 9 ರಿಂದ 12 ಮಧ್ಯಾಹ್ನದವರೆಗೆ ಇತ್ತು.

ಸೂರ್ಯಗ್ರಹಣ ಸ್ಪರ್ಶವಾದ ಕೂಡಲೇ ಸ್ನಾನಾದಿಗಳನ್ನು ಮಾಡಿ, ಜಪ, ತಪಾದಿಗಳನ್ನು ಅನುಷ್ಠಾನ ಮಾಡಿದರು. ಮೂರು ಘಂಟೆಗಳ ನಂತರ ಸೂರ್ಯ ಗ್ರಹಣ ವಿಮೋಚನವಾಯಿತು. ಎಲ್ಲರೂ ಸ್ನಾನ ಮಾಡಿದರು. ಪೂಜಾದಿಗಳು ಪಾಕಾದಿಗಳಾಗಲು ಯಥಾವಿಧಾನ ಎರಡು ಮೂರು ಗಂಟೆಗಳಾದವು. ಸೂರ್ಯಗ್ರಹಣಾನಂತರ ಬಿಸಿಲಿನತಾಪ ಹೆಚ್ಚಾಯಿತು. ಆದ್ದರಿಂದ ಪೂಜಾಕಾಲದಲ್ಲಿ ಕೆಲವು ತಪಸ್ವಿ ಬ್ರಾಹ್ಮಣರು ಅಂತರಿಕ್ಷದಲ್ಲಿ ತಮ್ಮ ಪಂಚೆಗಳನ್ನು ಆಸರೆ ಇಲ್ಲದೆ ಹಾರಿಸುತ್ತ ನಿಲ್ಲಿಸಿದ್ದರು. ಅವುಗಳು ಛತ್ರಿಯಂತೆ ಅವರನ್ನು ಬಿಸಿಲಿನ ತಾಪದಿಂದ ರಕ್ಷಿಸುತ್ತಿದ್ದವು.

ಅದೇ ಸಮಯದಲ್ಲಿ ಆ ರಾಜ್ಯದ ನವಾಬರು ಆಕಸ್ಮಿಕ ಅದೇ ಮಾರ್ಗವಾಗಿ ಪ್ರಯಾಣ ಮಾಡುವಾಗ, ಅಂತರಿಕ್ಷದಲ್ಲಿ ಬ್ರಾಹ್ಮಣರ ತಲೆಯ ಮೇಲೆ ಯಾವ ಆಧಾರವಿಲ್ಲದೇ ಹಾರಾಡುತ್ತಿದ್ದ ಪಂಚೆಗಳನ್ನು/ವಸ್ತ್ರಗಳನ್ನು ನೋಡಿ ಚಕಿತರಾಗಿ ಅಲ್ಲಿಯೇ ನಿಂತು ವೀಕ್ಷಿಸತೊಡಗಿದರು. ಬ್ರಾಹ್ಮಣರ ತಪಃ ಪ್ರಭಾವವನ್ನು ನೋಡಿ ಮೆಚ್ಚಿದರು. ಅಂಥವರು ತಮ್ಮ ರಾಜ್ಯದಲ್ಲಿರುವದನ್ನು

* ಅಲೆಗಝಾಂಡರ್ ಡ್ಯೂಮಾಸ್ ಎಂಬ ಫ್ರೆಂಚ್ ಸಾಹಿತಿಯೂ ಈಗ ಸುಮಾರು ನೂರು ವರ್ಷಗಳ ಹಿಂದೆಯೇ ಈ ವಿಷಯ ಪ್ರಸ್ತಾಪಿಸಿ ಬರೆದಿದ್ದಾನೆ. "ರಾಜಾಶ್ರಯ ಇಲ್ಲದಿದ್ದರೆ ಧರ್ಮಗ್ಲಾನಿಯುಂಟಾಗುತ್ತದೆ. ಕಲೆಗಳು ಬದುಕಲಾರವು. ಅವುಗಳು ಸೊರಗಿ ಕೆಲಕಾಲ ನಂತರ ನಶಿಸುತ್ತವೆ."

ನೋಡಿ ಹೆಮ್ಮೆಪಟ್ಟರು. ಆನಂದಪಟ್ಟರು. ಪಕ್ಕದಲ್ಲಿದ್ದ ಮಂತ್ರಿವರ್ಯರಿಗೆ ತಮ್ಮ ಭಾವನೆಗಳನ್ನು ಮತ್ತು ಮೆಚ್ಚಿಗೆಯನ್ನು ತಿಳಿಸಿದರು.

ಮಂತ್ರಿಗಳೆಂದರು, ನವಾಬರೇ ಅದು ಕೇವಲ ಅವರ ಪ್ರಭಾವವಲ್ಲ ತಮ್ಮ ಪ್ರಭಾವವೆಂದರು. ಅದು ಹೇಗೆ ಎಂದು ನವಾಬರು ಕೇಳಿದರು. ಇದೆಲ್ಲವೂ ತಾವು ಬ್ರಾಹ್ಮಣರಿಗೆ ಕೊಟ್ಟ ರಾಜಾಶ್ರಯ, ರಾಜಪೋಷಣೆ, ಶೋಷಣೆ ಮತ್ತು ಪ್ರೋತ್ಸಾಹದ ಫಲವೆಂದರು. ನವಾಬರು ಒಪ್ಪಲಿಲ್ಲ. ಮಂತ್ರಿಗಳು ಸುಮ್ಮನಿದ್ದರು.

ಸ್ವಲ್ಪಕಾಲಾನಂತರ, ಮಂತ್ರಿಗಳು ಬ್ರಾಹ್ಮಣರಿಗೆ ರಾಜದತ್ತ ಜಹಗೀರುಗಳನ್ನು ರದ್ದು ಪಡಿಸಿದರು. ರಾಜರಿಂದ ಗೌರವಿಸಿದ ಮಾಸಾಸಣೆ, ವರ್ಷಾಸಣೆಗಳು ರದ್ದಾದವು. ಇದರ ಪರಿಣಾಮವಾಗಿ ಬ್ರಾಹ್ಮಣರು ತಮ್ಮ ನಿತ್ಯ, ನೈಮಿತ್ತಿಕ ಅನುಷ್ಠಾನಗಳನ್ನು ತೊರೆದರು. ಪೂಜಾ, ಅಧ್ಯಯನ, ವೇದ ಘೋಷಗಳು, ಜಪ, ತಪ, ಸದಾಚಾರಗಳೆಲ್ಲವೂ ದೂರವಾದವು. ಯಾಕೆಂದರೆ ಬೆಳಗಿನಿಂದ ಸಾಯಂಕಾಲದವರೆಗೆ ಅಶನ ವಸನ ವಸತಿ (ಹೊಟ್ಟೆ, ಬಟ್ಟೆ, ವಸತಿ) ಈ ಮೂರಕ್ಕೆ ಆಗುವ ಸಂಪಾದನೆಯ ಚಿಂತೆಯಲ್ಲಿಯೇ ಕಾಲಕಳೆಯಬೇಕಾಗಿತ್ತು. ಹೀಗಿರುವಾಗ ಜಪವೂ ಇಲ್ಲ, ತಪವೂ ಇಲ್ಲ ಸಿದ್ಧಿಗಳೂ ಇಲ್ಲ. ಕಾಲ ಕಾಲಕ್ಕೆ ಮಳೆಬೆಳೆಗಳೂ ಕಡಿಮೆಯಾದವು.

ಹೀಗೆ ಬ್ರಾಹ್ಮಣರು ದುಸ್ಥಿತಿಗೀಡಾಗಿ ಯಾವಾಗ ಧರ್ಮಗ್ಲಾನಿಯಾಯಿತೋ ರಾಜ್ಯದಲ್ಲಿ ಕ್ಷಾಮ ಡಾಮರಗಳು ಕಾಣಿಸಿಕೊಂಡವು. ಅನೇಕ ರೋಗಗಳು ಉದ್ಭವಿಸಿದವು. ಮಳೆಯು ಕಾಲಕ್ಕಿಲ್ಲದಂತಾಯಿತು. ಬಂದರೂ ಖಂಡಮಂಡಲ ರಾಜ್ಯದಲ್ಲಿ ದಾರಿದ್ರ್ಯವು ಪ್ರಬಲಿಸಿತು. ಕಳವು, ದರೋಡೆ, ಕೊಲೆ, ಸುಲಿಗೆಗಳು ಕಾಣಿಸಿಕೊಂಡವು. ಹಿಂದೆ ಸಮೃದ್ಧ ದೃಶ್ಯಗಳನ್ನು ಕಂಡ ನವಾಬರು ಈಗ ಏನೂ ಕಾಣದಾದರು. ಅವರ ದರ್ಬಾರಿನಲ್ಲಿ ಕಳೆಯೇ ಇರಲಿಲ್ಲ. ಕಲೆಗಳು ನಾಶವಾದವು. ಶತ್ರುಭಯವೂ ಪ್ರಾಪ್ತವಾಯಿತು.

ನವಾಬರಿಗೆ ಚಿಂತೆಯಾಯಿತು, ಹೀಗಾಗಲು ಕಾರಣವೇನೆಂದು ಮಂತ್ರಿಗಳನ್ನು ಕೇಳಲು, ಅವರು ಹಿಂದಿನ ಸಂದರ್ಭವನ್ನು ಜ್ಞಾಪಿಸಿ, ಬ್ರಾಹ್ಮಣರಿಗೆ ರಾಜಾಶ್ರಯ ತಪ್ಪಿದೆ. ಕಲಾವಿದರಿಗೂ ರಾಜಾಶ್ರಯ ತಪ್ಪಿದೆ. ಇದೊಂದು

ಪ್ರಯೋಗವೆಂದರು. ನವಾಬರು ಹೇಳಿದರು. ಮಂತ್ರಿಗಳೇ ಈ ಪ್ರಯೋಗ ಬಹು ನಷ್ಟಕಾರಕ. ಈಚೆಗೆ ಆದ ಅಪಾರ ನಷ್ಟವನ್ನು ನೋಡಿದರೆ, ನಾವು ನಮ್ಮ ರಾಜ್ಯದಿಂದ ಅವರಿಗೆ ಕೊಟ್ಟದ್ದು ಅಲ್ಪ. ಆದರೆ ಅವರೆಲ್ಲರೂ ಸಂತುಷ್ಟರಾಗಿದ್ದು, ಅವರಾಚರಿಸತಕ್ಕ ಸದಾಚಾರ ತಪಸ್ಸುಗಳಿಂದ ನಮಗಾಗುವ, ನಮ್ಮ ರಾಜ್ಯಕ್ಕಾಗುವ ಸಮೃದ್ಧಿಯು ಅಪಾರ ಅಳೆಯಲಾಗುವದಿಲ್ಲ. ಆದ್ದರಿಂದ ಮೊದಲು ಅವರವರಿಗೆ ಏನು ರಾಜಾಶ್ರಯವಿತ್ತೋ ಅದೆಲ್ಲವನ್ನೂ ಅವರಿಗೆ ಪುನಃ ಕೊಟ್ಟು ಬಿಡಿರಿ. ಅವರನ್ನು ಸಭೆಗೆ ಕರೆದು ಗೌರವಿಸಿರಿ. ಕ್ಷಮೆ ಕೇಳಿರಿ. ಪ್ರಜೆಗೆಳೆಲ್ಲ ಸುಖವಾಗಿರಲಿ ಎಂಬದೇ ನಮ್ಮ ಉದ್ದೇಶ. ಇದಾದ ನಂತರ ಅಚಿರಕಾಲದಲ್ಲಿಯೇ ರಾಜ್ಯವು ಸುಖ ಸಮೃದ್ಧಿಗಳಿಂದ ಬೆಳಗಿತು.

ಧರ್ಮಕ್ಕೆ ರಾಜಾಶ್ರಯ ಅವಶ್ಯಕ. ಕಲೆಗೆ ರಾಜಾಶ್ರಯ ಪ್ರೋತ್ಸಾಹದ ಅವಶ್ಯಕವಿದೆ. ಉಭಯತರಿಗೂ ಧರ್ಮದಲ್ಲಿ ಗೌರವವಿರಬೇಕು, ಕಲೆಯಲ್ಲಿ ಆಸಕ್ತಿ ಇರುಬೇಕು ಎಂದರೇನೇ ಸದ್ಗುಣಗಳು ತಲೆ ಎತ್ತಿ ಮೆರೆಯುತ್ತವೆ.

## ಭಾಗ್ಯನಗರದಲ್ಲಿ ಸ್ಮರಣೀಯ ಘಟನೆಗಳು-೯

ಭಾಗ್ಯನಗರದಲ್ಲಿ ಅಖಂಡ ಮೂರು ವರ್ಷಗಳ ಕಾಲ ಶ್ರೀನಿವಾಸಾಚಾರ್ಯರಿಂದ ಶ್ರೀಸರ್ವಜ್ಞಾಚಾರ್ಯರ ಶಾಸ್ತ್ರಗಳ ಪಾಠಪ್ರವಚನ ರೂಪವಾದ ಶ್ರೀಹರಿವಾಯುಗಳ ಸೇವೆ ಮಾಡಿದುದರ ಫಲವೋ ಎಂಬಂತೆ, ಲೌಕಿಕ ಮತ್ತು ಪಾರಲೌಕಿಕ ಕ್ಷೇತ್ರಗಳಲ್ಲಿ ಅದ್ಭುತವಾದ ಕಾರ್ಯವು ಸಾಧಿಸಲ್ಪಟ್ಟಿತು. ಇದರಿಂದ ಕೇವಲ ಈ ಬೃಹತ್‌ನಗರದಲ್ಲಿ ಮಾತ್ರವಲ್ಲದೇ ವಾಯೀ ಆಚಾರ್ಯರ ವಿದ್ವತ್ತಿನ ಪ್ರಖ್ಯಾತಿಯು ಪ್ರಾಂತ ಪರಪ್ರಾಂತಗಳಲ್ಲಿಯೂ ಸಹ ಪ್ರಸರಿಸಿತು. "ಕಿಮಲಭ್ಯಂ ಭಗವತಿ ಪ್ರಸನ್ನೇ ಶ್ರೀನಿಕೇತನೇ" ಎಂಬಂತೆ ಶ್ರೀಭಾರತೀರಮಣನ ಹೃದಯಾವಾಸಿ ಶ್ರೀರಾಮಚಂದ್ರ ದೇವರು ಪ್ರೀತನಾದ ಮೇಲೆ ಮನುಷ್ಯನಿಗೆ ಅದೇನು ತಾನೇ ಲಭಿಸಲಕ್ಕಿಲ್ಲ. ವಾಯೀಆಚಾರ್ಯರು

ಮಹಾತಪಸ್ವಿಗಳೆಂದೂ ಶಾಪಾನುಗ್ರಹ ಶಕ್ತರೆಂದೂ ಪ್ರಸಿದ್ಧಿ ಆಯಿತು. ವಾಯೀ ಆಚಾರ್ಯರು ಮೇಣೆಯಲ್ಲಿ ಹೊರಟರೆ ಸಾಕು ರಾಜಬೀದಿಗಳಲ್ಲಿ ಭಕ್ತಾದಿಗಳು ದರ್ಶನಾಕಾಂಕ್ಷಿಗಳಾಗಿ ಕಾದಿರುತ್ತಿದ್ದರು. ಶ್ರೀಗಳವರಿಗೆ ಪೂಜೆ ಸಲ್ಲಿಸಿ ಆಶೀರ್ವಾದ ಫಲಮಂತ್ರಾಕ್ಷತೆ ಪಡೆಯುತ್ತಿದ್ದರು.

ಒಂದು ಸಲ ಲಿಂಗಂಪಲ್ಲಿಯಲ್ಲಿ ಕಾಲರಾ ಸಾಂಕ್ರಾಮಿಕ ರೋಗವು ಹಬ್ಬಿ ಸಾವು ನೋವುಗಳನ್ನುಂಟು ಮಾಡಲು ಪ್ರಾರಂಭ ಮಾಡಿತು. ಸ್ಥಳೀಯರ ನೇಕರು ಬಂದು ಆಚಾರ್ಯರನ್ನು ಪ್ರಾರ್ಥಿಸಿದರು. ಕಾಲರಾ ಸಾಂಕ್ರಾಮಿಕವು ಇನ್ನು ಮುಂದೆ ಹಬ್ಬಿದಂತೆ ಸಾವುನೋವುಗಳು ಅಧಿಕಸಂಖ್ಯೆಯಲ್ಲಿ ಆಗದಂತೆ ಆಚಾರ್ಯರು ತಮ್ಮ ತಪ ಪ್ರಭಾವದಿಂದಲಾಗಲಿ ಅಥವಾ ಸೂಕ್ತ ದೇವತಾ ಉಪಾಸನಗಳನ್ನು ಮಾಡಿಯಾದರೂ ಆಗಲಿ ಅನುಗ್ರಹಿಸಬೇಕೆಂದು ಅವರ ಅಭಿಲಾಷೆವ್ಯಕ್ತಪಡಿಸಿದರು. ಆಚಾರ್ಯರಾದರೂ ಲಿಂಗಂಪಲ್ಲಿಯ ಶ್ರೀಉತ್ತರಾದಿಮಠದ ಶ್ರೀಪ್ರಾಣದೇವರ ವಿಶೇಷ ಸೇವೆಯನ್ನು ಭಕ್ತಿಪುರಸ್ಸರವಾಗಿ ಮಾಡಿದರು. ಪ್ರದಕ್ಷಿಣೆ, ನಮಸ್ಕಾರ, ಸ್ತೋತ್ರ, ಸ್ತವನ, ವಾಯುಸ್ತುತಿ ಪುನಶ್ಚರಣ ಧನ್ವಂತರಿ ಉಪಾಸನಾ ಮತ್ತು ಸ್ತೋತ್ರ ಇತ್ಯಾದಿಗಳಿಂದ ಕಾಲರಾವ್ಯಾಧಿಯನ್ನು ಅತಿ ಅಲ್ಪ ಕಾಲದಲ್ಲಿಯೇ ನಿರ್ಮೂಲವನ್ನಾಗಿ ಮಾಡಿ ಪೌರರು ಸುಖದಿಂದಲೂ ನಿರ್ಭೀತಿಯಿಂದಲೂ ನೆಲೆಸುವಂತೆ ಮಾಡಿದರು. ಶ್ರೀಪ್ರಾಣದೇವರಸೇವೆಯು ಮುಗಿಯುವ ದಿನ ದಾಸವರ್ಯರೊಬ್ಬರು ಆಕಸ್ಮಿಕವಾಗಿ ಆಗಮಿಸಿ "ಭಗವದ್ಭಕ್ತರಿಗೆ ಅಮಂಗಳವುಂಟೇ" ಎಂಬ ದೇವರ ನಾಮವನ್ನು ಹಾಡಿದರು. ಇದರಿಂದ ಆಚಾರ್ಯರೂ ನೆರೆದ ಭಕ್ತ ವೃಂದವೂ ಸಂತುಷ್ಟರಾಗಿ ಶ್ರೀಪ್ರಾಣದೇವರ ಮಹಿಮೆಯನ್ನು ವಿಶೇಷಾಕಾರೇಣ ಕೊಂಡಾಡಿದರು/ಸ್ತುತಿಸಿದರು.

ಹೈದರಾಬಾದಿನಲ್ಲಿ ಶ್ರೀನಿವಾಸಾಚಾರ್ಯರ ಮೂರು ವರ್ಷಗಳ ವಾಸಾಂತ್ಯದಲ್ಲಿ ಮಧ್ವಮತ ಪ್ರಚಾರ, ವಿಚಾರ ಮತ್ತು ಅನುಷ್ಠಾನಗಳು ಚರಮ ಸೀಮೆಯನ್ನು ಮುಟ್ಟಿದ್ದವು. ಪ್ರತಿದಿನವೂ ಪ್ರಾತಃಕಾಲ ಪಾಠ ಪ್ರವಚನ ಸಾಯಂಕಾಲ ಉಪನ್ಯಾಸಗಳು ಮತ್ತು ಪುರಾಣ ಪ್ರವಚನಗಳೂ

---

* "ಶ್ರೀವಿಲಾಸಾಸ್ಪಂದನ ದಾಸರಿಗುಂಟೆ ಅಪಜಯವೂ" ॥ ಹ. ಕ. ಸಾ. ॥

ನಗರದಲ್ಲಿ ಒಂದಿಲ್ಲೊಂದು ಭಾಗದಲ್ಲಿ ನಿರಂತರ ನಡೆಯುತ್ತಲೇ ಇದ್ದವು. ಆಚಾರ್ಯರ ಉಪನ್ಯಾಸ ಭಾರತಿಯನ್ನು ಕೇಳದ, ಶ್ಲಾಘನೆ ಮಾಡದ ಸ್ತ್ರೀಪುರುಷರೇ ಇರಲಿಲ್ಲ. ಸಂಜೆ ಉಪನ್ಯಾಸಾದಿಗಳಿಗೆ ಎಲ್ಲ ಮತದವರೂ ಬರುತ್ತಿದ್ದರು. ದ್ವೈತಮತ ಪ್ರತಿಷ್ಠೆಯು, ಅದ್ವೈತ ಪಂಡಿತರಿಗೆ ಅಸೂಯೆ ತರುವಷ್ಟು ಪ್ರಬಲಿಸಿತ್ತು. ಕೊನೆಗೆ ತಂದೇ ಬಿಟ್ಟಿತು ಎನ್ನುವಾ.

ಅವರ ಮನಸ್ಸಿನಲ್ಲಿ ಇಂಥ ಸದ್ಭಾವನೆ ಬಂದಮೇಲೆ, ಅದ್ವೈತ ಪಂಡಿತ ರೆಲ್ಲರೂ ಸೇರಿ ಈ ದ್ವೈತ ಮತ ಪ್ರತಿಭೆಯ ಪ್ರತಿಕ್ರಿಯೆಗೆ ಸಮಾಲೋಚನೆ ಮಾಡಿದರು. ಅವರು ಆಲೋಚಿಸಿದ್ದೇನೆಂದರೆ, ಶ್ರೀ ಶಿವರಾಜಬಹದ್ದೂರ ದೇವಡಿಯಲ್ಲಿ ಅದ್ಭುತ ಸಭೆಯನ್ನೊಂದು ಏರ್ಪಡಿಸುವದು. ಅಲ್ಲಿ ಆ ಪ್ರಸಿದ್ಧ ವಾಯೀ ಶ್ರೀ ನಿವಾಸಾಚಾರ್ಯರನ್ನು ಆಹ್ವಾನಿಸುವದು. ಅವರನ್ನು ವಾದ ರಂಗಕ್ಕೆಳೆದು, ವಾಕ್ಯಾರ್ಥದಲ್ಲಿ ಅವರನ್ನು ಸೋಲಿಸುವದು. ಅವರ ಮುಖಭಂಗವಾದರೆ ದ್ವೈತ ಮತದ ಮುಖಭಂಗವೇ ಸರಿ. ಈ ವಿಷಯದಲ್ಲಿ ಅವರೆಲ್ಲರೂ ಸಮಗ್ರ ಆಲೋಚನಾಮಾಡಿ ವಾಯೀ ಆಚಾರ್ಯರಿಗೆ ಹೇಳಿ ಕಳುಹಿಸಿದರು.

ಈ ವಾಕ್ಯಾರ್ಥ ವಿಷಯವು ಆಚಾರ್ಯರಿಗೆ ತಿಳಿಯಿತು. ಅವರು ಸಂತೋಷ ಪಟ್ಟರು. ಅವರು ತಮ್ಮ ಶಿಷ್ಯ ಸಮೂಹಕ್ಕೆ ತಮಗೆ ಬಂದ ವಿಚಾರವನ್ನು ಧೃಡಪಡಿಸಿ ಸ್ಫೂರ್ತಿಯನ್ನು ಕೊಟ್ಟರು. ಅವರೆದುರು ಅಧಿಕಾರಿ ಹಿರಿಯ ಶಿಷ್ಯ ವರ್ಗವೂ ಇತ್ತು. “ವಾಕ್ಯಾರ್ಥವು ಯಾವ ಶಾಸ್ತ್ರದಲ್ಲಿಯೇ ಆಗಲಿ, ಎಷ್ಟು ಜನ ಪಂಡಿತರಾದರೂ ಭಾಗವಹಿಸಲಿ ಸಭೆ ಪ್ರಾಮಾಣಿಕವಾಗಿ ಜರುಗಿದರೆ ಏನೂ ಚಿಂತೆ ಇಲ್ಲ. ಶ್ರೀಹರಿವಾಯುಗಳ ದಯದಿಂದ ಜಯ ನಮಗೇ ಸಿದ್ಧ. ಆದರೆ ಒಂದು ವೇಳೆ ಅಲ್ಲಿ ಏನಾದರೂ ಕೃತ್ರಿಮ, ದುರುದ್ದೇಶ ಗಳಿದ್ದರೆ ಮಾತ್ರ ಕಠಿಣವಾಗುತ್ತದೆ. ಏನೇ ಇರಲಿ ಇಂಥ ಸಂದರ್ಭದಲ್ಲಿ ಆಹ್ವಾನ ಬಂದಾಗ ಅದನ್ನು ನಾವು ಸ್ವೀಕರಿಸುತ್ತೇವೆ. ನಿಶ್ಚಿತಕಾಲ ಬರುವ ವರೆಗೆ ಶ್ರೀಭಾರತೀಪತಿ ಮುಖ್ಯಪ್ರಾಣರ ಸೇವಾತತ್ಪರರಾಗಿರುವೆವು.” ಎಂದರು.

ದಿನಗಳೆಯುತ್ತ ನಿರ್ದಿಷ್ಟ ದಿನವೂ ನಿಶ್ಚಿತ ಕಾಲವೂ ಪ್ರಾಪ್ತವಾಯಿತು. ಅಂದು ಪ್ರಾತಃಕಾಲ, ಆಚಾರ್ಯರು ನಿತ್ಯಾಹ್ನಿಕ ಪೂಜಾದಿಗಳನ್ನು ಮುಗಿಸಿ ಸಭೆಗೆ ಹೋಗುವ ಸಿದ್ಧತೆಯಲ್ಲಿ ಒಳಗೆ ಕುಳಿತುಕೊಂಡಿದ್ದರು. ಸಭೆಗೆ ಆಚಾರ್ಯರನ್ನು ಕರೆ ತರಲು ಕಳಿಸಿದ ಪಲ್ಲಕ್ಕಿಯು ಶ್ರೀ ಉತ್ತರಾದಿ ಮಠದ ದ್ವಾರವನ್ನು ಸಮೀಪಿಸಿತು. ದ್ವಾರದಲ್ಲಿಯೇ ಮುಂದಿನ ಆವಾರದಲ್ಲಿ ಒಬ್ಬ ವ್ಯಕ್ತಿಯು ಶಾಲು ಹೊದ್ದು ಕೊಂಡು ಗಂಭೀರವಾಗಿ ನಿಂತಿದ್ದರು. ಪಲ್ಲಕ್ಕಿಯು ಅವರನ್ನು ಸಮೀಪಿಸಿ ರಾಜಾಜ್ಞೆ ದಯ ಮಾಡಿಸಬೇಕು ಎಂದು ಪ್ರಾರ್ಥಿಸಿ ದರು. ಈ ವ್ಯಕ್ತಿಯು ಅವರ ಹೇಳಿಕೆಯನ್ನು ಮನ್ನಿಸಿ ಪಲ್ಲಕ್ಕಿಯಲ್ಲಿ ಕುಳಿತುಕೊಂಡು ಏರ್ಪಡಿಸಿದ ಸಭಾಂಗಣಕ್ಕೆ ದಯಮಾಡಿಸಿ ಪೀಠವನ್ನು ಅಲಂಕರಿಸಿದರು.

ವೇದ ಘೋಷದೊಂದಿಗೆ ಸಭಾ ಪ್ರಾರಂಭವಾಯಿತು. ತದ ನಂತರ ಆಚಾರ್ಯರು, "ನಮ್ಮ ಜೊತೆಗೆ ವಾಕ್ಯಾರ್ಥಮಾಡಲು ಬಂದ ಅದ್ವೈತ ಪಂಡಿತರು ಯಾರು ಅವರು ಮುಂದಕ್ಕೆ ಬರಬೇಕು, ಅಭಿಮುಖವಾಗಿ ಉಪಸ್ಥಿತರಾಗಬೇಕು." ಎಂದು ಗಂಭೀರ ವಾಣಿಯಲ್ಲಿ ನುಡಿದರು. ಅದೇ ಪ್ರಕಾರ ಪರಪಕ್ಷ ಪಂಡಿತರು ವಾದಕ್ಕೆ ಸಿದ್ಧರಾಗಿ ಮುಂದೆ ಬಂದರು.

ಬ್ರಹ್ಮಸೂತ್ರದ ಪ್ರಥಮ ಸೂತ್ರವಾದ "ಓಂ ಅಥಾತೋ ಬ್ರಹ್ಮ ಜಿಜ್ಞಾಸಾ ಓಂ" ಮೇಲೆ ವಾಕ್ಯಾರ್ಥ ಪ್ರಾರಂಭವಾಯಿತು. ಪ್ರಥಮತಃ ಉಭಯಪಕ್ಷದ ವರೂ ತಮ್ಮ ತಮ್ಮ ಭಾಷ್ಯ ಪ್ರಕಾರ ಸಾಮಾನ್ಯ ಅನುವಾದವನ್ನು ಮಾಡಿ ದರು. ಹಾಗೆ ಮಾಡಿದ ಪ್ರಥಮಾನುವಾದದಮೇಲೆ ಆಚಾರ್ಯರು ಕೆಲವು ವಿಶೇಷಾಂಶಗಳ ಪ್ರಬಲವಾದ ಪೂರ್ವಪಕ್ಷಗಳನ್ನು ಮಂಡಿಸಿದರು. ಯಾವ ದಕ್ಕೂ ಅದ್ವೈತ ಪಂಡಿತರಿಗೆ ಸಮರ್ಪಕವಾದ ಉತ್ತರವನ್ನು ಕೊಡಲಾಗಲಿಲ್ಲ. ಎರಡು ತಾಸು ವಾಕ್ಯಾರ್ಥವಾಗುವದರಲ್ಲಿ ಪರಪಕ್ಷ ಪಂಡಿತರು ಆಚಾರ್ಯರ ಯಾವ ಪೂರ್ವಪಕ್ಷಗಳಿಗೂ ಆಕ್ಷೇಪಗಳಿಗೂ ಸೂಕ್ತ ಉತ್ತರ ಕೊಡಲು ಶಕ್ತಿ ಸಾಲದೇ ನಿರ್ವಿಣ್ಣರಾದರು.

ಅದು ರಾಜಸಭೆ ಮತ್ತು ದೊಡ್ಡ ದೊಡ್ಡ ಅಧಿಕಾರಿಗಳೂ ಶಾಸ್ತ್ರಜ್ಞರೂ ಈ ವಾದ ಸಮಾರಂಭದಲ್ಲಿ ಮಧ್ಯಸ್ಥರಿದ್ದರು. ಜಯಪರಾಜಯ ವಿಷಯದಲ್ಲಿ

ಯಾವ ವಿವಾದಾಂಶವಿಲ್ಲದೆ ಅದ್ವೈತ ಪಂಡಿತರ ಸ್ಥಿತಿಯು ಶೋಚನೀಯ ವಾದದ್ದು ಸ್ಪಷ್ಟ ಗೋಚರವಾಗುತ್ತಿತ್ತು. ಪರಾಜಯವನ್ನು ಒಪ್ಪಲೇ ಬೇಕಾಯಿತು. ಸಭಿಕರೂ ಆಚಾರ್ಯರ ಶಿಷ್ಯರೂ ಮಾಯೀ ಶ್ರೀನಿವಾಸಾ ಚಾರ್ಯರಿಗೆ ಜಯಜಯಕಾರ ಮಾಡಿದರು. ಸಭಾಧಿಕಾರಿಗಳೂ ವಿದ್ಯಾಪಕ್ಷ ಪಾತಿಗಳೂ ಆಚಾರ್ಯರ ಅಮೋಘ ವಾಗ್ವೈಖರಿಯನ್ನು ಶ್ಲಾಘನೆ ಮಾಡಿ ದರು. ಸಭಾಧ್ಯಕ್ಷರು ಆಚಾರ್ಯರಿಗೆ ವಿಶೇಷ ಗೌರವ ಸಲ್ಲಿಸಲೋಸುಗ ದ್ರವ್ಯ, ಪಾತ್ರ ಮತ್ತು ವಸ್ತ್ರಾದಿಗಳನ್ನು ಸಜ್ಜುಗೊಳಿಸುವ ಗಡಿಬಿಡಿಯಲ್ಲಿ ಅನತಿ ದೂರದಲ್ಲಿ, ಮಗ್ನರಾಗಿದ್ದಾಗ ಉಳಿದವರು ಎಲ್ಲ ಬಹುಮಾನಗಳನ್ನು ಸಿದ್ಧಪಡಿಸಿಕೊಂಡು ಆಚಾರ್ಯರನ್ನು ನೋಡುವಷ್ಟರಲ್ಲಿ ಆಚಾರ್ಯರು ಕಾಣಲೇ ಇಲ್ಲ. ಯಾರನ್ನು ಕೇಳಿದರೂ ನನಗೆ ಗೊತ್ತಿಲ್ಲ, ತನಗೆ ಗೊತ್ತಿಲ್ಲ ವೆಂದು ಹೇಳಿದರು. ಹೊರಗಿದ್ದ ದ್ವಾರಪಾಲಕರನ್ನು ಕೇಳಿದರು. ಅವರು ಹೊರಗೆ ಯಾರೂ ಬರಲಿಲ್ಲ ಮತ್ತೂ ಹೋಗಿಲ್ಲವೆಂದರು. ಎಲ್ಲಿ ಹುಡುಕಿ ದರೂ ಎಷ್ಟು ಹುಡುಕಿದರೂ ಅದೃಶ್ಯರಾದ ಆಚಾರ್ಯರು ದೃಗ್ಗೋಚರ ರಾಗಲೇ ಇಲ್ಲ.

ಸಭಾಧ್ಯಕ್ಷರು ಸಭಾಧಿಕಾರಿಗಳು ಅಂದುಕೊಂಡರು. ಆಚಾರ್ಯರು ವೈರಾಗ್ಯ ಶಿಖಾಮಣಿಗಳು. ಅವರಿಗೆ ಈ ಲೌಕಿಕ ಮರ್ಯಾದೆಗಳೆಲ್ಲವೂ ತೃಣ ಪ್ರಾಯ. ಅವರನ್ನು ಪುನಃ ಇಲ್ಲಿಗೆ ಕರೆಯಿಸಿಕೊಳ್ಳುವದು ಉಚಿತವಲ್ಲವೆಂದು ಭಾವಿಸಿದರು. ಅವರಿಗೆ ಸಲ್ಲತಕ್ಕಮರ್ಯಾದೆಗಳೆಲ್ಲವನ್ನೂ ಪಲ್ಲಕ್ಕಿಯಲ್ಲಿಟ್ಟು ಅವರ ಮನೆಗೆ ಮುಟ್ಟಿಸಿ ಬರಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ/ಪಾರು ಪತ್ಯದಾರರಿಗೆ ಜವಾಬ್ದಾರಿವಹಿಸಿದರು.

ರಾಜಾಧಿಕಾರಿಗಳ ಆದೇಶದಂತೆ ಆಚಾರ್ಯರಿಗೆ ಸಲ್ಲತಕ್ಕ ಮರ್ಯಾದೆ ಗಳೊಡನೆ, ರಾಜಭೃತ್ಯರೊಡನೆ ಮತ್ತು ಪಾರುಪತ್ಯಗಾರರೊಡನೆ ಪಲ್ಲಕ್ಕಿಯು ಉತ್ತರಾದಿ ಮಠದ ಪ್ರಾಣದೇವರ ಮಹಾದ್ವಾರಕ್ಕೆ ತಲುಪಿತು. ಶ್ರೀಪ್ರಾಣ ದೇವರ ಸನ್ನಿಧಿಯಲ್ಲಿದ್ದ ಆಚಾರ್ಯರು, ತಮ್ಮನ್ನು ಕರೆದೊಯ್ಯಲು ಪಲ್ಲಕ್ಕಿ ಬಂದಿರಬೇಕೆಂದು ಹೊರಡಲು ಸಿದ್ಧರಾಗಿ ಹೊರಗೆ ಬಂದರು. ಪಾರುಪತ್ಯೆ ಗಾರರು ಪಲ್ಲಕ್ಕಿಯಲ್ಲಿದ್ದ ಮರ್ಯಾದೆಗಳನ್ನು ಪೂಜ್ಯ ಆಚಾರ್ಯರಿಗೆ

ಸಮರ್ಪಿಸಿದರು. ವಾದ ಪ್ರಸಂಗದಲ್ಲಿ ಜಯವಾದದ್ದಕ್ಕೆ ಪುನಃ ಆಚಾರ್ಯರನ್ನು ಶ್ಲಾಘಿಸಿದರು. ಸಭೆಯಲ್ಲಾ ದೆಯಶಸ್ಸನ್ನು ಬಾಯಿತುಂಬ ಕೊಂಡಾಡಿದರು. ಅವರು ಹೇಳಿದ್ದಲ್ಲ ಕೇಳಿಕೊಂಡರು. ಅವರೆಲ್ಲರೂ ಆಚಾರ್ಯರಿಗೆ ನಮಸ್ಕರಿಸಿ ಸ್ವಸ್ಥಳಕ್ಕೆ ಹೊರಟು ಹೋದರು.

ಅವರುಗಳು ಕೊಟ್ಟ ಮಾನ ಮರ್ಯಾದೆಗಳನ್ನು ಆಚಾರ್ಯರು ಒಳಗೆ ಪ್ರಾಣದೇವರ ಮುಂದೆ ತಂದಿಟ್ಟುಕೊಂಡು ದಿಗ್ಭ್ರಾಂತರಾಗಿ ಕುಳಿತುಬಿಟ್ಟರು. ನಾವು ಸಭೆಗೇ ಹೋಗಲಿಲ್ಲ. ಇಲ್ಲಿಯೇ ಇದ್ದೇವೆ. ಇದೆಲ್ಲವೂ ಪ್ರಾಣದೇವರ/ತದಂತರ್ಯಾಮಿ ಶ್ರೀಭಗವಂತನ ವಿಚಿತ್ರಲೀಲೆ. ಸಭೆಗೇ ಹೋಗದಿದ್ದ ನಮಗೆ, ಸ್ವಾಮಿಯು ತನ್ನ ವಿಚಿತ್ರ ವ್ಯಾಪಾರಗಳಿಂದ ಜಯವನ್ನು ತಂದು ನಮ್ಮ ಸೆರಗಿಗೆ ಕಟ್ಟಿದ್ದಾನೆ. ಅವನು ಎಂಥ ದಯಾ ಸಮುದ್ರನೆಂಬದು ಕೇವಲ ಶಾಸ್ತ್ರಗತ/ಗ್ರಂಥಗತ ವಿಷಯವಲ್ಲ. ಇಂದು ಆವನ ಕರುಣಾ ವಿಶೇಷವನ್ನು ನಮ್ಮ ಅನುಭವಕ್ಕೆ ತಂದುಕೊಟ್ಟು ಧನ್ಯರನ್ನಾಗಿ ಮಾಡಿದ್ದಾನೆ ಎಂದು ಅಂದುಕೊಂಡು ಪರಮಾನಂದ ಸಾಗರದಲ್ಲಿದ್ದರು.

ಶಿಷ್ಯರಿಗೆಲ್ಲ ಪಾಠ ಸಮಯದಲ್ಲಿ ಈ ವಿಷಯವನ್ನು ತಿಳಿಸಿದರು. ಇದು ದೇವಗುಹ್ಯ, ಎಲ್ಲ ಕಡೆಗೂ ಪ್ರಕಟಮಾಡಬಾರದೆಂದು ಶಿಷ್ಯರಿಗೆ ಆದೇಶವಿತ್ತರು. ಪುನಃ ತಮ್ಮ ಪಾಠಪ್ರವಚನಾದಿಗಳಲ್ಲಿ ತಲ್ಲೀನರಾದರು. ಆಚಾರ್ಯರ ಈ ಮಹಿಮೆಯನ್ನೂ/ವಿಚಿತ್ರ ಘಟನೆಯನ್ನು ಹೈದರಾಬಾದಿನ ಕೆಲವು ಆಸ್ತಿಕ ಶಿಖಾಮಣಿಗಳು ಈಗಲೂ ಸ್ಮರಿಸುತ್ತಾರೆ.

ಆಚಾರ್ಯರು ಹೈದರಾಬಾದದಲ್ಲಿರುವವರೆಗೆ ಆಸ್ತಿಕ ಮಹಾಶಯರಾದ ಶಿಷ್ಯ ವೃಂದವೆಲ್ಲ, ಮೋಕ್ಷಶಾಸ್ತ್ರಜ್ಞಾನಭಾಗಿಗಳಾದರು. ಜ್ಞಾನದಾನದ ಫಲವಾಗಿ ಆಚಾರ್ಯರು ಶ್ರೀಮುಖ್ಯಪ್ರಾಣ ತದಂತರ್ಯಾಮಿ ಶ್ರೀರಾಮಚಂದ್ರನ ಕರುಣಾಭಾಗಿಗಳಾದರು.

# ಗೋದಾವರೀ-ಕೃಷ್ಣಾ ತೀರಗಳಲ್ಲಿ ವಾಸ–೧೦

ಹಿಂದೆ ವರ್ಣಿಸಿದ ಭಾಗ್ಯನಗರದ ಆ ಸಭಾ ಘಟನೆಯ ನಂತರ ಪರಪಕ್ಷೀಯ ಪಂಡಿತರೆಲ್ಲ ಇವರೊಂದಿಗೆ ವಾದ ಮಾಡತಕ್ಕ ಉತ್ಸಾಹಗಳನ್ನು ತೊರೆದು ಶಾಂತರಾದರು. ಆಚಾರ್ಯರೂ ಸಹ ತಮ್ಮ ಪಾಠಪ್ರವಚನ ಕಾರ್ಯಕ್ರಮಗೊಳಿಂದಿಗೆ ನೆಮ್ಮದಿಯಿಂದ ಕಾಲ ಕಳೆಯುತ್ತಿದ್ದರು.

ಕೆಲಕಾಲಾನಂತರ ಆಚಾರ್ಯರಿಗೆ ಏಕಾಂತವನ್ನರಸಿ "ತತ್ವ ಪ್ರಕಾಶಿಕಾ" ಅವಲೋಕನ ಮಾಡಬೇಕೆಂಬ ಇಚ್ಛೆ ಮೂಡಿತು. ಹಾಗೆಯೇ ವಿಚಾರ ಮಾಡಲಾಗಿ ನದೀತೀರವೇ ಪವಿತ್ರವೂ, ಪ್ರಶಾಂತವೂ ಮತ್ತೂ ಪ್ರಶಸ್ತವೆಂದು ನಿರ್ಧರಿಸಲ್ಪಟ್ಟಿತು. ಪರಿಚಿತಸ್ಥರ ಮತ್ತು ಶಿಷ್ಯವರ್ಗದವರ ಅಭಿಪ್ರಾಯದಂತೆ ಗೋದಾವರೀ ತೀರದಲ್ಲಿದ್ದ "ತಡಪಾಕಲು" ಎಂಬ ಗ್ರಾಮಕ್ಕೆ ತೆರಳಿದರು. ಇವರ ಪರಿವಾರ ಮಿತವಾಗಿತ್ತು. ಆ ಊರಿನಲ್ಲಿ ದೇಶಮುಖರಿಗೆ ಆಚಾರ್ಯರ ಸಮಾಗಮ ತಿಳಿದು ಆದರಾತಿಥ್ಯಗಳನ್ನು ಮಾಡಿದರು.

ನಿತ್ಯದಲ್ಲಿ ಗೋದಾವರೀ ಸ್ನಾನ ಪ್ರಾತಃಕಾಲದಲ್ಲಿ ಪಾಠ ತತ್ವಪ್ರಕಾಶಿಕಾ ಅನುವಾದ. ನಂತರ ದೇವತಾರ್ಚನೆ ಸೂತ್ರ ಪಾರಾಯಣಾದಿಗಳು, ನೈವೇದ್ಯ ಭೋಜನಾದಿಗಳು. ಮಧ್ಯಾಹ್ನ ಸಮಯದಲ್ಲಿ ಶಾಸ್ತ್ರಚಿಂತನ ಉಳಿದ ಸಮಗ್ರ ವೇಳೆಯೂ ಶಾಸ್ತ್ರಾವಮರ್ಶದನಲ್ಲಿಯೇ ಸತ್ಕಾಲಕ್ಷೇಪವಾಗುತ್ತಿತ್ತು. ಪರಮಾತ್ಮನನ್ನು ಅಷ್ಟಾಂಗ ಯೋಗದಿಂದ ಮನಸ್ಸು ಏಕತ್ರ ನಿಲ್ಲಿಸಿ ಧ್ಯಾನ ಮಾಡಿರಿ. ಇದು ಸಾಧ್ಯವಾಗದಿದ್ದರೆ ಬದಲಾಗಿ ಸಂತತಶಾಸ್ತ್ರಾವಮರ್ಶನ ಮಾಡಿರಿ. ಎರಡೂ ಮಾರ್ಗಗಳಿಂದಲೂ ಪರಮಾತ್ಮನನ್ನು ಒಲಿಸಲು ಸಾಧ್ಯ. ಎರಡನೆಯದು ಕೆಲವಂಶಗಳಲ್ಲಿ ಹಿರಿದು. ಮೊದಲನೆಯ ಮಾರ್ಗವು ಒಬ್ಬರಿಗೇ ಸಾಧಕವಾದರೆ, ಎರಡನೆಯ ಮಾರ್ಗ ಅನೇಕರಿಗೆ ಏಕಕಾಲಕ್ಕೆ ಸಾಧನ ಸಾಧ್ಯತೆಯನ್ನುಂಟುಮಾಡುತ್ತದೆ ಎಂದು ಶ್ರೀ ಮಧ್ವಾಚಾರ್ಯರ ತಂತ್ರಸಾರದ ಉಕ್ತಿಯನ್ನು, ಶ್ರೀನಿವಾಸಾಚಾರ್ಯರ ಜೀವನ ಅನುಷ್ಠಾನಗಳನ್ನು ಸೂಕ್ಷ್ಮವಾಗಿ ನೋಡಿದಾಗ ನಮಗೆ ಗೊತ್ತಾಗುತ್ತದೆ. ಇದೇ ತಪಸ್ಸೆನ್ನಬಹುದು.

ಎಂಟು ತಿಂಗಳ ಈ ಪ್ರಕಾರದ "ತತ್ವಪ್ರಕಾಶದ" ಅವಲೋಕನ ನಿಮಿತ್ತ ವಾಗಿ, ಪ್ರಶಾಂತ ವಾತಾವರಣದಲ್ಲಿ ಪವಿತ್ರಸ್ಥಳದಲ್ಲಿ ತಪಸ್ಸನ್ನಾಚರಿಸಿ, ಅಂತಃ ಪ್ರಕಾಶವನ್ನು ಅಭಿವೃದ್ಧಿಗೊಳಿಸಿದರೆಂದುಕೊಳ್ಳಬಹುದು. ಭವ್ಯವಾದ ಮಂಗಳದೊಂದಿಗೆ ಏಕಾಂತ ವಾಸ ಸೇವಿತ್ವವನ್ನು ಪರಿಸಮಾಪ್ತಿ ಮಾಡಿ ಕೊಂಡು ಹೈದರಾಬಾದಿಗೆ ಮರಳಿ ಬಂದರು.

ಅಚಾರ್ಯರು ತಿರುಗಿ ಬರುವ ಅವಧಿಯೊಳಗೆ, ನವಾಬರು ಕೊಟ್ಟಿದ್ದ ಜಹಗೀರಿನ ಗ್ರಾಮ ಭೂಮಿಗಳು ಶ್ರೀ ಆಚಾರ್ಯರಿಗೆ ವಂಶಪಾರಂಪರ್ಯ ವಾಗಿ ಯಾವ ಆತಂಕವೂ ಇಲ್ಲದೇ ನಡೆಯಬೇಕೆಂಬ ಉದ್ದೇಶದಿಂದ ಹೈದರಾ ಬಾದಿನಲ್ಲಿದ್ದ ಸದ್ಗೃಹಸ್ಥರೂ, ಸರಕಾರೀ ಅಧಿಕಾರಿಗಳೂ ಮತ್ತು ಆಚಾರ್ಯರ ಶಿಷ್ಯ ಪ್ರಮುಖರೂ ಸನದು ಕಾಗದಪತ್ರಗಳನ್ನೆಲ್ಲ ಸಿದ್ಧ ಪಡಿಸಿ ಇಟ್ಟಿದ್ದರು. ಆಚಾರ್ಯರು ಬರುವದನ್ನನೇಕರು ಕಾಯುತ್ತಿದ್ದರು. ಅವರ ಆಗಮನವು ಸಕಲ ಆಸ್ತಿಕ ಮಾಧ್ವ ಜನಾಂಗಕ್ಕೆ ಹೊಸ ಚೈತನ್ಯವನ್ನೇ ತಂದುಕೊಟ್ಟಿತು.

ಒಂದು ವಿಜಯದಶಮಿ ಶುಭ ಮುಹೂರ್ತದಲ್ಲಿ, ಮಂತ್ರಿಗಳಾದ ಶ್ರೀ ಸಾಲಾರ್‌ಜಂಗರವರು ಆಚಾರ್ಯರನ್ನು ನವಾಬರ ದರ್ಶನಕ್ಕಾಗಿ ಕರೆದು ಕೊಂಡು ಅಧಿಕಾರಿ ಶಿಷ್ಯ ವರ್ಗದವರ ಸಂಗಡ ಹೋದರು. ಆಚಾರ್ಯರ ವಿಲಕ್ಷಣ ಬ್ರಹ್ಮ ವರ್ಚಸ್ಸನ್ನು ನೋಡಿ ನವಾಬರು ಮುಗ್ಧರಾದರು. ನವಾಬರು ಆಚಾರ್ಯರಿಗೆ ಒಂದು ಸಹಸ್ರ ರೂಪಾಯಿಗಳು ಶಾಲು ಜೋಡಿ ಸನದುಗಳನ್ನು ಸ್ವತಃ ಕೊಟ್ಟು, ಗೌರವಿಸಿದರು.

ಇದಾದದ ನಂತರ ಸ್ವಲ್ಪ ಕಾಲದಲ್ಲಿಯೇ ಆಚಾರ್ಯರು ಕೃಷ್ಣಾ ತೀರ ದಲ್ಲಿದ್ದ ಚಿತ್ತಾಪುರಕ್ಕೆ ಪ್ರಯಾಣ ಮಾಡಲು ನಿರ್ಧರಿಸಿದರು. ಅದು ನವಾಬರ ಆದೇಶವೂ ಆಗಿತ್ತು.

ಚಿತ್ತಾಪುರವು ಛಾಯಾಭೋಗವತೀ ಕ್ಷೇತ್ರಾಂತರ್ಗತವಾಗಿ ಸ್ವಯಂ ಪುಣ್ಯಕ್ಷೇತ್ರವೆನಿಸಿದೆ. ಮಹಾತ್ಮರ ದರ್ಶನ ಸ್ಪರ್ಶನಗಳಿಂದ ಪಾವಿತ್ರ್ಯವು ವೃದ್ಧಿಯಾಗುತ್ತದೆ. ಆಚಾರ್ಯರು ಆ ಸ್ಥಳಕ್ಕೆ ಹೋಗಿ ನೆಲೆಸುವದು ಶ್ರೀಹರಿ ಚಿತ್ತಕ್ಕೆ ಬಂದದ್ದರಿಂದ ಆಸ್ಥಳವು ಚಿತ್ತಾಪುರವಾಯಿತೆನ್ನುವಾ. ವರದಾತೀರ ದಲ್ಲಿ ಜನಿಸಿ, ಬೆಳೆದ ಬಾಳಾಚಾರ್ಯರ ಪುತ್ರರು ಕೃಷ್ಣಾ ತೀರದಲ್ಲಿ ಸ್ಥಿರವಾಗಿ

ನೆಲೆಸಿದರು. ಆಗ ನೆಲೆಸಿದ್ದರು ಮಾತ್ರವೆಂದಲ್ಲ. ವರ್ತಮಾನಭವಿಷ್ಯಕಾಲಗಳಲ್ಲಿ ಆಮಾತು ಸ್ಥಿರವೇ ಆಯಿತು.

ಆಚಾರ್ಯರು ಚಿತ್ತಾಪುರಕ್ಕೆ ತಲುಪಿದ ನಂತರ ಒಂದು ಪರ್ಣಶಾಲೆಯನ್ನು ನಿರ್ಮಿಸಿಕೊಂಡು ಅಲ್ಲಿಯೇ ವಿದ್ಯಾರ್ಜನೆಗಾಗಿ ಬಂದ ಶಿಷ್ಯರಿಗೆ ಶ್ರೀಸರ್ವಜ್ಞಾಚಾರ್ಯರ ಶಾಸ್ತ್ರ ಪಾಠಪ್ರವಚನಾದಿಗಳೊಂದಿಗೆ ಕಾಲವನ್ನು ಸದ್ವಿನಿಯೋಗದಲ್ಲಿ ಕಳೆಯುತ್ತಿದ್ದರು. ನವಾಬರು ಕೊಟ್ಟ ಜಹಗಿರುಗ್ರಾಮ ಭೂಮಿಗಳಿಂದ ಬಂದ ಆದಾಯವನ್ನು ವಿದ್ಯಾರ್ಥಿಗಳಿಗೆ ಉಚಿತ ಅಶನ ವಸತಿ ಮಂಗಳಕಾರ್ಯಗಳು ಇತ್ಯಾದಿಗಳಿಗೆ ವಿನಿಯೋಗಿಸುತ್ತಿದ್ದರೇ ವಿನಃ ತಮ್ಮ ಸ್ವಂತ ಭೋಗ ಭಾಗ್ಯಗಳಿಗೆ ಉಪಯೋಗಿಸುತ್ತಿರಲಿಲ್ಲ. ತಾವು ತಮ್ಮ ಸ್ವಂತ ಸುಖಾದಿಗಳನ್ನು ಕಡಿಮೆ ಮಾಡಿ, ಹರಿಪ್ರೀತಿಗಾಗಿ ದೇಹದಂಡನಾದಿ ರೂಪ ಕಠಿಣವ್ರತಗಳನ್ನು ಆಚರಿಸುತ್ತಿದ್ದರು. ಆಡಂಬರದ ಜೀವನ ಇವರ ವಿಚಾರ ಸರಣಿಯಿಂದ ದೂರವಿತ್ತು.

ಇವರ ಪರ್ಣಶಾಲೆಯು ಪಕ್ಕದಲ್ಲಿಯೇ ಒಂದು ಅಶ್ವತ್ಥವೃಕ್ಷವಿತ್ತು. ವಾಯೀ ಆಚಾರ್ಯರರಲ್ಲಿಯೂ ಸಹ ಅಶ್ವತ್ಥವೃಕ್ಷದ ಸಾದೃಶ್ಯವಿತ್ತು. ಯಾಕೆಂದರೆ ಅದೂ ಹಿಮವರ್ಷಾತಪಗಳನ್ನು ಸಹಿಸುತ್ತಿದ್ದಿತು. ಅದರಂತೆ ಇವರೂ ಅವುಗಳನ್ನು ಸಹಿಸುತ್ತ ಶಮ, ದಮ, ತಿತೀಕ್ಷಾದಿಗಳಿಂದಯುಕ್ತರಾಗಿ ತಪೋನಿರತರಾಗಿದ್ದರು.

ಪರ್ಣಕುಟೀರಕ್ಕೆ ಅನತಿ ದೂರದಲ್ಲಿ ಒಂದು ತೋಟ/ಆರಾಮವನ್ನು ನಿರ್ಮಿಸಿದರು. ತೋಟದಲ್ಲಿ ಬಾಳೆ, ತರಕಾರಿ, ಹೂಗಳಲ್ಲದೆ ಯಥೇಚ್ಛ ಮಾವಿನ ಮರಗಳನ್ನು ಬೆಳೆಸಿದ್ದರು. ಕಾಲಕ್ರಮೇಣ ಆ ವೃಕ್ಷಗಳು ದಟ್ಟವಾದ ನೆರಳನ್ನೂ ಮಧುರ ರಸಭರಿತ ಉತ್ತಮಫಲಗಳನ್ನೂ ಕೊಡುತ್ತಿದ್ದವು. ಈ ವೃಕ್ಷಗಳ ಪರೋಪಕಾರ ಸಾದೃಶ್ಯವನ್ನು ಆಚಾರ್ಯರಲ್ಲಿ ನೋಡಬಹುದು. ಇವರು ಕೊಟ್ಟ ಜ್ಞಾನಫಲವನ್ನು ಭಕ್ತಿರಸದಲ್ಲಿ ಎದ್ದಿ ಶಿಷ್ಯವರ್ಗವು ಆಜನ್ಮ ಸವಿಯಿತು.

ಅನೇಕ ಸಂದರ್ಭದಲ್ಲಿ ಆಚಾರ್ಯರು ನಿಸರ್ಗದ ಛಾಯೆಯಲ್ಲಿ ಅಂದರೆ ಮಾವಿನ ಮರದ ದಟ್ಟವಾದ ನೆರಳಲ್ಲಿ ಪಾಠಗಳನ್ನು ಹೇಳುತ್ತಿದ್ದರು. ಸ್ವಚ್ಛ

ವಾತಾವರಣ, ಸ್ಪಷ್ಟವಿವರಣೆ ಮಾಡತಕ್ಕಗುರುಗಳು (ವಕ್ತ್ರಾನುಕೂಲ್ಯವಿರುವ ಗುರುಗಳು), ಶ್ರವಣಮಾಡಿದ್ದನ್ನು ಧಾರಣಮಾಡತಕ್ಕ ಬ್ರಹ್ಮ ಜಿಜ್ಞಾಸು ಮುಮುಕ್ಷುಗಳು (ಶ್ರೋತ್ರಾನುಕೂಲ್ಯ), ಇಬ್ಬರಿಗೂ ಇಚ್ಛೆ ಇದ್ದುದರಿಂದ ಪ್ರಸಂಗಾನುಕೂಲ್ಯವಿಲ್ಲದಿರಲು ಸಾಧ್ಯವೇ !

ಇಂಥ ಸರ್ವಪ್ರಕಾರ ಅನುಕೂಲವಿರುವ ವಾತಾವರಣದಲ್ಲಿ ನಿತ್ಯನಿರಂತರ ಶ್ರೀಮನ್ನ್ಯಾಯಸುಧಾ ಪಾಠವನ್ನು ಹೇಳಿ ನಿರ್ವಿಘ್ನಪರಿಸಮಾಪ್ತಿಗೊಳಿಸಿ ಮಹಾಮಂಗಳವನ್ನು ಮಾಡಿ ಗುರುಶಿಷ್ಯರುಗಳು ಶ್ರೀಮಧ್ವರಾಯರ, ಶ್ರೀಟೀಕಾರಾಯರ ಪರಮಾನುಗ್ರಹಕ್ಕೆ ಪಾತ್ರರಾಗಿ ಧನ್ಯತೆಯನ್ನು ಪಡೆದರು.

ಸಂತತ ಶಾಸ್ತ್ರಾವಮರ್ಶನ, ಪವಿತ್ರಸ್ಥಳಗಳಲ್ಲಿ ಏಕಾಂತ ಸೇವಿತ್ವ, ಆರಾಮ ನಿರ್ಮಾಣ, ತತ್ಸದೃಶ ಇಚ್ಛಾದಿಗಳು ಹರಿಭಕ್ತರ ಲಕ್ಷಣಗಳೆಂದೂ ಭಾಗವತ ಧರ್ಮಗಳೆಂದೂ ಭಾಗವತ/ಭವಿಷ್ಯೋತ್ತರ ಪುರಾಣಗಳಲ್ಲಿ ಉಲ್ಲಿಖಿತ ವಾಗಿವೆ. ಇಂಥ ಅನೇಕ ಭಾಗವತರ ಲಕ್ಷಣಗಳನ್ನು ಆಚಾರ್ಯರಲ್ಲಿ ಗುರುತಿಸ ಬಹುದಾಗಿತ್ತು. ನವಾಬರು ಕೊಟ್ಟ ಜಹಗೀರುಗಳಲ್ಲಿ ಇವರು ಸಾಕಷ್ಟು ಶ್ರೀಮಂತಿಕೆಯ ಸುಖಗಳನ್ನನುಭವಿಸಬಹುದಾಗಿತ್ತು. ಆದರೆ ಇವರಿಗೆ ಬಂದ ಆಸ್ತಿಪಾಸ್ತಿಗಳು ಇವರನ್ನು ತಮ್ಮ ವೈರಾಗ್ಯಮಾರ್ಗದಿಂದ ವಿಚಲಿಸಲಾಗಲಿಲ್ಲ. ನದೀ ತೀರದಲ್ಲಿ ಅತಿ ಕನಿಷ್ಟ ಅವಶ್ಯಕತೆಗಳನ್ನೂ ಲೆಕ್ಕಿಸದೆ ಭಗವದಾರಾಧನೆ ಯಲ್ಲಿ ನಿರತರಾಗಿರುವದು ನೈಜ ವೈರಾಗ್ಯದ ಲಕ್ಷಣವಲ್ಲವೇ ?

ಕೆಲವು ಕಾಲಾನಂತರ ಪರ್ಣಕುಟೀರವು ಬಿರುಗಾಳಿಯ ಪಾಲಾಗಿ ಅದರಲ್ಲಿ ವಾಸವು ಅಸಾಧ್ಯವೆನಿಸಿತು. "ಭದ್ರವಾದ ಒಂದು ಮನೆಕಟ್ಟಿಕೊಂಡು ಶಿಷ್ಯ ಸಮೇತ ಊರಲ್ಲಿ ವಾಸವಾಗಿರಿ. ಅತಿಯಾದ ದೇಹದಂಡನೆಬೇಡ. ಇಷ್ಟ ರಿಂದಲೇ ನಾವು ಪ್ರೀತರಾಗಿದ್ದೇವೆ" ಎನ್ನುವಂತಿತ್ತು ವಾಯುದೇವರ ಆ ಪರ್ಣ ಕುಟಿಯ ಧ್ವಂಸ.

ನೈಸರ್ಗಿಕ ಆಜ್ಞೆಯಿಂದಲೂ ಶಿಷ್ಯರ ಪ್ರಾರ್ಥನೆಯನ್ನು ಮಾನ್ಯಮಾಡು ವದಕ್ಕೋಸ್ಕರವೂ ನದಿಯಿಂದ ಅನತಿ ದೂರದಲ್ಲಿ ಊರಿನಲ್ಲಿ ಒಂದು ಭದ್ರವಾದ ಮನೆ ನಿರ್ಮಾಣಮಾಡಿಕೊಂಡು, ಭೂಮಿಗಳನ್ನೆಲ್ಲ ವ್ಯವಸಾಯ ಪದ್ಧತಿ ಯಂತೆ ಸಾಗು ಮಾಡಿಸಿ, ಗ್ರಾಮಕ್ಕೆ ಒಂದು ಹೊಸ ಚೈತನ್ಯ ತಂದುಕೊಟ್ಟು

ತಮ್ಮ ನಿತ್ಯನೈಮಿತ್ತಿಕ, ಅಧ್ಯಾತ್ಮಿಕ ಕಾರ್ಯಕ್ರಮಗಳೊಂದಿಗೆ ಸಚ್ಛಿಷ್ಯರ ಸಜ್ಜನರ ಸಮುದಾಯದಲ್ಲಿ ಶ್ರೀಹರಿವಾಯುಗಳ ಸೇವೆಯಲ್ಲಿ ಹಗಲಿರುಳು ಭಗವಂತನ ಸ್ಮರಣಾರಾಧನೆಗಳೊಂದಿಗೆ ಕಾಲಯಾಪನೆಮಾಡುತ್ತಿದ್ದರು.

## ಆಶ್ರಮ ಪೂರ್ವದಲ್ಲಿ ಅತಿಥಿಸತ್ಕಾರ–೧೧

ಯದ್ಯಪಿ ಆಚಾರ್ಯರು ಚಿತ್ತಾಪುರದಲ್ಲಿಯೇ ಸ್ಥಿರವಾಸಿಗಳಾಗಿದ್ದರೂ ಅಪರೂಪವಾಗಿ ಅಲ್ಲಲ್ಲಿ ಸಂಚರಿಸುತ್ತಿದ್ದರು. ಹಾಗೆ ಸಂಚಾರ ಮಾಡುವಾಗ ಒಂದು ಸಲ ಸೊನ್ನಿ ಎಂಬ ಗೋದಾವರೀ ತೀರದ ಗ್ರಾಮದಲ್ಲಿ ಎರಡುಮೂರು ದಿನಗಳು ಒಂದು ದೇವಾಲಯದಲ್ಲಿ ಬೀಡಾರ ಮಾಡಿದ್ದರು. ಸಂಗಡ ಪರಿವಾರ ಶಿಷ್ಯರೂ ಕೂಡಿ ನಲವತ್ತು-ಐವತ್ತು ಜನರಿದ್ದರು. ಈ ಮೂರು ದಿನಗಳಲ್ಲೊಂದು ದಿನ, ಆಚಾರ್ಯರು ನಿತ್ಯ ದಿನಚರಿಯಂತೆ ಪ್ರಾತಃಕಾಲ ಪಾಠ ತದನಂತರ ಪೂಜಾನೈವೇದ್ಯಾದಿಗಳು ಮಧ್ಯಾಹ್ನ ಒಂದು ಗಂಟೆ ಸುಮಾರಿಗೆ ಮುಗಿದವು. ಎಲ್ಲರೂ ಭೋಜನಕ್ಕೆ ಸಿದ್ಧರಾಗುವ ವೇಳೆ.

ಆ ಸಮಯದಲ್ಲಿ ಒಬ್ಬ ಬ್ರಾಹ್ಮಣರು ಪರಸ್ಥಳದಿಂದ ಪುರಪ್ರವೇಶಮಾಡಿ ಹೆಗಲಮೇಲೆ ಹಸಿವಿ ಹಾಕಿಕೊಂಡು, ಆಚಾರ್ಯರು ತಂಗಿದ್ದ ದೇವಾಲಯದ ಮುಂದೆಯೇ ಹಾದು ಹೋಗುತ್ತಿದ್ದರು. ಆಕಸ್ಮಿಕ ಅವರ ಕಡೆಗೆ ಆಚಾರ್ಯರ ದೃಷ್ಟಿ ಬಿದ್ದಿತು. ಶಿಷ್ಯರನ್ನು ವಿಚಾರಿಸಲು ಕಳಿಸಿದರು. ಅವರು ಪರಸ್ಥಳದವರೆಂದು ಗೊತ್ತಾಯಿತು. ಮಧ್ಯಾಹ್ನದ ವೇಳೆಗೆ ಬಂದ ಅತಿಥಿಗಳನ್ನು ಬಿಡಬಾರದೆಂದು ಆದರಪೂರ್ವಕ ಪ್ರಾರ್ಥನೆಯನ್ನು ಮಾಡಿ ತಮ್ಮಲ್ಲಿಗೇ ಭೋಜನಕ್ಕೆ ಆಹ್ವಾನಿಸಿದರು. ಅತಿಥಿಗಳು "ನಮ್ಮ ಸ್ನಾನಾಹ್ನಿಕ ಪೂಜಾದಿಗಳಾಗಲು ಸಾಕಷ್ಟು ವೇಳೆಬೇಕು. ತಾವು ನಮಗೋಸ್ಕರ ಅಷ್ಟು ವೇಳೆ ಕಾಯುವದು ಉಚಿತವಲ್ಲ. ನೀವು ನಿಮ್ಮ ಕಾರ್ಯಕ್ರಮದಂತೆ ಮಾಡಿರಿ. ನಾವು ಪೂಜಾನಂತರ ಅನ್ಯತ್ರ ಹೋಗುವೆವು" ಎಂದರು. ಆಚಾರ್ಯರು ಮತ್ತು ಶಿಷ್ಯರು

ಹೇಳಿದರು "ಎಷ್ಟೇ ವೇಳೆ ಆಗಲಿ ನಾವು ಕಾದಿರುವೆವು. ತಾವು ಸಂಕೋಚ ಮಾಡದೆ ಯಥಾ ಸಾಂಗವಾಗಿ ಸ್ನಾನಾಹ್ನಿಕಗಳನ್ನು ಮುಗಿಸಿ ಇಲ್ಲಿಗೇ ಭೋಜನಕ್ಕೆ ಬರಬೇಕು" ಎಂದು ಪ್ರಾರ್ಥಿಸಿದರು. ಅನುಮಾನಿಸುತ್ತಿದ್ದ ಅತಿಥಿಗಳು ಕೊನೆಗೆ ಒಪ್ಪಿದರು.

ಅತಿಥಿಗಳು ನದಿಗೆ ಹೋಗಿ ಸ್ನಾನ ಅಹ್ನಿಕಾದಿಗಳನ್ನು ಮುಗಿಸಿಕೊಂಡು ಆತಿಥ್ಯಕ್ಕೆ ಬರುವವೇಳೆಗೆ ಮಧ್ಯಾಹ್ನ ನಾಲ್ಕುಗಂಟೆಯಾಗಿತ್ತು. ಆಚಾರ್ಯರ ಪರಿವಾರವೆಲ್ಲವೂ ಶಾಂತಚಿತ್ತದಿಂದ ಕಾದಿದ್ದರು.

ಅತಿಥಿಗಳು ಬಂದೊಡನೆ ಎಲ್ಲರೂ ಹಸನ್ಮುಖರಾಗಿಯೇ ಭೋಜನವನ್ನು ಮಾಡಿದರು. ಭೋಜನ ವೇಳೆಯಲ್ಲಿ ಬೇಕಾದಷ್ಟು ಉಪಚಾರ ಮಾಡಿದರು. ತಡವಾದದ್ದಕ್ಕೆ ಯಾರಿಂದಲೂ ಯಾವ ತರಹದ ಪ್ರತಿಕ್ರಿಯೆಯಾಗಲಿ, ಕಿಂಚಿತ್ತಾದರೂ ಜಿಗುಪ್ಸೆಯಾಗಲಿ ಯಾರಲ್ಲಿಯೂ ತೋರಲಿಲ್ಲ.

ಭೋಜನಾನಂತರ ಆಚಾರ್ಯರೂ ಅತಿಥಿ ಬ್ರಾಹ್ಮಣರೂ ಕುಳಿತು ಅಲ್ಪಕಾಲ ಮಾತಾಡಿದರು. ಅತಿಥಿಗಳು ಮಾತನಾಡಿದ್ದು ತೀರ ಕಡಿಮೆ. ಆದರೆ ಅತಿಥಿಗಳು ಹೊರಡುವ ಮುನ್ನ ಒಂದು ಮಾತನ್ನು ಮಾತ್ರ ಖಚಿತವಾಗಿ ನುಡಿದರು. "ಆಚಾರ್ಯರೇ, ಇಂದು ನಮ್ಮ ಸ್ನಾನಾಹ್ನಿಕಗಳ ಕಾರಣವಾಗಿ ನಿಮ್ಮನ್ನು ಅತಿಯಾಗಿ ಕಾಯಿಸಿಬಿಟ್ಟೆವು. ಅನ್ಯಥಾಭಾವಿಸೋಣವಾಗಬಾರದು. ತಮ್ಮ ಶಾಂತ ಪ್ರವೃತ್ತಿಗೆ ನಾವು ಮಾರುಹೋದೆವು. ತಮ್ಮ ಪರಿವಾರದವರೂ ಅಷ್ಟೇ. ಇನ್ನೊಂದು ಸ್ಥಳವಾಗಿದ್ದರೆ ಪ್ರತಿಕ್ರಿಯೇ ಏನಾಗುತ್ತಿತ್ತೆಂದು ಹೇಳಲಾರೆವು. ಇದು ತಮ್ಮ ತಪಸ್ಸಿನ ಫಲ. ಇನ್ನು ಮೂರು ತಿಂಗಳೊಳಗೆ ತಮಗೆ ಆಶ್ರಮವಾಗುವದು. ಇದು ಭಗವದಿಚ್ಛೆ." ಎಂದು ನುಡಿದು ಆಸ್ಥಳದಿಂದೆದ್ದು ಹೊರಟೇ ಬಿಟ್ಟರು.

"ಅತಿಥಿಗಳು ನುಡಿದ ಮಾತು. ಶ್ರೀಹರೀಚ್ಛೆ ಇದ್ದರೆ ಹಾಯೇ ಆಗಲಿ" ಎಂದು ಆಚಾರ್ಯರು ಮನಸ್ಸಿನಲ್ಲಿಯೇ ಅಂದುಕೊಂಡು ಮಾರನೆಯದಿನ ಚಿತ್ತಾಪುರಕ್ಕೆ ಪ್ರಯಾಣ ಬೆಳೆಸಿದರು.

# ಶ್ರೀನಿವಾಸಾಚಾರ್ಯರು–ಶ್ರೀಪಾದಂಗಳವರಾದರು

(ಕ್ರಿ. ಶ. ೧೮೭೨)

ಶ್ರೀನಿವಾಸಾಚಾರ್ಯರು ಚಿತ್ತಾಪುರದಲ್ಲಿ ಸ್ಥಿರವಾಗಿ ನೆಲೆಸಿದ ಕಾಲದಲ್ಲಿ ಶ್ರೀಮನ್ಮಧ್ವಾಚಾರ್ಯರ ಮೂಲಸಂಸ್ಥಾನ ಉತ್ತರಾದಿಮಠದ ಪೀಠದಲ್ಲಿ, ಮೂವತ್ತುಮೂರನೆಯ ಯತಿವರ್ಯರಾದ ಶ್ರೀ ೧೦೦೮ ಶ್ರೀ ಸತ್ಯೇಷ್ಟ ತೀರ್ಥ ಶ್ರೀಪಾದಂಗಳವರು ಪೀಠಸ್ಥರಾಗಿದ್ದರು. ಇವರು ಜ್ಞಾನ, ಭಕ್ತಿ ಮತ್ತು ವಿರಕ್ತಿಗಳ ಆಕರಪ್ರಾಯರಾಗಿದ್ದರು. ಶ್ರೀ ೧೦೦೮ ಶ್ರೀಸತ್ಯ ಪರಾಯಣ ತೀರ್ಥರು ಪೀಠಸ್ಥರಾದಕಾಲದಿಂದಲೂ, ತಾವು ಯತಿಗಳಾಗುವ ವರೆಗೆ ಅಂದರೆ ಸುಮಾರು 24 ವರ್ಷಗಳಕಾಲ ಶ್ರೀ ನರಸಿಂಹಾಚಾರ್ಯರು (ಶ್ರೀಸತ್ಯೇಷ್ಟರ ಪೂರ್ವಾಶ್ರಮನಾಮ) ಸಂಸ್ಥಾನದ ವಿದ್ವಾಂಸರಾಗಿಯೇ ಇದ್ದರು. ಈ ಸ್ಥಾನಮಾನಗಳನ್ನು ಅಷ್ಟು ದೀರ್ಘಕಾಲ ರಕ್ಷಣೆ ಮಾಡಿ ಕೊಂಡು ಬಂದಿರುವ ಈ ಮಹನೀಯರ ಶಾಸ್ತ್ರಜ್ಞಾನಾದಿಗಳನ್ನು ಕುರಿತು ಪ್ರತ್ಯೇಕ ವರ್ಣಿಸಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಶ್ರೀಸತ್ಯಪರಾಯಣ ತೀರ್ಥರಿಂದ ಆಶ್ರಮವು ಪಾಚ್ಛಾಪುರದ ಶ್ರೀನಿವಾಸಾಚಾರ್ಯರಿಗೆ ಆಯಿತು. ಅವರಿಗೆ ಶ್ರೀ ಶ್ರೀ ಸತ್ಯಕಾಮತೀರ್ಥ ರೆಂದು ನಾಮಧೇಯ. ಇವರು ಶ್ರೀ ಹತ್ತಿಮತ್ತೂರು ನರಸಿಂಹಾಚಾರ್ಯ ರೆಂಬವರಿಗೆ ಆಶ್ರಮವನ್ನಿತ್ತು ಶ್ರೀ ೧೦೦೮ ಶ್ರೀಸತ್ಯೇಷ್ಟರೆಂಬ ನಾಮಧೇಯ ವನ್ನಿತ್ತರು. ಶ್ರೀನರಸಿಂಹಾಚಾರ್ಯರು ಶ್ರೀವಾಯಿ ಶ್ರೀನಿವಾಸಾಚಾರ್ಯರಿಗೆ ತಮ್ಮ ಹಸ್ತಲಿಖಿತ ಸುಧಾಪುಸ್ತಕವನ್ನು ದಾನ ಮಾಡಿದ ವಿಷಯ ಪೂರ್ವ ದಲ್ಲಿಯೇ ವಿವರಿಸಿದೆ.

ಶ್ರೀ ಶ್ರೀಸತ್ಯೇಷ್ಟರಿಗೆ ವಾಯಿ ಶ್ರೀನಿವಾಸಾಚಾರ್ಯರ ವೈಯಕ್ತಿಕ ಪರಿಚಯವೂ ವಿದ್ವತ್ತಿನ ಪರಿಚಯವೂ, ಮಧ್ವಶಾಸ್ತ್ರ ಪ್ರಸಾರದಲ್ಲಿ ಪರಮ ದೀಕ್ಷೆಯೂ ಮತ್ತು ಸ್ವಪರಮತ ಪಂಡಿತ ವರ್ಗದಲ್ಲಿ ಪ್ರಸಿದ್ಧಿಗಳೂ ವಿದಿತವಾಗಿ ದ್ದವು. ದ್ವೈತ ವಿದ್ವಾಂಸರಲ್ಲಿ ಇವರನ್ನು ಚತುಶ್ಶಾಸ್ತ್ರಗಳಲ್ಲಿ ಮೀರಿಸುವವರು

ಯಾರೂ ಇರಲಿಲ್ಲವೆಂಬ ವಿಷಯವೂ ಮತ್ತೂ ಇವರ ಪಾಠಪ್ರವಚನ ವಾಣಿಯು ಸುಂದರ, ಗಂಭೀರ, ಆಕರ್ಷಕ ಮತ್ತು ವಿದ್ವತ್ಪೂರ್ಣವಾಗಿತ್ತು ಎಂಬದೂ ನಿರ್ವಿವಾದ ಮತ್ತು ಸರ್ವಸಮ್ಮತ ಅಭಿಪ್ರಾಯವಾಗಿತ್ತು. ಶ್ರೀನಿವಾಸಾಚಾರ್ಯರಿಗೂ ಮತ್ತೂ ನರಸಿಂಹಾಚಾರ್ಯರಿಗೂ ಯಾವ ತರಹದ ಬಂಧುತ್ವದ ಸಾಮೀಪ್ಯವಿರಲಿಲ್ಲ. ಕೇವಲ ವೈಷ್ಣವ ಬಾಂಧವ್ಯವೇ ಬಾಂಧವ್ಯ. ಇವರು ಸದಾಚಾರಿಗಳಾದ, ಅಸದೃಶರಾದ, ವಿದ್ವದ್ವರೇಣ್ಯರೆಂಬುದೇ ಆಶ್ರಮದ ಆಯ್ಕೆಗೆ ಮುಖ್ಯಕಾರಣವಾಗಿತ್ತು.

ಶ್ರೀಸತ್ಯೇಷ್ಟರು ಎರಡೂವರೆ ವರ್ಷಗಳ ಕಾಲ ಪೀಠಸ್ಥರಾಗಿದ್ದರು. ನಂತರ ಅವರಿಗೆ ದೇಹಾಯಾಸವಾಯಿತು. ಯಾರಿಗೆ ಆಶ್ರಮ ಕೊಡಬೇಕೆಂದು ಆಲೋಚನಾಪರರಾದಾಗ ನಾಲ್ಕು ಜನ ಪ್ರತಿಭಾವಂತ ವಿದ್ವಾಂಸರ ಹೆಸರುಗಳು ಗಣ್ಯವ್ಯಕ್ತಿಗಳಿಂದಲೂ ಬೇರೆ ಬೇರೆ ಕೋನಗಳಿಂದಲೂ ಸೂಚಿತವಾಗಿದ್ದವು.

(೧) ಕಂಚೀ ಸುಬ್ಬರಾಯರು, ನವರತ್ನ ಸತ್ಯಾಧಿರಾಜಾಚಾರ್ಯರಿಗೆ ಆಶ್ರಮ ಕೊಡುವದಾಗಿ ಸೂಚಿಸಿದರು.

(೨) ಶಾನಭೋಗಶಾಮಾಚಾರ್ಯರು, ಬ್ರಹ್ಮಾಂಡ ವಿಷ್ಣುಪಾದಾಚಾರ್ಯರಿಗೆ ಆಶ್ರಮ ಕೊಡಬೇಕೆಂದು ಸೂಚಿಸಿದರು.

(೩) ಪಾಚ್ಛಾಪುರದ ಆಚಾರ್ಯರು ಶ್ರೀ ಶ್ರೀಸತ್ಯಕಾಮತೀರ್ಥರ ಮನೆತನದವರು. ಶ್ರೀಸತ್ಯೇಷ್ಟರಿಂದ ಪುನಃ ಪೀಠವು ಪಾಚ್ಛಾಪುರದವರಿಗೇ ಹೋಗಬೇಕೆಂದು ಇನ್ನೊಬ್ಬರ ಆಗ್ರಹ.

(೪) ಶ್ರೀ ಶ್ರೀಸತ್ಯೇಷ್ಟರ ಅಂತಃಕರಣದಿಂದ ಸೂಚಿತವಾದ ಅಸದೃಶ ಪಂಡಿತರಾದ ವಾಯಿಶ್ರೀನಿವಾಸಚಾರ್ಯರು ನಾಲ್ಕನೆಯವರು.

ಇದೊಂದು ದೈವಿಕ ಚದುರಂಗ, ಇದರಲ್ಲಿ ಯಾರಿಗೆ ಮತ್ತು ಹೇಗೆ ಆಶ್ರಮ ದೊರೆಯಿತೆಂಬುದನ್ನು ವೀಕ್ಷಿಸುವಾ.

ನವರತ್ನ ಸತ್ಯಾಧಿರಾಜಾಚಾರ್ಯರು ಸ್ವಾಮಿಗಳ ದರ್ಶನಕ್ಕೆಂದು ಸಿದ್ಧರಾಗಿ ಹೊರಟಾಗ ಸರ್ಪವು ಅವರನ್ನು ಅಡ್ಡಗಟ್ಟಿತು. ಅವರ ಸಂಕಲ್ಪಕ್ಕೆ ಪ್ರಬಲ ವಿಘ್ನ ಸಂಭವಿಸಿದ್ದರಿಂದ ಅವರು ಮುಂದುವರಿಯಲು ಸಾಧ್ಯವಾಗಲೇ ಇಲ್ಲ.

ವಿಷ್ಣುಪಾದಾಚಾರ್ಯರಿಗೆ ಭಗವಂತನ ಆಜ್ಞೆ ಲಭಿಸದೇ ತಮ್ಮ ಪ್ರಸಕ್ತ ವಿಚಾರವನ್ನು ಅಲ್ಲಿಗೇ ಕೈ ಬಿಟ್ಟರು. ಈ ಪ್ರಸಂಗದ ಸ್ಪಷ್ಟೀಕರಣ ಅವರಿಗೇ ಗೊತ್ತು.

ಪಾಚಾಪುರದ ಅಚಾರ್ಯರ ಬಗ್ಗೆ ಬಂದ ಒತ್ತಡವು ನಿಜಾಮ ಸರ್ಕಾರದವರಿಂದ ತಡೆಯಲ್ಪಟ್ಟಿತು. ಯಾಕೆಂದರೆ ಶ್ರೀನಿವಾಸಾಚಾರ್ಯರಿಗೆ ನಿಜಾಮರ ವೈಯಕ್ತಿಕ ಮತ್ತು ಸರ್ಕಾರದ ಬೆಂಬಲವು ಪ್ರಭಲವಾಗಿತ್ತು. ಆದ್ದರಿಂದ ಅವರಿಗೂ ದೈವ ಬಲವಿಲ್ಲದ್ದರಿಂದ ಪೀಠವು ಒಲಿದು ಬರಲಿಲ್ಲ.

ಹೀಗೆ ಮೂರು ಜನ ವಿದ್ವಾಂಸರು ವ್ಯಾವೃತ್ತಿಯಾದ ಮೇಲೆ ಪರಿಶೇಷಾನುಮಾನದಿಂದ ಪೀಠವು ವಾಯಿ ಶ್ರೀನಿವಾಸಾಚಾರ್ಯರಿಗೇ ಕಾದಿರಿಸಲ್ಪಟ್ಟಂತಾಯಿತು. ಅಲ್ಲದೇ ಶ್ರೀ ಶ್ರೀಸತ್ಯೇಷ್ಟ ತೀರ್ಥರಿಗೆ ವೇದವ್ಯಾಸದೇವರು ವಾಯಿ ಶ್ರೀನಿವಾಸಾಚಾರ್ಯರಿಗೆ ಆಶ್ರಮವನ್ನು ಕೊಡಲು ಅಪ್ಪಣೆ ಮಾಡಿದ ಸ್ವಪ್ನವಾಯಿತಂತೆ. ಶ್ರೀ ಶ್ರೀಸತ್ಯೇಷ್ಟರ ಇಚ್ಛೆಗೂ ಇದು ಪೂರಕವಾಗಿ ಬಲ ಕೊಟ್ಟಿತು. ಅವರಿಗೆ ಅತ್ಯಂತ ಹರ್ಷವಾಯಿತು. ಆ ಪ್ರಕಾರ ಶ್ರೀನಿವಾಸಾಚಾರ್ಯರನ್ನು ಶೀಘ್ರವಾಗಿ ಕರೆಕಳಿಸಿದರು.

ದೈವೀ ಸಂಕಲ್ಪದಂತೆ ವಾಯಿ ಶ್ರೀನಿವಾಸಾಚಾರ್ಯರಿಗೆ ಅಂಗೀರಸ ಸಂವತ್ಸರ ಭಾದ್ರಪದಶುದ್ಧ ದಶಮಿಯ ದಿನ ಪಟ್ಟಾಭಿಷೇಕವನ್ನು ಮಾಡಿ ಪ್ರಣವಾದಿ ಮಹಾಮಂತ್ರಗಳನ್ನುಪದೇಶಮಾಡಿ ಶ್ರೀಸತ್ಯಪರಾಕ್ರಮತೀರ್ಥರೆಂಬ ನಾಮಕರಣವನ್ನು ಮಾಡಿ ಸಂಸ್ಥಾನವನ್ನು ಒಪ್ಪಿಸಿದರು.

ಶ್ರೀ ಶ್ರೀಸತ್ಯೇಷ್ಟರಿಂದ ದತ್ತವಾದ ನಾಮಧೇಯವು ಒಂದು ಸಾಂಕೇತಿಕ ಪೀಠಸ್ಥಯತಿಗಳ ನಾಮಧೇಯವಾಗಿರಲಿಲ್ಲ. ಆಶ್ರಮ ಪೂರ್ವದಲ್ಲಿಯೇ ಇವರು ತಮ್ಮ ನಿಜ ಬುದ್ಧಿವಿದ್ಯಾದಿ ಬಲಗಳಿಂದ ವಿದ್ವತ್ಸಭೆಗಳಲ್ಲಿ ಪರವಾದಿಗಳನ್ನು ಸೋಲಿಸಿ ಸ್ವಪರಾಕ್ರಮವನ್ನು ತೋರಿಸಿ ಆ ಹೆಸರನ್ನು ಗಳಿಸಿಕೊಂಡಿದ್ದರು. ಆಶ್ರಮ ಸಮಯದಲ್ಲಿ ಶ್ರೀಸತ್ಯಪರಾಕ್ರಮ ತೀರ್ಥರೆಂಬ ನಾಮಧೇಯವು ಇವರಿಗೆ ಪರಮಸೂಕ್ತವೂ ಅನ್ವರ್ಥಕವೂ ಆಯಿತು. ಆ ನಾಮಧೇಯದಲ್ಲಿ ಉತ್ಪ್ರೇಕ್ಷೆ ಕಂಡು ಬರುವುದಿಲ್ಲ. ಯಾಕಂದರೆ ಆಶ್ರಮ ಪೂರ್ವದ

ಇವರ ಚರಿತ್ರೆಯನ್ನು ಒಂದು ಸಲ ನೋಡಿದರೆ ಇವರ ವಿದ್ಯಾರ್ಜನೆಯ ಕ್ರಮದಲ್ಲಿ, ಪಾಠಪ್ರವಚನದಲ್ಲಿ, ವಿದ್ವತ್ಸಭೆಗಳಲ್ಲಿ ರಾಜರ ಸಂದರ್ಶನದಲ್ಲಿ ಇವರ ಅಸಾಧಾರಣ ಪ್ರತಿಭೆ ಅಭಿವ್ಯಕ್ತವಾಗಿಯೇ ಇದೆ. ಇದೆಲ್ಲವೂ ದೈವೀ ಬಲದಿಂದ ಪ್ರಾಪ್ತವಾದ ಬಲವೆನ್ನಿರಿ ಅಥವಾ ಕೀರ್ತಿ ಎನ್ನಿರಿ ಅಥವಾ ಪ್ರತಿಭೆ ಎನ್ನಿರಿ ಇಲ್ಲವೇ ಪರಾಕ್ರಮವೆನ್ನಿರಿ, ಹೇಗಾದರೂ ಸರಿ, ಇವರಿಗೆ ಗುರೂಕ್ತ ಶ್ರೀಸತ್ಯಪರಾಕ್ರಮರೆಂಬ ನಾಮಧೇಯವು ಅತೀವ ಸಮಂಜಸವಾಗಿದೆ ಎಂದು ಹೇಳಬಹುದು. ಆಶ್ರಮ ಪೂರ್ವದಲ್ಲಿ ಗಳಿಸಿದ ಪರಾಕ್ರಮ ಸಂಜ್ಞಕ ನಾಮಧೇಯವನ್ನು ಆಶ್ರಮ ಸಮಯದಲ್ಲಿ ಗುರುಮುಖೇನ ಪಡೆದು ನಂತರ ಉಳಿಸಿಕೊಂಡರು.

ನಂತರ ಮರು ದಿನ ಶ್ರೀಸತ್ಯೇಷ್ಟರು ನಾರಾಯಣಧ್ಯಾನ ಪರರಾಗಿ ಬೃಂದಾವನಸ್ಥರಾದರು. ಶ್ರೀಸತ್ಯಪರಾಕ್ರಮ ತೀರ್ಥರು ತಮ್ಮ ಗುರುಗಳ ಬೃಂದಾವನ ಪ್ರವೇಶ ಮಹೋತ್ಸವವನ್ನು ಶ್ರೀಸಂಸ್ಥಾನ ಪದ್ಧತಿಯಂತೆ ವೈಭವದಿಂದಲೂ ಭಕ್ತಿಯಿಂದಲೂ ನೆರವೇರಿಸಿದರು. ಅನ್ನದಾನಕ್ಕೆ ಪ್ರಸಿದ್ಧವಾದ ಉತ್ತರಾದಿಮಠದ ಬಿರುದಾವಳಿಗನುಗುಣವಾಗಿ ಬೃಹತ್ಪ್ರಮಾಣದಲ್ಲಿ ಅನ್ನ ಸಂತರ್ಪಣೆ ದಾನ ಧರ್ಮಗಳನ್ನು ಮಾಡಿದರು. ಶ್ರೀಸತ್ಯೇಷ್ಟರ ಬೃಂದಾವನವು ಆತ್ಕೂರಿನಲ್ಲಿ ಇಂದಿಗೂ ವಿರಾಜಮಾನವಾಗಿದೆ.

## ಶ್ರೀ ೧೦೦೮ ಶ್ರೀಸತ್ಯಪರಾಕ್ರಮತೀರ್ಥರ ದಿಗ್ವಿಜಯ ಸಂಚಾರ

**ರಾಯಚೂರು :**

ಗುರುಗಳಾದ ಶ್ರೀಸತ್ಯೇಷ್ಟರ ಬೃಂದಾವನ ಪ್ರವೇಶ ಮಹೋತ್ಸವ ಸಂಪೂರ್ಣವಾದ ಮೇಲೆ ನೂತನ ಶ್ರೀಪಾದಂಗಳವರು ರಾಯಚೂರು

ಪ್ರಾಂತಕ್ಕೆ ದಿಗ್ವಿಜಯಾರ್ಥ ತೆರಳಿದರು. ಅಲ್ಲಿಯ ಶಿಷ್ಯರು ಶ್ರೀಗಳವರನು ಮಹಾಸಂಭ್ರಮದಿಂದಲೂ ವಿಜೃಂಭಣೆಯಿಂದಲೂ ಸ್ವಾಗತಿಸಿದರು. ರಾಯಚೂರು ನಗರದಲ್ಲಿ ಇದ್ದಷ್ಟು ದಿನ ಶ್ರೀಗಳವರ ನಿತ್ಯ ಪಾಠಪ್ರವಚನ ಗಳು ಆಸ್ತಿಕ ಮಹಾಜನರಿಗೆ ಕರ್ಣಾನಂದವನ್ನುಂಟುಮಾಡಿದವು. ಲೌಕಿಕ ಮತ್ತು ಪಾರಮಾರ್ಥಿಕ ಕ್ಷೇತ್ರಗಳಲ್ಲಿ ಶ್ರೀಗಳವರ ನೈಪುಣ್ಯತೆಯನ್ನು ನೋಡಿ ಭಕ್ತಾದಿಗಳು ಪರಮಾಶ್ಚರ್ಯ ಮತ್ತು ಆನಂದಭರಿತರಾದರು. ಸಂಸ್ಥಾನದ ವಾಸಾಂತ್ಯ ಸಮಯದಲ್ಲಿ ಅಭಿಮಾನಿಗಳು ಮತ್ತು ಭಕ್ತಾದಿಗಳು ಶ್ರೀಗಳ ವರನ್ನು ಗೌರವದಿಂದ ಬೀಳ್ಕೊಟ್ಟರು. ಸಂಚಾರ ಕ್ರಮದಂತೆ ಸಂಸ್ಥಾನವು ಧಾರವಾಡ ಪ್ರಾಂತಕ್ಕೆ ಪ್ರಯಾಣ ಬೆಳೆಸಿತು.

**ಧಾರವಾಡ :**

ಧಾರವಾಡಕ್ಕೆ ದಿಗ್ವಿಜಯ ಮಾಡಿದಾಗ ಶ್ರೀಗಳವರಿಗೆ ಸ್ವಶಿಷ್ಯರಿಂದ ಅದ್ಭುತ ಸ್ವಾಗತ, ಆತಿಥ್ಯಮತ್ತು ಸನ್ಮಾನಗಳು ದೊರಕಿದವು. ಇದೇ ಕಾಲ ದಲ್ಲಿ ಪರವಾದಿಗಳೂ ಸಹ ಇಂಥ ಸಮಯಕ್ಕಾಗಿ ಕಾದು ಕುಳಿತಿದ್ದರು. ಶ್ರೀಗಳವರು ಸಹ ಅಂಥಮತ್ತರಾದ ವಾದಿಗಳು ಬರಲೆಂದೇ ಅಭಿಲಷಿಸುತ್ತಿದ್ದರು ಶ್ರೀಗಳವರು ಮತ್ತಗಜಗಳಿಗೆ ಸಿಂಹಪ್ರಾಯ. ಅಂಥವಾದಿಗಳ ಸದ್ದಡಗಿದರೇನೇ ಮತಕ್ಕೆ ಕೀರ್ತಿ. ಧಾರವಾಡದಲ್ಲಿ ಅನೇಕ ಪರವಾದಿ ಪಂಡಿತರು ವಾದರಂಗ ಕ್ಕಿಳಿದರು. ಆದರೆ ಅವರಿಗೆ ಬಹುಕಾಲ ಎದುರು ನಿಲ್ಲಲು ಶಕ್ತಿಸಾಲದಾಯಿತು. "ಪ್ರಬರ್ಹಮಲ್ಲಭಂಗ" ನ್ಯಾಯದಂತೆ ಒಬ್ಬಿಬ್ಬರು ಘನಪಂಡಿತರು ನಿರುತ್ತರ ರಾದ ಮೇಲೆ ಉಳಿದವರು ಧೈರ್ಯಭಂಗ ಹೊಂದಿ ಆ ವಾದ ಮಾಡತಕ್ಕ ಹವ್ಯಾಸವನ್ನೇ ಬಿಟ್ಟು ಬಿಟ್ಟರು.

ಶ್ರೀಪಾದಂಗಳವರ ಪೂರ್ವಾಶ್ರಮದ ತಮ್ಮಂದಿರಾದ ವಾಯಿ ವಾಸು ದೇವಾಚಾರ್ಯರು ನ್ಯಾಯವೇದಾಂತ ಶಾಸ್ತ್ರಗಳಲ್ಲಿ ಘನಪಂಡಿತರಾಗಿದ್ದರು. ಇವರಿಂದಲೇ ಬಹುಭಾಗ ವಾದಕಾರ್ಯವು ನಿರ್ವಹಿಸಲ್ಪಡುತ್ತಿತ್ತು. ಇವರಿಗೆ ಮೀರಿದಾಗ ಸಂಸ್ಥಾನದ ಗೌರವಕ್ಕೆ ಧಕ್ಕೆ ಬರುವ ಸಂದರ್ಭ ಬಂದಾಗ ಶ್ರೀಗಳ ವರು ಸ್ವತಃ ವಾದರಂಗಕ್ಕೆ ಪ್ರವೇಶಮಾಡಿ ಜಯಶೀಲರಾಗುತ್ತಿದ್ದರು. ಇವರ

ಪ್ರಬಲ ಪ್ರತಿಭೆಯ ಮುಂದೆ ಉಳಿದವರೆಲ್ಲ (ಖದ್ಯೋತ) ಮಿಣುಕು ಹುಳದ ಪ್ರತಿಭೆಯ ಸಮಾನರಿದ್ದರು.

ಶ್ರೀಗಳವರು ಪಾಠಪ್ರವಚನಗಳಲ್ಲಿ ಮತ್ತು ವಾದರಂಗದಲ್ಲಿ ಅತ್ಯಂತ ಧೈರ್ಯಶಾಲಿಗಳು, ಸಮರ್ಥರು ಮತ್ತು ದಕ್ಷರು. ಬಾಲ್ಯದಿಂದಲೇ ಪಾಠ ಪ್ರವಚನ ಪರವಾದಿಗಳ ನಿಗ್ರಹವನ್ನು ಧ್ಯೇಯವಾಗಿಟ್ಟುಕೊಂಡ ಶ್ರೀಗಳವರು, ಮೊದಲು ಶ್ರೇಷ್ಠ ವಿದ್ವಾಂಸರಾಗಿ ಪಾಠಪ್ರವಚನ ಶೀಲರಾಗಿದ್ದರೆ, ನಂತರ ಪೀಠಸ್ಥರಾಗಿ ಅದೇ ಕೆಲಸವನ್ನು ಅಧಿಕ ಉತ್ಸಾಹದಿಂದ ಮಾಡುತ್ತಿದ್ದರು. ಆಗ ಅವರಲ್ಲಿ ವಿಶೇಷ ಅಧಿಕಾರವಾಣಿ ಇತ್ತು.

ಆಗಿನ ದಿನಗಳಲ್ಲಿ ಇವರಿಗೆ ಪ್ರಧಾನ ಶಿಷ್ಯರೆಂದರೆ ಕೊರ್ಲಹಳ್ಳಿ ಬೋಧ ರಾಯಾಚಾರ್ಯರು, ಕನಕಬಂಡಿಕೃಷ್ಣಾಚಾರ್ಯರು, ಹಾನಗಲ್ ಭೀಮಾ ಚಾರ್ಯರು, ಶ್ರೀಗಳವರ ಪೂರ್ವಾಶ್ರಮದ ಮಕ್ಕಳಾದ ಭೀಮಬಾಳಾ ಚಾರ್ಯರು, ವಿಠೋಬಾಚಾರ್ಯರು, ಕೃಷ್ಣಾಚಾರ್ಯರು ಆದಿಯಾಗಿ ಇನ್ನೂ ಅನೇಕರು ನ್ಯಾಯ, ವೇದಾಂತ, ಮೀಮಾಂಸಾ, ವ್ಯಾಕರಣ ಚತುಶ್ಯಾಸ್ತ್ರಗಳನ್ನು ಓದುತ್ತಿದ್ದರು. ಇದು ನಿತ್ಯ ನಿರಂತರ ಕಾರ್ಯಕ್ರಮ.

ಪಾಠಗಳಿಗಾದರೂ ಅನಧ್ಯಯನ ತಿಥಿಗಳಿರುವದರಿಂದ ವಿರಾಮಸಾಧ್ಯ. ಆದರೆ ಪ್ರವಚನಗಳಿಗೆ ಮಾತ್ರ ವಿರಾಮವೇ ಇರುತ್ತಿರಲಿಲ್ಲ. ಶಾಸ್ತ್ರ ಸಮ್ಮತ ವಿಚಾರ ಪೂರಿತ/ಪ್ರಚೋದಿತ, ಸ್ಫೂರ್ತಿದಾಯಕ ಉಪನ್ಯಾಸಭಾರತಿ ಇವರದು. ಇವರ ಪ್ರವಚನಗಳನ್ನು ಶ್ರವಣ ಮಾಡಿದವರು ಶಾಸ್ತ್ರಾನಂದವನ್ನ ನುಭವಿಸುವರಲ್ಲದೇ ಪ್ರಭಾವಿತರೂ ಆಗುತ್ತಿದ್ದರು.

ಜ್ಞಾನ ಕಾರ್ಯಗಳಿಗಾಗಿಯೇ ಪರಮಾವಧಿಕಾಲವನ್ನು ಮೀಸಲಾಗಿ ಡಲು ನಿರ್ಧರಿಸಿದ ಶ್ರೀಪಾದಂಗಳವರು ಆ ಕಾರ್ಯಕ್ಕೆ ಯಾವ ವಿಘ್ನಗಳು ಬರಬಾರದೆಂದೂ, ಮತ್ತು ಲೋಕವ್ಯವಹಾರಗಳಿಗೆ ಅಲೆದಾಟದಲ್ಲಿಯೇ ಕಾಲ ಹರಣವಾಗಬಾರದೆಂಬ ಉದ್ದೇಶ್ಯದಿಂದಲೂ ಶಾನುಭೋಗ ಶಾಮಾಚಾರ್ಯರಿಗೆ ವಿವಿಧ ಪ್ರದೇಶದಲ್ಲಿ ಹೊಲಗಳಿಂದ ಬರುವ ಉತ್ಪನ್ನವನ್ನು ರೂ. 35000/= ಗಳಿಗೆ ಗುತ್ತಿಗೆ ಕೊಟ್ಟಿದ್ದರು. ಹೀಗಾಗಿ ಶ್ರೀಗಳವರ ದೈನಂದಿನ ದಿನಚರಿಯತ್ತ

ನೋಡಿದರೆ ಯಾರಿಗಾದರೂ ಸುಮಧ್ವವಿಜಯದ ಒಂದು ವಾಕ್ಯವು ಜ್ಞಾಪಕಕ್ಕೆ ಬರದೇ ಇರಲಾರರು. "ವೇದಾಂತಂ ಸ್ವಯಮಿವಬಂಧ ಮೋಕ್ಷ ಮೂಲಂ ವ್ಯಾಚಷ್ಟಸ್ಫುಟಮ್...."

**ಹೈದರಾಬಾದ್-ಸಿಕಂದರಾಬಾದ್ :**

ಧಾರವಾಡದಿಂದ ಸಂಸ್ಥಾನವು ಅಲ್ಲಲ್ಲಿ ಸಂಚಾರಮಾಡಿ ಹೈದರಾಬಾದ ನಗರಕ್ಕೆ ಪ್ರಾಪ್ತವಾಯಿತು. ಅಲ್ಲಿ ಸಂಸ್ಥಾನವು ಭಕ್ತಾದಿಗಳ ಪ್ರಾರ್ಥನೆಗಳನ್ನು ಮನ್ನಿಸಿ ಆರು ತಿಂಗಳ ಕಾಲ ವಾಸವಾಗಿದ್ದಿತು. ಪೂರ್ವದಲ್ಲಿ ದಿಗ್ದಂತಿ ಪಂಡಿತ ಮಾಯಿ ಶ್ರೀನಿವಾಸಾಚಾರ್ಯರಾಗಿ ಪಾಠಪ್ರಚನಗಳಲ್ಲಿ ಭವ್ಯಕಾಲ ಕಳೆದರೆ ಪುನಃ ನಗರವನ್ನು ಪ್ರವೇಶಿಸುವ ಸಮಯದಲ್ಲಿ ಶ್ರೀಮನ್ಮಧ್ವಾಚಾರ್ಯರ ಮೂಲ ಸಂಸ್ಥಾನ ಉತ್ತರಾದಿಮಠದ ಜ್ಞಾನ ಪೀಠದಲ್ಲಿ ಶ್ರೀಸತ್ಯಪರಾಕ್ರಮ ರಾಗಿ ವಿರಾಜಮಾನರಾಗಿದ್ದರು. ಮೊದಲು ಗ್ರಹಸ್ಥಾಶ್ರಮಿಗಳಾಗಿ ಶಿಷ್ಯ ಸಮುದಾಯ ಜಹಗೀರಿಗಳನ್ನು ಪಡೆದರೆ ಪುನಃ ಅದೇ ನಗರದಲ್ಲಿ ಯತಿವರೇಣ್ಯ ರಾಗಿ ಶಿಷ್ಯವೃಂದವನ್ನು ಮಠಕ್ಕೆ ಜಹಗೀರಿಗಳನ್ನೂ ಸಂಪಾದಿಸಿದರು.

ರಾಜಾಶಿವರಾಜಬಹದ್ದೂರ ಇತ್ಯಾದಿ ಅನೇಕ ರಾಜಕೀಯ ಧುರೀಣರು ಶ್ರೀನಿವಾಸಾಚಾರ್ಯರ ಶಿಷ್ಯರಾಗಿ ಜ್ಞಾನ ಸಂಪಾದಿಸಿದ್ದು ಒಂದುಕಾಲವಾದರೆ ಪುನಃ ಅದೇ ಮತ್ತು ಅದರ ಜೊತೆಗೆ ನೂತನ ಬೃಹತ್ ಶಿಷ್ಯವೃಂದವು ಶ್ರೀಸತ್ಯಪರಾಕ್ರಮರಲ್ಲಿ ಶಾಂತಿಪಾಠಹಾಕಿ ಪುನರಧ್ಯಯನ ಪ್ರಾರಂಭಮಾಡಿ ದರು. ಆಧ್ಯಾತ್ಮ ವಿದ್ಯೆ ಮುಗಿಯುವದೇ ಅಲ್ಲ. ಆಶ್ರಮವಾಗಿ ಗುರುಗಳಿಗೆ ಘನತೆ ಗೌರವ ಹೆಚ್ಚಾದರೆ, ಶಿಷ್ಯರೂ ಸಹ ಶ್ರೀಪಾದಂಗಳವರ ಶಿಷ್ಯರಾಗಿ ಗೌರವ ಮಾನ್ಯತೆಗಳನ್ನು ಪಡೆದರು. ಜ್ಞಾನ ಸಂಪಾದನೆಯ ಉತ್ಕಟ ಇಚ್ಛೆಯೊಂದಿದ್ದರೆ ಸಾಕು ಪೂರ್ಣಾಯುಸ್ಸು ವಿದ್ಯಾರ್ಜನೆಯಲ್ಲಿಯೇ ಕಾಲ ಕಳೆಯಬಹುದು. ಇದ್ದದ್ದನ್ನು ಪರರಿಗೆ ಕೊಡುವದು ಇಲ್ಲದ್ದನ್ನು ಸಂಪಾದಿಸು ವದು ಇದು ಏಕವ್ಯಕ್ತಿಯಲ್ಲಿದ್ದ ಗುರುತ್ವ ಮತ್ತು ಶಿಷ್ಯತ್ವ. ಎಷ್ಟು ವ್ಯಾಸಂಗ ಮಾಡಿದರೂ ಇನ್ನೂ ಮಾಡಬೇಕಾದ ಅಪಾರ ವಿದ್ಯೆಯು ಹಾಗೆಯೇ ಉಳಿಯುತ್ತದೆ.

ಈ ಸಮಯದಲ್ಲಿ ಭರದ್ವಾಜ ಋಷಿಗಳ ಉದಾಹರಣೆಯನ್ನು ಜ್ಞಾಪಿಸಿಕೊಳ್ಳಬಹುದು.* ಸಮಗ್ರವೇದಾಧ್ಯಯನವನ್ನು ಮಾಡಬೇಕೆಂಬುದು ಅವರ ಆಶೆ. ಆಯುಸ್ಸಿನ ಕೊನೆ ಸಮೀಪಿಸಿದ್ದನ್ನು ನೋಡಿ ದೀರ್ಘಾಯುಷ್ಯವನ್ನು ಪಡೆದು ಕೊಳ್ಳುವದಕ್ಕೋಸ್ಕರ ತಪಸ್ಸನ್ನಾಚರಿಸಿದರು. ತಪಸ್ಸಿಗೆ ಮೆಚ್ಚಿ ದೇವೇಂದ್ರನು ಬಂದನು. ಭರದ್ವಾಜರು "ವೇದ ಓದುವದು ಮುಗಿಯಲಿಲ್ಲ. ಅದನ್ನು ಇನ್ನೂ ಅಧ್ಯಯನ ಮುಂದುವರಿಸಲು ಇನ್ನೂ ಒಂದು ನೂರು ವರ್ಷ ಆಯುಸ್ಸುಬೇಕು" ಎಂದು ಕೇಳಿಕೊಂಡರು. ಇಂದ್ರನು ತಥಾಸ್ತು ಎಂದನು. ಆಯುಷ್ಯವು ನೂರುವರ್ಷ ಹೆಚ್ಚಾಯಿತು. ಭರದ್ವಾಜರು ಸಂತೋಷದಿಂದ ಪುನಃ ಗುರುಕುಲ ವಾಸಿಗಳಾಗಿ ಅಧ್ಯಯನವನ್ನುಪಕ್ರಮಿಸಿದರು. ನೂರು

---

* ॥ ಹರಿಃ ಓಂ ॥

### ತೈತ್ತಿರೀಯ ಬ್ರಾಹ್ಮಣ ತೃತೀಯಾಷ್ಟಕ ಏಕಾದಶಪ್ರಪಾಠಕ.

ಭರದ್ವಾಜೋ ಹ ತ್ರಿಭಿರಾಯುರ್ಭಿಃ ಬ್ರಹ್ಮಚರ್ಯಮುವಾಸ ।
ತಗ್ಂ ಹ ಜೀರ್ಣಿಗ್ಂ ಸ್ಥವಿರಗಂ ಶಯಾನಂ । ಇಂದ್ರ ಉಪವ್ರಜ್ಯೋವಾಚ ।
ಭರದ್ವಾಜ । ಯತ್ತೇಚತುರ್ಥಮಾಯುರ್ದದ್ಯಾಂ । ಕಿಮನೇನ ಕುರ್ಯಾ ಇತಿ ।
ಬ್ರಹ್ಮಚರ್ಯಮೇವೈನೇನ ಚರೆಯಮಿತಿ ಹೋವಾಚ ॥ ೪೫ ॥

ತಗ್ಂ ತ್ರೀನ್ ಗಿರಿರೂಪಾನವಿಜ್ಞಾತಾನಿವ ದರ್ಶಯಾಂಚಕಾರ ।
ತೇಷಾಗ್ಂ ಹೈಕೈಕಸ್ಮಾನ್ ಮುಷ್ಟಿನಾಽಽದದೆ । ಸ ಹೋವಾಚ ।
ಭರದ್ವಾಜೇತ್ಯಾಮಂತ್ರ್ಯ । ವೇದಾವಾ ಏತೇ । ಅನಂತಾ ವೈ ವೇದಾಃ ।
ಏತದ್ವಾ ಏತೈಸ್ತ್ರಿಭಿರಾಯುರ್ಭಿರನ್ವವೋಚಥಾಃ ।
ಅಥತ ಇತರದನನ್ಕ್ತಮೇವ । ಏಹೀಮಂ ವಿದ್ಧಿ । ಅಯಂವೈಸರ್ವವಿದ್ಯೇತಿ॥ ೪೬॥

ತಸ್ಮೈ ಹೈತಮಗ್ನಿಗ್ಂ ಸಾವಿತ್ರಮುವಾಚ । ತಗ್ಂ ಹ ವಿದಿತ್ವಾಅಮೃತೋ-
ಭೂತ್ವಾ । ಸ್ವರ್ಗಂ ಲೋಕಮಿಯಾಯ । ಆದಿತ್ಯಸ್ಯ ಸಾಯುಜ್ಯಂ ।
ಅಮೃತೋ ಹೈವ ಭೂತ್ವಾ । ಸ್ವರ್ಗಂ ಲೋಕಮೇತಿ । ಆದಿತ್ಯಸ್ಯ ಸಾಯುಜ್ಯಂ ।
ಯ ಏವಂ ವೇದ । ಏಷೋ ಏವ ತ್ರಯೀ ವಿದ್ಯಾ ॥ ೪೭ ॥

ಯಾವಂತಗಂ ಹ ವೈ ತ್ರೈಯಾವಿದ್ಯಯಾ ಲೋಕಂ ಜಯತಿ ।
ತಾವಂತಂ ಲೋಕಂ ಜಯತಿ । ಯ ಏವಂ ವೇದ ॥ —ಇತಿ

ವರ್ಷಗಳ ಅಂತ್ಯದಲ್ಲಿ ಬಹಳ ಅಧ್ಯಯನ ಭಾಗ ಉಳಿದದ್ದುನ್ನು ಕಂಡ ಭರದ್ವಾಜರು ಪುನಃ ತಪಸ್ಸನ್ನಾಚರಿಸಿ ಪುನಃ ನೂರು ವರ್ಷ ಆಯುಷ್ಯ **(extension of age)** ಪಡೆದರು. ಹೀಗೆ ಮೂರುಸಲ ಮಾಡಿದರೂ ಅಧ್ಯಯನ ಮುಗಿಯದಾಯಿತು.

ನಾಲ್ಕನೆಯಸಲ ತಪಸ್ಸಾಚರಿಸಿದಾಗ ದೇವೇಂದ್ರನು ಪುನಃ ಬಂದನು. ಭರದ್ವಾಜರ ಸಮಸ್ಯೆ ತಿಳಿದನು. ತೀವ್ರ ತಪಸ್ಸನ್ನಾಚರಿಸಿ ಅವರು ಬಹಳ ದುರ್ಬಲರಾಗಿದ್ದರು. ದೇವೇಂದ್ರನು ಹೇಳಿದ "ಋಷಿವರ್ಯರೇ 'ಅನಂತಾವಹಿ ವೇದಾಃ' ಇಂಥ ನೂರು ವರ್ಷಗಳ ವೃದ್ಧಿಯನ್ನು ನಾನೇಷ್ಟುಸಲ ಕೊಟ್ಟರೂ ವೇದಾಧ್ಯಯನ ಮುಗಿಯಲಾರದು. ಈ ಮೂರು ಬೃಹದಾಕಾರದ ಪರ್ವತಗಳನ್ನು ನೋಡಿರಿ. ಇನ್ನೂ ಅಷ್ಟು ಉಳಿದಿದೆ ಅಧ್ಯಯನ ಮಾಡತಕ್ಕದ್ದು. ಆದ್ದರಿಂದ ತಮಗೆ ಸಕಲವೇದಗಳ ಸಾರಭೂತವಾದ 'ಸಾವಿತ್ರ' ವಿದ್ಯೆಯನ್ನು ಉಪದೇಶಮಾಡುವೆನು. ಅದನ್ನು ತಿಳಿದರೆ ಸಕಲವೇದಗಳ ಅಧ್ಯಯನಫಲ ದೊರೆಯುವದು" ಎಂದು ಹೇಳಿಹಾಗೇ ಮಾಡಿದನು.

ಹೀಗಿದೆ ನಮ್ಮ ಸ್ಥಿತಿಯೂ ಕೂಡ. ಜೀವನಾವಧಿಯಲ್ಲಿ ಕೆಲವು ಶಾಸ್ತ್ರಗಳ ಕಿಂಚಿತ್ ಅಧ್ಯಯನವಾದರೆ ಇನ್ನು ಕೆಲವು ಹಾಗೆಯೇ ಉಳಿಯುತ್ತವೆ. ಮುಗಿಯುವದಲ್ಲ. ಆದ್ದರಿಂದಲೇ ನಮ್ಮ ಹಾರೈಕೆ "ಆಚಾರ್ಯಾಃ ಶ್ರೀಮದಾಚಾರ್ಯಾ ಸಂತುಮೇ ಜನ್ಮ ಜನ್ಮನಿ" ಶ್ರೀಮದಾಚಾರ್ಯರೇ ನಮಗೆ ಪ್ರತಿಜನ್ಮದಲ್ಲಿ ಪರಮಗುರುಗಳಾಗಿರಲಿ. ಅವರ ಶಾಸ್ತ್ರವನ್ನೇ ನಾವು ಓಮವಂತಾಗಲಿ, ಎಂಬ ಸದಿಚ್ಛೆ ಮತ್ತು ಸದ್ಭಾವನೆ. ಸಾರ-ವಿಸ್ತಾರಗಳು ನಮಗೆ ಅವರಿಂದಲೇ ಬೋಧಿತವಾಗಬೇಕು.

ರಾಜಾಶಿವರಾಜಬಹದ್ದೂರ್, ಕಾರವಾನ ಶ್ರೀನಿವಾಸರಾವ್ ಇತ್ಯಾದಿ ಉನ್ನತಾಧಿಕಾರಿಗಳು ಶ್ರೀಗಳವರಲ್ಲಿ ಇತೋಪ್ಯತಿಶಯ ಭಕ್ತಿ ವಿಶ್ವಾಸಗಳನ್ನು ತೋರಿ ಪರಮಾನುಗ್ರಹಕ್ಕೆ ಪಾತ್ರರಾದರು. ಶ್ರೀಗಳವರ ಕಾರ್ಯಕ್ರಮಗಳು ಅತ್ಯಂತ ವೈಭವ ಯುಕ್ತವಾಗಿ ನಡೆಯುತ್ತಿದ್ದವು. ಪ್ರಮುಖ ಶಿಷ್ಯರೂ ರಾಜಕಾರಣೀಗಳೂ ಆದ ರಾಜಾಶಿವರಾಜಬಹದ್ದೂರ್ ಕಾರವಾನ್ ಶ್ರೀನಿವಾಸರಾವ್ ಇವರುಗಳ ಮುಖಾಂತರ ಸರ್ ಸಾಲಾರಜಂಗ ನವಾಬರಿಂದ ಸಾರೀ

ಕುಂಬಾರಿ ಗ್ರಾಮದ ಇನಾಮನ್ನು ಶ್ರೀಮಠಕ್ಕೆ ಪುನಃ ಪಡೆದರು. ಅದೇಕಾಲದಲ್ಲಿ ಶಾಲಿಬಂಡಾದಲ್ಲಿ ಇವರ ಅಮೃತ ಹಸ್ತದಿಂದಲೇ ಪ್ರಾಣದೇವರ ಪ್ರತಿಷ್ಠೆ ಮಹೋತ್ಸವವು ನೆರವೇರಿತು.

ಹೈದರಾಬಾದಿನಿಂದ ಸಂಸ್ಥಾನವು ಸಿಕಂದರಾಬಾದಿಗೆ ತೆರಳಿತು. ಅಲ್ಲಿ ಬಂಡೇಲಿ ಶ್ರೀನಿವಾಸರಾವ್ ಇತ್ಯಾದಿ ಪ್ರಧಾನ ಶಿಷ್ಯರು ಶ್ರೀಗಳವರನ್ನು ಆದರ ಸತ್ಕಾರಗಳಿಂದ ಸ್ವಾಗತಿಸಿ ಭಕ್ತಿವಿಶ್ವಾಸಗಳಿಂದ ಆತಿಥ್ಯವನ್ನು ಮಾಡಿ ಧನ್ಯತೆ ಪಡೆದರು.

ಸಂಸ್ಥಾನವು ಮುಂದೆ ಸಾಗುತ್ತಿರುವಾಗ ದಾರಿಯಲ್ಲಿ ಗುಲ್ಬರ್ಗಾದಲ್ಲಿಯೂ ಕೆಲದಿನ ಬೀಡಾರ ಮಾಡಿತು. ಶ್ರೀಗಳವರ ಪ್ರತಿಭೆಗೆ ಭಾಗದ ಜನರೇ ಇರಲಿಲ್ಲ. ಅಲ್ಲಿ ದೇಶಮುಖ ಮುಂತಾದ ಅನೇಕ ಸ್ಮಾರ್ತ ಸಂಪ್ರದಾಯಸ್ಥರು ತಪ್ತಮುದ್ರಾಧಾರಣಾದಿಗಳನ್ನು ಮಂತ್ರಾದಿಗಳನ್ನು ಶ್ರೀಗಳವರಿಂದ ಸ್ವೀಕರಿಸಿ ಸದ್ವೈಷ್ಣವದೀಕ್ಷೆಯನ್ನು ಪಡೆದು ಪ್ರವಚಾನಾದಿಗಳನ್ನು ಕೇಳಿಧನ್ಯರಾದರು. ಅಲ್ಲಿರುವಾಗಲೇ ಶ್ರೀದೇಶಮುಖರ ಮನೆಯ ಮುಂದೆ ಶ್ರೀಪ್ರಾಣದೇವರ ಪ್ರತಿಷ್ಠೆಯನ್ನು ಮಾಡಿಸಿದರು. ಅಲ್ಲಿಂದ ಶ್ರೀ ಮಠವು ಮುಂದೆ ಪ್ರವಾಸಬೆಳೆಸಿತು.

## ಪೂನಾ ಪಟ್ಟಣ ;

ಉತ್ತರಾದಿ ಮಠದ ಶ್ರೀಸಂಸ್ಥಾನವು ಹೈದರಾಬಾದ ಪ್ರಾಂತ, ಮುಂಬೈ ಕರ್ನಾಟಕ, ಮಹಾರಾಷ್ಟ್ರದ ಕೆಲವು ಸ್ಥಳಗಳಲ್ಲಿ ಸಂಚಾರ ಮಾಡುತ್ತ ಆಸ್ತಿಕ ಮಹಾಶಯರಿಗೂ ಭಕ್ತಾದಿಗಳಿಗೂ ಅನುಗ್ರಹ ಮಾಡುತ್ತ ಕೆಲವರ್ಷಗಳ ಮೇಲೆ ಅಂದರೆ ಧಾತು ಈಶ್ವರ ಸಂವತ್ಸರಗಳಲ್ಲಿ (1875-1876) ಪೂನಾ ಪಟ್ಟಣವನ್ನು ಸೇರಿತು. ಅಲ್ಲಿ ಬುಧವಾರ ಪೇಟೆಯ ಖಾಸಗೀಯವರ ವಾಡೆಯಲ್ಲಿಯೇ ಮಠದ ಬೀಡಾರವಾಯಿತು. ಪ್ರಥಮಬಾರಿ ಶ್ರೀಮಠವು ಭಕ್ತಾದಿಗಳ ಪ್ರಾರ್ಥನೆಯನ್ನು ಮನ್ನಿಸಿ ಪುಣೆಯಲ್ಲಿ ಚಾತುರ್ಮಾಸ್ಯಕ್ಕೆಂದು ಉಪಸ್ಥಿತವಾಯಿತು. ಆ ಸಮಯದಲ್ಲಿ ಮೈಸೂರಿನಿಂದ ಧರ್ಮಾಧಿಕಾರಿಗಳಾದ ಶ್ರೀರಾಮಗಿರಿ ಶ್ಯಾಮಾಚಾರ್ಯರು ಶ್ರೀಗಳವರ ದರ್ಶನಕ್ಕೆಂದು ಬಂದಿದ್ದರು.

ಶ್ರೀಮಠದ ಸಭಾ ಸಂಘಟನೆಗಳಲ್ಲಿ, ವಾದವಿವಾದಗಳಲ್ಲಿ ಮತ್ತು ಪಾಠ ಪ್ರವಚನಗಳಲ್ಲಿ ವಾಯಿ ವಾಸುದೇವಾಚಾರ್ಯರು ಮುಖ್ಯಪಾತ್ರವಹಿಸುತ್ತಿದ್ದರು.

ಆ ಸಮಯದಲ್ಲಿ ವಿವಾದಾಸ್ಪದವಾದ ವಿಷಯಗಳ ಚರ್ಚೆಗೋಸ್ಕರ ಸಭೆಯನ್ನು ಸೇರಿಸಲು ವಾಸುದೇವಾಚಾರ್ಯರು ಶ್ರೀಗಳವರಲ್ಲಿ ಅರಿಕೆ ಮಾಡಿಕೊಂಡರು. ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಸಭೆಯಲ್ಲಿ ಜನಾರ್ದನಾಚಾರ್ಯರು, ಭಿಕ್ಕಾಚಾರ್ಯರು, ರಾಮಾಶಾಸ್ತ್ರಿಗಳು, ದಾದಾ ದತ್ತೋಪಂತ ಮಹಾಮಹೋಪಾಧ್ಯಾಯ ಮುಂತಾದ ಘನವಿದ್ವಾಂಸರು ಉಪಸ್ಥಿತರಿದ್ದರು. ಸಭೆಯು ಶ್ರೀ ಮುರಳೀಧರ ದೇವಸ್ಥಾನದಲ್ಲಿ ನೆಡೆಯಿತು.

ವಿವಾದಾಸ್ಪದವಾದ ವಿಷಯದ ಮೇಲೆ ವಾಯಿ ವಾಸುದೇವಾಚಾರ್ಯರು ಮತ್ತು ರಾಮಗಿರಿ ಶ್ಯಾಮಾಚಾರ್ಯರು ಇಬ್ಬರೂ ಅಸ್ಖಲಿತ ವಾಣಿಯಲ್ಲಿ ವಾದ ಪ್ರತಿವಾದಾಂಶಗಳನ್ನು ಮಂಡಿಸುತ್ತಿದ್ದರು. ಹದಿನಾಲ್ಕು ದಿನಗಳಕಾಲ ವಾಕ್ಯಾರ್ಥವು ನಡೆಯಿತು. ಇವರಿಬ್ಬರಲ್ಲಿ ಯಾರು ಮೇಲು ಎಂಬದನ್ನು ತಿಳಿಯಲು ಸಾಧ್ಯವಾಗುವಂತಿರಲಿಲ್ಲ. ರಾಮಗಿರಿಶ್ಯಾಮಾಚಾರ್ಯರು ವಿವಾದಕ್ಕೆಂದು ಬಂದವರೇ ಅಲ್ಲ. ಅಲ್ಲದೇ ಅವರು ಸ್ವಶಿಷ್ಯರೂ ವಿನಯ ಶೀಲರೂ ಆದ್ದರಿಂದ ಜಯಾಪಜಯಗಳ ಪ್ರಶ್ನೆಯೇ ಇರಲಿಲ್ಲ.

ಆ ಸಂದರ್ಭದಲ್ಲಿ ಶ್ರೀಪಾದಂಗಳವರು ಪ್ರಸಕ್ತರಾಗಿ ಅವರಿಬ್ಬರಿಗೂ ನೂತನವಾದ ಒಂದು ವಿಚಿತ್ರ ಶೈಲಿಯಲ್ಲಿ ವಿಷಯವನ್ನು ಅನುವಾದಿಸುತ್ತ ಅದ್ಭುತ ಪಾಂಡಿತ್ಯವನ್ನು ಪ್ರಕಟಿಸಿ ಇಬ್ಬರನ್ನೂ ಸಮಾಧಾನಗೊಳಿಸಿದರು. ಅದರಿಂದ ತೃಪ್ತರಾದ ರಾಮಗಿರಿ ಆಚಾರ್ಯರು ಶ್ರೀಪಾದಂಗಳವರ ಅಗಾಧ ಪಾಂಡಿತ್ಯವನ್ನು ಮುಕ್ತಕಂಠದಿಂದ ಶ್ಲಾಘನೆ ಮಾಡಿ, ಶ್ರೇಷ್ಠ ಗೌರವವನ್ನು ವ್ಯಕ್ತಪಡಿಸಿದರು. ಈ ಪ್ರತಿಭೆ ಮಾನವ ಲೋಕಕ್ಕೆ ಸಾಧ್ಯವಾದುದಲ್ಲ. ಶ್ರೀಗಳವರು ದೇವಾಂಶರೆಂದು ಹೇಳುತ್ತ ನತಮಸ್ತಕರಾಗಿ ಭಕ್ತಿಯನ್ನು ವ್ಯಕ್ತಪಡಿಸಿದರು. ರಾಮಗಿರಿ ಆಚಾರ್ಯರು ಶ್ರೀಗಳವರಿಂದ ವಿಶೇಷ ಸಂಭಾವನೆ ಮತ್ತು ಶಾಲು ಜೋಡಿ ಮರ್ಯಾದೆ ಫಲಮಂತ್ರಾಕ್ಷತೆ ಆಶೀರ್ವಾದಗಳನ್ನು ಪಡೆದು ಮೈಸೂರಿಗೆ ತೆರಳಿದರು.

ಮಹಾರಾಷ್ಟ್ರ ಪ್ರದೇಶದಲ್ಲಿ ಅಲ್ಲಿಯ ಜನಾಂಗಕ್ಕೆ ಶ್ರೀಮಾಧ್ವಮತತತ್ವಗಳನ್ನು ಚನ್ನಾಗಿ ಮನಸ್ಸಿನಲ್ಲಿ ರೂಢಿಸುವಂತೆ ಪ್ರವಚನ ಮಾಡುತ್ತಾ ಅನೇಕ ವಂಶಗಳನ್ನು ಉದ್ಧಾರ ಮಾಡಿದರು. ಬಹುಸಂಖ್ಯೆಯಲ್ಲಿ ಪ್ರಭಾವಿತರಾಗಿ ಬಂದ ಭಕ್ತಾದಿಗಳಿಗೆ ತಪ್ತಮುದ್ರಾಧಾರಣವನ್ನು ಅನುಗ್ರಹಮಾಡಿದರು.

ಶ್ರೀಪಾದಂಗಳವರು ಪುಣೆಯಲ್ಲಿದ್ದಾಗ ತಿಲಕ ಕುಟುಂಬ ವರ್ಗವೂ ಅವರ ದರ್ಶನಾನುಗ್ರಹ ಬಯಸಿ ಬಂದಿದ್ದರು. ಆಗ ಅವರ ಪುತ್ರ ಶ್ರೀಬಾಲ ಗಂಗಾಧರತಿಲಕರೂ ಬಂದಿದ್ದರು. ಅವರಿನ್ನೂ 18-19 ವರ್ಷದ ವಿದ್ಯಾರ್ಥಿಗಳಾಗಿದ್ದರು. (1856-1920ಎ.ಡಿ.) ಅವರ ವರ್ಚಸ್ವಿಮುಖಾವಲೋಕನ ಮಾಡಿ ಶ್ರೀಗಳವರು ಈ ಬಾಲಕನು ನಿಮ್ಮ ಮನೆತನಕ್ಕೂ ಸಮಗ್ರ ಭಾರತ ದೇಶಕ್ಕೂ ತಿಲಕಪ್ರಾಯನಾಗುವನು ಎಂದು ಆಶೀರ್ವದಿಸಿದರೆಂದು ನಮ್ಮ ಪೂರ್ವಿಕರು ಹೇಳುತ್ತಿದ್ದರು.*

---

* ಕಾಲಾಂತರದಲ್ಲಿ ಶ್ರೀಬಾಲಗಂಗಾಧರ ತಿಲಕರು ಪದವೀಧರರಾದರು. ಅವರು ವಕೀಲರೂ, ರಾಜಕೀಯ ಧುರೀಣರೂ, ಸ್ವಾತಂತ್ರ ಹೋರಾಟಗಾರರೂ, ಸ್ವರಾಜ್ಯ ನಮ್ಮ ಹಕ್ಕು ಎಂದು ಘೋಷಿಸಿದವರೂ, ಕೇಸರಿ ಪತ್ರಿಕಾ ಸಂಪಾದಕರೂ, ಸಂಸ್ಕೃತಾಧ್ಯಯನ ಶೀಲರೂ, ಸ್ವಾತಂತ್ರಹೋರಾಟದಲ್ಲಿ ಮಂಡಾಲೇ ಕಾರಾಗ್ರಹವಾಸಿಗಳೂ, ಅಲ್ಲಿ ಗೀತಾರಹಸ್ಯ ಗ್ರಂಥಕರ್ತರೂ ಆಗಿ ಖ್ಯಾತಿ ಹೊಂದಿದವರು. ಇವರನ್ನು ಶ್ರೀಗಳವರ ಪೂರ್ವಾಶ್ರಮದ ತಮ್ಮಂದಿರಾದ, ಶ್ರೀಜಯಾಚಾರ್ಯರ ಮಕ್ಕಳಾದ ಶ್ರೀನಾರಾಯಣಾಚಾರ್ಯರು 1915ರಲ್ಲಿ ಸಂದರ್ಶಿಸಿದ್ದು ಒಂದು ಗಮನಾರ್ಹ ಪ್ರಸಂಗ ಸಂಗತಿ. ಅದನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸಲಾಗಿದೆ.

ಶ್ರೀಗಳವರ ಪೂರ್ವಾಶ್ರಮದ ತಮ್ಮಂದಿರು ಶ್ರೀಜಯಾಚಾರ್ಯರು. ಇವರಿಗೆ ಪುತ್ರಚತುಷ್ಟಯರಿದ್ದರು. ಅವರಲ್ಲಿ ತೃತೀಯ ಪುತ್ರರು (1858-1919ಎಡಿ.) ಶ್ರೀನಾರಾಯಣಾಚಾರ್ಯರು. ಶ್ರೀಜಯಾಚಾರ್ಯರು ತಮ್ಮ ಅಣ್ಣಂದಿರಾದ ಶ್ರೀನಿವಾಸಾಚಾರ್ಯರಿಗೆ ಆಶ್ರಮವಾದ ಮೇಲೆ, ಆಗಾಗ್ಗೆ ಸಂದರ್ಶನಕ್ಕೆ ಹೋಗುತ್ತಿದ್ದರೇವಿನ ಶ್ರೀಮಠದೊಂದಿಗೆ ಸಂಚರಿಸುತ್ತಿರಲಿಲ್ಲ.

ಪಾಠಪ್ರವಚನ ಮಾಡಿಕೊಂಡು ಆಸ್ತಿಪಾಸ್ತಿಗಳನ್ನು ನೋಡಿಕೊಂಡು ಮರಡೂರಿನಲ್ಲಿ ಉಳಿದರು. ಶ್ರೀನಾರಾಣಾಚಾರ್ಯರ ಚತುಶ್ಶಾಸ್ತ್ರ ಅಧ್ಯಯನವೂ ಅವರ ತಂದೆಯವರಲ್ಲೇ ಆಯಿತು. ಇವರು ಮಹಾಮೇಧಾವಿಗಳು. 18-19ವಯಸ್ಸಿಗೇನೇ ಉಜ್ವಲ ಪಾಂಡಿತ್ಯ ಪಡೆದವರು. ಅದರಲ್ಲಿಯೂ ನ್ಯಾಯವೇದಾಂತಗಳಲ್ಲಿ ನಿಸ್ಸೀಮರು. ಅವರು ವಿದ್ವತ್ಸಭೆಗೆ ಹೋಗುತ್ತಿದ್ದರು. ಶ್ರೀಗಳವರನ್ನು ಆಗಾಗ್ಗೆ ಸಂದರ್ಶಿಸುತ್ತಿದ್ದರು. ಶ್ರೀಮಠದ ವಾಕ್ಯಾರ್ಥಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಒಂದು ಸಲ ಶ್ರೀಗಳವರ ಸ್ನಾನದ ವೇಳೆಯಲ್ಲಿ ಒಬ್ಬ ಪರಮತ ವಿದ್ವಾಂಸರು ಶ್ರೀಗಳವರನ್ನು ಪ್ರಶ್ನಿಸಿದರು. ಬಳಿಯಲ್ಲಿದ್ದ ಶ್ರೀನಾರಾಯಣಾಚಾಯರು ಶ್ರೀಗಳವರ ಅಪ್ಪಣೆ ಪಡೆದು ಪಂಡಿತರೊಡನೆ ವಾಕ್ಯಾರ್ಥ ಮಾಡಿ ಸಮಾಧಾನ ಪಡಿಸಿದರು. ಶ್ರೀಗಳವರು ಇವರ ವಯಸ್ಸಿಗೆ ಮೀರಿದ ನ್ಯಾಯವೇದಾಂತ ಪ್ರತಿಭೆಗಳನ್ನು ಕಂಡು ಸಂತೋಷಪಡುತ್ತಿದ್ದರು. ಅನಂತರ ಶ್ರೀನಾರಾಯಣಾಚಾರ್ಯರು ಕಂಚಿಯಲ್ಲಿ ಎರಡು ವರ್ಷಗಳಕಾಲ ನ್ಯಾಯಶಾಸ್ತ್ರ ಕ್ರೋಢಪತ್ರಗಳನ್ನು ಕಂಚಿ ಶೃಂಗರಾಚಾರ್ಯರಲ್ಲಿ ಅಧ್ಯಯನ ಮಾಡಿ ಪ್ರಾವಿಣ್ಯತೆಯನ್ನು ಪಡೆದು ಘನವಿದ್ವಾಂಸರಾದರು.

ಇವರ ಸಂಚಾರಕ್ರಮದಲ್ಲಿ ಟ್ರಾವನ್‌ಕೋರ್/ಕೊಚಿನ್, ಬರೋಡಾ, ಮೈಸೂರು ಇತ್ಯಾದಿ ಅನೇಕ ಮಹಾರಾಜರನ್ನು ಸಂದರ್ಶಿಸಿ ಮರ್ಯಾದೆ ಪಡೆದವರು. ಇವರ ಮುಖದಲ್ಲಿ ವಿಲಕ್ಷಣವರ್ಚಸ್ಸು ಆಕರ್ಷಣೀಯವೂ ಗೌರವಾನ್ವಿತವೂ ಆಗಿತ್ತು. ಸಂಚಾರಕ್ರಮದಿಂದ ಇವರೂ ಸಹ ಕೆಲವು ವರ್ಷಗಳನಂತರ ಭಾಗ್ಯನಗರವಾದ ಹೈದರಾಬಾದ ಪಟ್ಟಣವನ್ನು ತಲುಪಿದರು. ಇವರಲ್ಲಿ ಪಾಠಪ್ರವಚನಗಳಿಗಾಗಿ ಅನೇಕ ಶಿಷ್ಯರು ಸಂಗೃಹೀತರಾದರು. ಇವರ ಪಾಂಡಿತ್ಯದ ಪ್ರಖರತೆಯೂ ಕ್ರಮೇಣ ರಾಜಾಶ್ರಯಗಳಿಗೆ ತಲುಪಿತು. ಉನ್ನತ ಹುದ್ದೆಯಲ್ಲಿದ್ದ ಶಿಷ್ಯರು ಇವರನ್ನೂ ಶ್ರೀ ಶಿವರಾಜಬಹದ್ದೂರರಿಗೆ, ನಿಜಾಮರಿಗೆ ಪರಿಚಯ ಮಾಡಿಸಿ ಆಸ್ಥಾನ ವಿದ್ವಾಂಸರೆಂದು ಪರಿಗಣಿಸಿ ವರ್ಷಾಶನ ಬರುವಂತೆ ಮಾಡಿದರು. ಶ್ರೀವಾಯಿ ಶ್ರೀನಿವಾಸಾಚಾರ್ಯರನಂತರ ಈ ಮನೆತನದಲ್ಲಿ ಸ್ವಪ್ರತಿಭೆಯಿಂದ ಜ್ಞಾನಕ್ಷೇತ್ರದಲ್ಲಿ ಮೆರೆದ ವ್ಯಕ್ತಿಯೆಂದರೆ ಶ್ರೀವಾಯಿ ನಾರಾಯಣಾಚಾರ್ಯರು.

ಹೈದರಾಬಾದ ನಿಜಾಮರು ಇವರಿಗೆ ಕಾಶೀಯಾತ್ರೆಗೆ ಧನ ಸಹಾಯ ಮಾಡಿ ಕಳಿಸಿದಾಗ, ಇವರು ಕಾಶಿಯಲ್ಲಿ ಮೂರು ತಿಂಗಳಕಾಲ ಪ್ರತಿನಿತ್ಯ ನ್ಯಾಯ ವೇದಾಂತಗಳಲ್ಲಿ ಕಾಶೀ ವಿದ್ಯಾಪೀಠದಲ್ಲಿ ವಿವಿಧ ಶಾಸ್ತ್ರಜ್ಞರೊಡನೆ ವಾಕ್ಯಾರ್ಥ ನಡೆಯಿಸಿ ಅಪೂರ್ವ ಕೀರ್ತಿ ಸಂಪಾದಿಸಿದರು.

ಇವರು ಶ್ರೀಬಾಲಗಂಗಾಧರ ತಿಲಕರನ್ನು 1915ರಲ್ಲಿ ಸಂದರ್ಶಿಸಿದರು. ಇವರಲ್ಲದೇ ಉಳಿದ ಅನೇಕ ಸಮಕಾಲೀನ ಗಣನೀಯ ಸಂಸ್ಕೃತ ವಿದ್ವಾಂಸರನ್ನೂ ಸಂದರ್ಶಿಸಿದರು. ಶ್ರೀನಾರಾಯಣಾಚಾರ್ಯರು ಶ್ರೀತಿಲಕರ 'ಗೀತಾರಹಸ್ಯ' ಗ್ರಂಥದ ಬಗ್ಗೆ ಪ್ರಸ್ತಾಪಿಸಿ ಗ್ರಂಥಗತ ಮುಖ್ಯವಿಷಯಗಳನ್ನು ತಿಲಕರಿಂದ ನೇರವಾಗಿ ತಿಳಿದರು. ನಂತರದಲ್ಲಿ ಕೆಲವು ವಿಷಯಗಳ ಮೇಲೆ ಇಬ್ಬರೂ ಚರ್ಚೆ ಮಾಡಿದರು. ನಂತರ ಭಾಷ್ಯೋಕ್ತಿಗಳನ್ನು ಆಧರಿಸಿಕೊಂಡು ಇನ್ನು ಹೊಸ ವಿಷಯಗಳನ್ನು ಗೀತೆಯ ಮೇಲೆ ಶ್ರೀನಾರಾಯಣಾಚಾರ್ಯರು ಮಂಡಿಸಿದರು. ಶ್ರೀಟಿಳಕರಿಗೆ ಈ ಹೊಸತರಹದ ನಿರೂಪಣೆ ಜ್ಞಾನಾನಂದವನ್ನುಂಟುಮಾಡಿತು. ಮುಂದೆ ಒಂದುವಾರ ಶ್ರೀನಾರಾಯಣಾಚಾರ್ಯರನ್ನೇ ಪ್ರಾರ್ಥಿಸಿ ಸತ್ಸಂಪ್ರದಾಯಿಕ ಶಾಸ್ತ್ರೀಯ ವಿಷಯಗಳನ್ನೇ ಪ್ರಮಾಣ ಪುರಸ್ಸರ ಸಂಗ್ರಹಿಸಿದರು. ಶ್ರೀಕೃಷ್ಣನೇ ಹೇಳುವಂತೆ "ತಸ್ಮಾತ್ ಶಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ" ಪ್ರತಿಯೊಂದಕ್ಕೂ ಶಾಸ್ತ್ರಾಧಾರ ಪ್ರಮಾಣಗಳು ಬೇಕಾಗುತ್ತದೆ. ಶ್ರೀನಾರಾಯಣಾಚಾರ್ಯರನ್ನು ಕೊನೆಯದಿನ ಬೀಳ್ಕೊಟ್ಟಾಗ (ಶ್ರೀಟಿಳಕರೆಂದರು ಲೇಖನ ಮುಖಾಂತರ) ಶ್ರೀನಾರಾಯಣಾಚಾರ್ಯರಂತಹ ಘನ ವಿದ್ವಾಂಸರು ಇನ್ನು ಅಪರೂಪ. ಅವರ ಜ್ಞಾನದ ಮುಂದೆ ನಮ್ಮದು ಕೇವಲ ಅಲ್ಪ. ("My kuowledge is too super fieial compared to Sri Narayanacharya wai" said Tilak)

ಗೀತಾಧ್ಯಯನವನ್ನು ಮಾಡಿದ ಗಾಂಧೀಜಿ ಕಾಲಾಂತರದಲ್ಲಿ ಸ್ಫೂರ್ತಿ ಹೊಂದಿ ಗೀತೆಯ ಮೇಲೆ ಒಂದು ಗ್ರಂಥವನ್ನು ರಚಿಸಿದರು. ಅಷ್ಟರಲ್ಲಿ ಶ್ರೀತಿಲಕರ 'ಗೀತಾರಹಸ್ಯ' ಪ್ರಕಟವಾಗಿತ್ತು. ಗಾಂಧೀಜಿಯವರ ಅನುಯಾಯಿಗಳು ಅವರನ್ನು ಕೇಳಿದರು. "ಗಾಂಧಿಜೀಯವರೇ ತಾವೂ ಗೀತೆಯ

ಶ್ರೀಗಳವರು ಪುಣೆಯಲ್ಲಿ ಎರಡು ಚಾತುರ್ಮಾಸ್ಯಗಳನ್ನು ಕಳೆದರು. ಆ ಸಂವತ್ಸರಗಳಲ್ಲಿ ಅಂದರೆ ಸನ್ 1875 ಮತ್ತು ಸನ್ 1876 ಪುಣೆಯಲ್ಲಿ ಭೀಕರ ಬರಗಾಲವಿತ್ತು. ಎಲ್ಲಿ ನೋಡಿದರಲ್ಲಿ ತಲೆಬುರುಡೆಗಳೇ ಕಾಣುತ್ತಿದ್ದವಂತೆ, ಆದರೂ ಭಕ್ತಾದಿಗಳು ಶ್ರೀಗಳವರಿಗೆ ಇದ್ದದ್ದರಲ್ಲಿಯೇ ಆತಿಥ್ಯ ಮಾಡಿದರು. ಶ್ರೀಗಳು ಸಹ ಸಮಯವನ್ನರಿತು, ಭಕ್ತರ ಮೇಲೆ ಯಾವ ಭಾರವನ್ನು ಹಾಕದೇ ಅವರು ಕೊಟ್ಟದ್ದರಲ್ಲಿಯೇ ತೃಪ್ತರಾಗಿ ಅನುಗ್ರಹಿಸುತ್ತಿದ್ದರು.

---

ಮೇಲೆ ಗ್ರಂಥ ಬರೆದಿದ್ದೀರಿ. ಶ್ರೀತಿಲಕರೂ "ಗೀತಾರಹಸ್ಯ" ಬರೆದಿದ್ದಾರೆ. ತುಲನಾತ್ಮಕ ದೃಷ್ಟಿಯಿಂದ ತಮ್ಮ ಅಭಿಪ್ರಾಯವೇನು ?" ಎಂದು. ಅದಕ್ಕೆ ಗಾಂಧೀಜಿಯವರು ಉತ್ತರಿಸಿದರು. "ಶ್ರೀತಿಲಕರು ಈ ಕ್ಷೇತ್ರದಲ್ಲಿ ಮಹಾನ್ ವ್ಯಕ್ತಿಗಳು. ನಾನು ತೀರ ಸಣ್ಣ ವಕ್ತಿ. ತುಲನೆ ಮಾಡಲೇ ಬೇಡಿರಿ. ನನಗೆ ತಿಳಿದಷ್ಟು ನಾನು ಬರೆದಿದ್ದೇನೆ."ಎಂದರು. (Gandhiji said "Tilak is a gaint in this field. I am only a pigmy compared to him.") ಶ್ರೀ ನಾರಾಯಣಾಚಾರ್ಯರನ್ನು ಸಂದರ್ಶಿಸಿದ ಮೇಲೆ ಶ್ರೀ ತಿಲಕರೆಂದರು "ಅವರಿಗೆ ಹೋಲಿಸಿದರೆ ನನ್ನ ಜ್ಞಾನ ಅಲ್ಪ." (Tilak said " My kuowledge is too superficial compared to Sri Narayanachar"). ಅದೇ ರೀತಿ ಶ್ರೀನಾರಾಯಣಾಚಾರ್ಯರು ಎನ್ನುತ್ತಾರೆ, "ಶ್ರೀ ಸತ್ಯಪರಾಕ್ರಮರ ಜ್ಞಾನದ ಮುಂದೆ ತಮ್ಮದು ನೆಪಮಾತ್ರ, ಅಲ್ಪ ಎನ್ನುತ್ತಿದ್ದರು. ಅವರದು ದೇವತಾ ಜ್ಞಾನ, ವಿಜ್ಞಾನ."

ಶ್ರೀ ಸತ್ಯಪರಾಕ್ರಮರಾದರೋ ತಮಗಿಂತ ಉತ್ತಮರಸಕಾಶಾತ್ (ಅಂದರೆ ಶ್ರೀಜಯತೀರ್ಥಾದಿಗಳಿಗಿಂತ) ಕಡಿಮೆ ಅನ್ನುತ್ತಾರೆ. ಇದೇ ಸತ್ಪರಂಪರೆ. ಇವರೆಲ್ಲರಲ್ಲಿಯೂ ನೈಜವಾದ ವಿದ್ಯೆ ಇದೆ. ಇವರೆಲ್ಲರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಪ್ರತಿಭಾವಂತರು. ಆದರೂ ಅಭಿಮಾನರಹಿತರಾದ, ವಿನಯಾನ್ವಿತರಾದ ಸೌಜನ್ಯ ಮೂರ್ತಿಗಳಿವರು. "ವಿದ್ಯಾದದಾತಿ ವಿನಯಂ, ವಿನಯಾದ್ಯಾತಿ ಪಾತ್ರತಾಂ" ಎಂಬ ಸುಭಾಷಿತೆಯು ಅನ್ವಯವನ್ನು ಇಲ್ಲಿ ಕಾಣಬಹುದು.

ಇಂಥ ಕ್ಷಾಮದಿನಗಳಲ್ಲಿಯೂ ಉತ್ತರಾದಿ ಶ್ರೀಮಠದಲ್ಲಿ ಬಂದವರಿಗೆ ಅನ್ನವಿಲ್ಲವೆನ್ನದೇ ಸಹಸ್ರಾರು ಜನರಿಗೆ ಅನ್ನಸಂತರ್ಪಣೆ ನಡೆಯುತ್ತಲೇಇತ್ತು. ಆ ಕಾಲದ ಶ್ರೀಗಳವರ ಶಿಷ್ಯರು ಬರೇದ ಸ್ತೋತ್ರದಲ್ಲಿ ಈ ಕೆಳಗಿನ ಶ್ಲೋಕವನ್ನು ಕಾಣಬಹುದು.

**“ಯಃ ಪುಣ್ಯಾಭಿದ ಪತ್ತನಂ ಪ್ರತಿಯಯೌಕತುಂಚ ತತ್ಸಾರ್ಥಕಂ**
**ದುರ್ಭಿಕ್ಷೇಜನನೀವಬಾಲನಿಕರಂ ಬಭ್ರನ್ಸದಾ ಮಾನವಾನ್ ||**
**ಸ್ವೀಯೌದಾರ್ಯಗೀತಾರ್ಯಸೂರ್ಯತನಯೌದಾರ್ಯಶ್ಚತಸ್ಮಿನ್ ಗುರುಃ |**
**ಶ್ರೀಮತ್ಸತ್ಯಪರಾಕ್ರಮೋವಿಜಯತೇದುರ್ವಾದಿಗರ್ವಾಪಹಃ ||”**

ಶ್ರೀಸತ್ಯಪರಾಕ್ರಮ ತೀರ್ಥರು ತಮ್ಮ ಸಂಚಾರದ ಸಾರ್ಥಕ್ಯವನ್ನು ಪಡಿಸಲು ಪುಣೆ ಪಟ್ಟಣಕ್ಕೆ ದಿಗ್ವಿಜಯ ಗೈದರು. ಆಗ ಆನಗರದಲ್ಲಿ ಕ್ಷಾಮವಿದ್ದದರಿಂದ, ಅಂಥ ದುರ್ಭಿಕ್ಷ ಕಾಲದಲ್ಲಿಯೂ ಕೂಡ, ದಾನಶೂರಕರ್ಣನಂತೆ ಅಥವಾ ತಾಯಿಯು ಶಿಶುಗಳನ್ನು ರಕ್ಷಿಸುವ ಹಾಗೆ ಶ್ರೀಗಳವರು ಔದಾರ್ಯದಿಂದ ಬಹುಜನಕ್ಕೆ ನಿತ್ಯವೂ ಅನ್ನಸಂತರ್ಪಣೆಮಾಡುತ್ತಿದ್ದರು. ಅಂಥ ಉದಾರಿಗಳೂ ಮತ್ತು ದುರ್ವಾದಿಗಳ ಗರ್ವನಾಶಪಡಿಸತಕ್ಕ ಶ್ರೀಗಳವರು ನಮ್ಮ ಮನಸ್ಸಿನಲ್ಲಿ ಜಯಪ್ರದತ್ವೇನ ವಿರಾಜಮಾನರಾಗಲಿ.”

ಕೊಡುವವನು ಸಮರ್ಥಸ್ವಾಮಿ ಶ್ರೀರಾಮಚಂದ್ರ. ಇಂಥ ದುರ್ಭಿಕ್ಷೆಯಲ್ಲಿ ಅನ್ನದಾನ ಮಾಡಿರಿ, ಪುಣ್ಯ ಪಡೆಯಿರಿ. ಹಸಿದು ಬಂದವರು ಯಾರೇ ಆಗಲಿ ಭೋಜನವಿಲ್ಲವೆನ್ನಬೇಡಿರೆಂದು ಶ್ರೀಪಾದಂಗಳವರ ಆಜ್ಞೆ.

ಪ್ರಾತಃಕಾಲದಲ್ಲಿ ಶ್ರೀಮಠದಲ್ಲಿ ಶ್ರೀಮನ್ಯಾಯಸುಧಾ ಪಾಠವಾಗುತ್ತಿತ್ತು. ಅಧ್ಯಯನಾಧಿಕಾರಿಗಳು, ವಿದ್ವಾಂಸರು ಅತ್ಯುತ್ಸಾಹದಿಂದ ಜ್ಞಾನ ಸಂಗ್ರಹ ಮಾಡುತ್ತಿದ್ದರು. ಹೀಗೆ ಕೆಲವು ದಿನಗಳು ಕಳೆದ ಮೇಲೆ ಒಬ್ಬಿಬ್ಬರು ವ್ಯಾಕರಣ ವಿದ್ವಾಂಸರು “ಶ್ರೀಗಳವರು ವ್ಯಾಕರಣ ಭಾಗವನ್ನು ಹೆಚ್ಚಿಗೆ ಹೇಳುವದೇ ಇಲ್ಲ. ಸಂಕೋಚ ಮಾಡುತ್ತಾರೆ. ವ್ಯಾಕರಣ ಜ್ಞಾನ ಸಾಮಾನ್ಯ ಇರಬಹುದೆಂದು” ಗುಜಗುಜು ಅಭಿಪ್ರಾಯಪಟ್ಟರು. ಕರ್ಣೋಪಕರ್ಣ ಶ್ರೀಗಳವರ ಶ್ರವಣೇಂದ್ರಿಯಕ್ಕೂ ಆ ಸುದ್ಧಿ ಮುಟ್ಟಿತು. ತರುವಾಯ

ಒಂದೆರೆಡು ದಿನಗಳಲ್ಲಿ ಶ್ರೀಮನ್ಯಾಯಸುಧಾದಲ್ಲಿ ಒಂದು ವ್ಯಾಕರಣ ವಿಶೇಷ ಘಟ್ಟ ಪ್ರಾಪ್ತವಾಯಿತು. ಶ್ರೀಗಳವರು ಆ ವಿಷಯದ ಮೇಲೆ ಪ್ರಾಚೀನ ಅರ್ವಾಚೀನ ಗ್ರಂಥಗಳನ್ನು ಟಿಪ್ಪಣಿಗಳನ್ನು ಅವಲೋಕನ ಮಾಡಿ, ಪಾಠ ಸಮಯದಲ್ಲಿ ವೈಯಾಕರಣಿಗಳು ಕೂಡ ತಲೆದೂಗುವಂತೆ ಅವರಿಗೂ ನೂತನ ವಾದ ಕೆಲವು ವ್ಯಾಕರಣಾಂಶವನ್ನು ಅನುವಾದ ಮಾಡಿದರು ಶ್ರಾವಕರಿಗೆ ತೃಪ್ತಿಯಾಯಿತು. ತದನಂತರಜ್ಞಾನಭಾಗಿಗಳಾದ ಶಿಷ್ಯವರ್ಗವೆಲ್ಲವೂ ಕೃತ ಕೃತ್ಯರಾದೆವೆಂದು ಕೊಂಡರು.ಎರಡು ಚಾತುರ್ಮಾಸ್ಯಗಳಲ್ಲಿಯೂ ದಿವ್ಯವಾಗಿ ಶ್ರೀಮನ್ಯಾಯಸುಧಾಮಂಗಳವನ್ನು ಮಾಡಿದರು.

ಪ್ರಾತಃಕಾಲದ ಪಾಠಗಳು ಕೇವಲ ಒಂದು ವರ್ಗದ ಅಧಿಕಾರಿಗಳಿಗಾದರೆ, ಸಾಯಂಕಾಲದ ಪ್ರವಚನಗಳು ಸಾರ್ವಜನಿಕ ರೀತ್ಯಾ ಮಾಡುತ್ತಿದ್ದರು. ಒಂದೆರಡು ತಿಂಗಳು ಕಾಲಾವಧಿ ಇದ್ದುದರಿಂದ ಶ್ರೀಗಳವರು, ಸರ್ವಮತಗಳೂ ಸರ್ವರಿಗೂ ಪರಿಚಯವಾಗಲಿ ತನ್ಮೂಲಕ ಮಾಧ್ವಮತದ ಹಿರಿಮೆ ಗೊತ್ತಾಗಲಿ ಎಂದು ಅವರ ಅಭಿಪ್ರಾಯ. ಪ್ರವಚನಗಳು ಮರಾಠಿ ಸಂಸ್ಕೃತ ಮಾಧ್ಯಮ ಗಳಲ್ಲಿದ್ದುದರಿಂದ ಅಧಿಕ ಸಂಖ್ಯೆಯಲ್ಲಿ ಸ್ವಪರಮತದವರು ಬಂದು ಕಿಕ್ಕಿರಿದು ಸೇರುತ್ತಿದ್ದರು.

ಶ್ರೀಗಳವರು ಭಿನ್ನಭಿನ್ನಮತಗಳನ್ನು ಅನುವಾದ ಮಾಡುವಾಗ ಅವರ ಪ್ರವಚನ ಪರಿಣತಿ ಎಷ್ಟಿತ್ತೆಂದರೆ, ಆಯಾಮತಾಚಾರ್ಯರೇ ಬಂದು ಸ್ವಮತ ನಿರೂಪಣ ಮಾಡುತ್ತಿರುವರೋ ಎನ್ನುವಂತಿರುತ್ತಿತ್ತು. ಆಯಾಮತದವರು ಪ್ರವಚನ ತೃಪ್ತಿ ಹೊಂದಿ ಜ್ಞಾನಾನಂದವನ್ನು ಪರಸ್ಪರ ವಿನಿಮಯ ಮಾಡಿ ಕೊಳ್ಳುತ್ತಿದ್ದರು.

ಇವರ ಪ್ರವಚನಗಳನ್ನು ಶ್ರವಣಮಾಡಿದ ಶಿಷ್ಯರೊಬ್ಬರು ಇವನ್ನು ಸ್ತೋತ್ರ ಮಾಡಿದ ಶ್ಲೋಕ ಈ ಕೆಳಗಿನಂತೆ ಇದೆ.

**"ಯದ್ಭಾಷಾಬಹುಹೃದ್ಯಭಾವ ಸಹಿತಾ ತೋಷಾವಹಾಭೂತ್‌ಸದಾ**
**ಸ್ವೀಯಾನಾಂಖಲು ಮಾಯಿನಾಮಪಿ ಸದಾ ಪ್ರಾಜ್ಞೋಪಮೋದಾ ವಹಃ ||**
**ಆಶ್ಚರ್ಯಂ ತ್ವಿದಮೇವ ಸಂಪ್ರವಚನೇ ಪೀಠಾಧಿರೂಢೌಗುರೌ |**
**ಶ್ರೀಮತ್ಸತ್ಯಪರಾಕ್ರಮೋಕಿಮಸುಶುಕ ಶ್ಚಾತುರ್ಯವಾರಾನಿಧಿಃ ||"**

" ಯಾರ ಭಾಷೆಯು ಹೃದ್ಯವೂ ತೋಷಣಕರವೂ ಆಗಿದ್ದಿತೋ, ಯಾರ ವಾಣಿಯು ಸ್ವಮತೀಯರಿಗೂ ಮಾಯಿಮತದ ಪಂಡಿತರಿಗೂ ಸಹ ಮೋದ ವನ್ನು ತರುತ್ತಿತ್ತೋ ಯಾವ ಪೀಠಾಧಿಪತಿಗಳ ಪ್ರವಚನದಿಂದ ಆಶ್ಚರ್ಯ ವಾಗುತ್ತದೆಯೋ, ಅಂಥ ಶ್ರೀಸತ್ಯಪರಾಕ್ರಮ ಗುರುಗಳು ಪ್ರವಚನ ಚಾತುರ್ಯದಲ್ಲಿ ಶಂಕರಾಚಾರ್ಯರೇನೋ ಎಂಬಂತಿದೆ."

ಪ್ರವಚನಗಳು ಅಯಾಮತದವರಿಗೆ ಮೆಚ್ಚುಗೆಯಾಗುವಂತಿತ್ತು. ಶ್ರೀಗಳವರ ಪ್ರವಚನ ಲಹರಿಯಲ್ಲಿ ಒಂದು ರೀತಿಯ ವಿಲಕ್ಷಣ ಪ್ರತಿಭೆ ಚಾತುರ್ಯಗಳು ತೋರುತ್ತಿದ್ದವು. ಎಂಥ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಶಾಂತತೆಯನ್ನು ಕಾಪಾಡಿಕೊಂಡು ನಯವಾಗಿಯೇ (Diplomatic language) ಮಾತನಾಡುತ್ತಿದ್ದರು. ಅದ್ವೈತ ಮತವನ್ನು ಅನುವಾದ ಮಾಡಿದ ದಿನಗಳಲ್ಲಿ ಅದ್ವೈತ ಪಂಡಿತರ ಆನಂದಕ್ಕೆ ಪಾರವೇ ಇಲ್ಲ. ಅಪರ ಶಂಕರಾಚಾರ್ಯರೇ ಪ್ರವಚನ ಮಾಡುತ್ತಿದ್ದಾರೆಂಬ ಭಾಸಉಂಟಾಯಿತು. ಆಯಾ ಮತದ ಪ್ರಕ್ರಿಯೆಗಳನ್ನು ಪರಿಭಾಷಾಗಳನ್ನು ಚಾಚೂ ತಪ್ಪದೇ ಹೇಳುತ್ತಿದ್ದರು.

ಪರಮತ ಅನುವಾದಗಳು ಸಂಪೂರ್ಣ ಮುಗಿದ ನಂತರ ಮಧ್ವಮತಾನು ವಾದವು ಪ್ರಾರಂಭವಾಯಿತು. ಉಳಿದ ಎಲ್ಲ ಮತಗಳನ್ನು ಪೂರ್ವಪಕ್ಷ ವನ್ನಾಗಿ ಸ್ವೀಕರಿಸಿ ದೋಷೋತ್ಥಾಪನೆ ಮಾಡಿ, ಅವುಗಳನ್ನು ಸಯುಕ್ತಿಕ ವಾಗಿಯೂ ಸಪ್ರಮಾಣವಾಗಿಯೂ ನಿರಾಕರಿಸಿ ಮಧ್ವಸಿದ್ಧಾಂತದ ಯುಕ್ತಿ ಯುಕ್ತವಾದ ಪ್ರಮಾಣ ಪ್ರಚುರವಾದ ವಾದದೊಂದಿಗೆ ಸಿದ್ಧಾಂತ ಸ್ಥಾಪನೆ ಮಾಡಿದರು. ಮಾಧ್ವರ ಮುಖಾರವಿಂದಗಳು ಅರಳಿದವು, ಎರಡು ಚಾತು ರ್ಮಾಸ್ಯಗಳ ಅಂತ್ಯದಲ್ಲಿ ಮುನ್ನೂರು ಜನ ಸ್ಮಾರ್ತಸಂಪ್ರದಾಯದವರು ಶ್ರೀಗಳವರಿಂದ ತಪ್ತಮುದ್ರೆ ಪಡೆದು ಮಾಧ್ವ ಸಂಪ್ರದಾಯವನ್ನು ಅನುಸರಿಸಿ ದರು.

ಹೀಗೆ ಶ್ರೀಗಳವರು ಪುಣೆಯಲ್ಲಿ ಎರಡು ಚಾತುರ್ಮಾಸ್ಯಗಳನ್ನು ವಿದ್ವಾಂಸರಿಂದ ಆಸ್ತಿಕರಿಂದ ಮತ್ತು ಪಾಮರರಿಂದ ಪೂಜಿಸಲ್ಪಟ್ಟು ಅನುಗ್ರಹಿಸಿ ದರು. ಶ್ರೀಗಳವರ ಪುಣೆಯ ವಾಸವು ಚಿರಸ್ಮರಣೀಯ ಘಟನೆಯಾಯಿತು.

## ಗೋದಾವರಿ ತೀರಸ್ಥ ಸೊನ್ನಿಯಲ್ಲಿ ಚಾತುರ್ಮಾಸ್ಯ :

ಯತ್ಯಾಶ್ರಮಿಗಳು ಒಂದೇ ಊರಲ್ಲಿ ಮೂರು ರಾತ್ರಿಗಳಿಗಿಂತ ಹೆಚ್ಚಿಗೆ ಇರಬಾರದೆಂದು ಸಾಮಾನ್ಯ ನಿಯಮ. ಎಲ್ಲ ನಿಯಮಗಳೂ ಸಾಮಾನ್ಯವಾಗಿ ಔತ್ಸರ್ಗಿಕ. ಚಾತುರ್ಮಾಸ್ಯದ ಹೊರತಾಗಿ ಉಳಿದ ದಿನಗಳಲ್ಲಿ ಈ ನಿಯಮ ಅನ್ವಯಿಸುವದು. ಚಿಕ್ಕ ಪುಟ್ಟ ಊರುಗಳಿಗೆ ಈ ನಿಯಮವನ್ನು ಅನ್ವಯಸ ಬಹುದೇ ಹೊರತು, ದೊಡ್ಡ ಊರುಗಳಿಗೆ ಅನ್ವಯಿಸಲು ಬರುವದಿಲ್ಲ. ಯಾಕೆಂದರೆ ನಗರಗಳ ಭಿನ್ನ ಬಡಾವಣೆಗಳನ್ನು ಒಂದೊಂದು ಊರು ಎಂದೇ ಭಾವಿಸಬೇಕು. ವಾಸ್ತವ್ಯವಾಗಿ ನಗರದ ಒಡಲಲ್ಲಿ ಅನೇಕ ಪುಟ್ಟ ಊರುಗಳು ಹುದುಗಿಕೊಂಡಿರುತ್ತವೆ.

ಏನೇ ಇರಲಿ ಶ್ರೀಸಂಸ್ಥಾನವು ಊರಿಂದೂರಿಗೆ, ಕ್ಷೇತ್ರದಿಂದ ಕ್ಷೇತ್ರಗಳಿಗೆ ಮತ್ತು ತೀರ್ಥಗಳಿಂದ ತೀರ್ಥಗಳಿಗೆ ಪರ್ಯಟನ ಮಾಡುತ್ತಲೇ ಇರುತ್ತಿತ್ತು. ಹೀಗೆ ಚರಿಸತಕ್ಕ ಕಾಲದಲ್ಲಿ ಶ್ರೀಸಂಸ್ಥಾನವು ಗೋದಾವರೀ ತೀರಕ್ಕೆ ಪ್ರಾಪ್ತ ವಾಯಿತು. ಅಲ್ಲಿ ಶ್ರೀಗಳವರ ತಪೋ ಮಹಿಮೆ ಮತ್ತು ಅಗಾಧ ಪಾಂಡಿತ್ಯ ವನ್ನು ನೋಡಿ/ಕೇಳಿ ಅನೇಕ ಭಕ್ತಾದಿಗಳು ಆಸ್ತಿಕ ಶಿಖಾಮಣಿಗಳಾದ ಮಾಧ್ವೇತರು ಸಹ ಶ್ರೀಗಳವರ ಶಿಷ್ಯತ್ವವನ್ನು ಬಯಸಿದರು. ಅದೇ ಪ್ರಕಾರ ಶ್ರೀಗಳವರು ಕೇವಲ ಮಾಧ್ವರಿಗಲ್ಲದೇ ಅನೇಕ ಜನಸ್ಮಾರ್ತರಿಗೂ ಕೂಡ ತಪ್ತಮುದ್ರಾದಿಗಳನ್ನು ಅನುಗ್ರಹಿಸಿ ಮಾಧ್ವದೀಕ್ಷೆಯನ್ನು ಉಪದೇಶಿಸಿದರು. ಈ ಘಟನೆ ಅಸಂಭವವಾಗಲಿ ಅಥವಾ ಉತ್ಪ್ರೇಕ್ಷೆಯಾಗಲಿ ಆಗುವ ಸಂದರ್ಭವೇ ಇಲ್ಲ. ಅವರ ಸ್ತೋತ್ರದ ಒಂದು ಶ್ಲೋಕವನ್ನು ನೋಡಿದರೆ ಈ ವಿಷಯ ಸ್ಪಷ್ಟವಾಗದೇ ಇರದು.

**"ಕಾಚಾನಾಂ ನಿಚಯೋ ವಿವಿಚ್ಯ ಸುಮಣೀನ್ ಹೈಮಾನಿಕಾ**
**ದ್ವೈತಿನಾಮ್ ।**
**ನೀಚಾನಾಂ ನಿಚಯೋ ಸುಮುಕ್ತಿ ಪದವೀಂ ಯೋಗ್ಯಾನ್**
**ಸುಪುಣ್ಯಾನ್ ನರಾನ್ ॥**
**ಚಕ್ರೇಚಕ್ರದರಾಂಕಿತಾನುಪದಿಶನ್ ಮಂತ್ರಾನ್‌ಪವಿತ್ರಾನ್‌ಮುದಾ ।**
**ಶ್ರೀಮತ್ಸತ್ಯಪರಾಕ್ರಮೋ ವಿಜಯತೇ........॥"**

"ಮಿಶ್ರ ಮಣಿಗಳ ಸಮುದಾಯದಿಂದ ಕೇವಲ ಉತ್ತಮ ಮಣಿಗಳನ್ನು ಆರಿಸಿಕೊಂಡು ಬಂಗಾರದ ತಂತಿಗೆ ಹಾಕಿ ಹಾರ ಮಾಡುವಂತೆ, ಮಿಶ್ರ ಯೋಗ್ಯತೆಯ ಜನ ಸಮೂಹದಿಂದ ಕೇವಲ ಪುಣ್ಯವಂತರಾದ ಮತ್ತೂ ಮುಕ್ತಿಯೋಗ್ಯರಾದ ಜನರನ್ನು ಆರಿಸಿ ಅಂಥವರಿಗೆ ತಪ್ತಮುದ್ರಾಧಾರಣ, ಮಂತ್ರೋಪದೇಶ ಮತ್ತು ಮಾಧ್ವವೈಷ್ಣವ ದೀಕ್ಷಾದಿಗಳನ್ನು ಅನುಗ್ರಹಿಸುತ್ತಿದ್ದರು. ಅಂಥ ಪೂಜ್ಯರಾದ ಶ್ರೀ ಸತ್ಯಪರಾಕ್ರಮ ತೀರ್ಥ ಶ್ರೀಪಾದಂಗಳವರು ನಮ್ಮ ಮನಸ್ಸಿನಲ್ಲಿ ವಿಜಯ ಪ್ರದತ್ವೇನ ವಿರಾಜಮಾನರಾಗಲಿ." ಮಾಧ್ವೇತರರು ಶಿಷ್ಯಕೋಟಿ ಪ್ರವಿಷ್ಟರಾದರೆನ್ನುವದಕ್ಕೆ ಇದೇ ಪ್ರಮಾಣ.

ಗೋದಾವರೀ ತೀರದಿಂದ ಸಂಸ್ಥಾನವು "ಸೊನ್ನಿ" ಎಂಬ ಗ್ರಾಮಕ್ಕೆ ತಲುಪಿತು. ಭಕ್ತಾದಿಗಳು ವಿಜೃಂಭಣೆಯಿಂದ ಶ್ರೀಗಳವರನ್ನು ಸ್ವಾಗತಿಸಿದರು. ಚಾತುರ್ಮಾಸ್ಯಕ್ಕೆ ಶ್ರೀಗಳವರು ಅಲ್ಲಿಯೇ ಉಪಸ್ಥಿತರಾದರು. ಸೊನ್ನಿಕ್ಷೇತ್ರವು ಉತ್ತಮ ಬ್ರಾಹ್ಮಣ್ಯದಿಂದ ಕೂಡಿತ್ತು. ಪಾಠಪ್ರವಚನ ರೂಪವಾದ ಜ್ಞಾನ ಸತ್ರವು ಅತಿಶಯ ಉತ್ಸಾಹದಿಂದಲೂ ಮತ್ತು ಉತ್ತಮ ರೀತಿಯಿಂದಲೂ ನಡೆಯಿತು.

ಶ್ರೀಗಳವರು ದಿಗ್ವಿಜಯ ಮಾಡಿದ ಸಮಯದ ಸದುಪಯೋಗ ಪಡಿಸಿಕೊಳ್ಳಲು ದೀಕ್ಷಾಬದ್ಧರಾದ ಸದ್ಗೃಹಸ್ಥರೂ ಗ್ರಾಮೀಣ ಆಸ್ತಿಕ ಶಿಖಾಮಣಿಗಳೂ ಸೇರಿ, ಶ್ರೀಗಳವರ ಅಮೃತಹಸ್ತದಿಂದ ಊರಿನಲ್ಲಿ ಪ್ರಾಣದೇವರ ಪ್ರತಿಷ್ಠಾಪನೆ ಮಾಡಬೇಕೆಂದು ವಿಜ್ಞಾಪಿಸಿಕೊಂಡರು. ಶ್ರೀಸಂಸ್ಥಾನದ ಪ್ರಧಾನ ಪುರೋಹಿತರಾದ ಶ್ರೀಬಹ್ಮಾಂಡವಿಷ್ಣು ಪಾದಾಚಾರ್ಯರ ಮಕ್ಕಳಾದ ಕೃಷ್ಣಮೂರ್ತ್ಯಾಚಾರ್ಯರಿಂದ ಪ್ರತಿಷ್ಠಾಪನಾಂಗವಾಗಿ ಹೋಮ ಹವನಗಳನ್ನು ಮಾಡಿಸಿದರು. ಶ್ರೀಮನ್ಮಧ್ವರ ತಂತ್ರಸಾರೋಕ್ತ ರೀತ್ಯಾ ಪ್ರಾಣ ಪ್ರತಿಷ್ಠಾಪನಾದಿಗಳನ್ನು ಶ್ರೀಗಳವರು ನೆರವೇರಿಸಿದರು. ಆ ಸಂದರ್ಭದಲ್ಲಿ ಶ್ರೀಮದ್ಧರಿವಾಯುಸ್ತುತಿ. ಐತರೇಯ ಉಪನಿಷತ್, ಛಾಂದೋಗ್ಯ ಇತ್ಯಾದಿ ಮುಖ್ಯಪ್ರಾಣರ ಮಹಿಮೋಪೇತ ವೇದಭಾಗಗಳನ್ನು ತಂಡೋಪ ತಂಡ ದ್ವಿಜ ಶ್ರೇಷ್ಠರುಗಳು ಪಠಿಸಿದರು. ನಾಲ್ಕೈದು ದಿನಗಳು ಆಕಾಶದಲ್ಲಿ ವೇದಘೋಷಗಳೇ ಮೊಳಗಿದ್ದವು. ಹೋಮಧೂಮದಿಂದ ಗ್ರಾಮವು ಪವಿತ್ರವಾಯಿತು.

ಅನ್ನಸಂತರ್ಪಣೆ, ಅನ್ನ ಶಾಂತಿಯಿಂದ ಭೂತ ತೃಪ್ತಿಯೂ ಮತ್ತು ಸ್ಥಳ ಪರಿಶುದ್ಧತೆಯೂ ಆದವು. ಶ್ರೀರಾಮಚಂದ್ರದೇವರ ಸನ್ನಿಧಿಯು ವಿಪುಲ ಸುಖ ಸಂತೋಷ ಸಮೃದಿಗಳಿಗೆ ಕಾರಣವಾಯಿತು. ಪರಮ ಪವಿತ್ರ ತೀರ್ಥ ಪ್ರಸಾದಗಳು ಭಕ್ತಾದಿಗಳ ಉದರಸ್ಥವಾತ ಪಾಪಗಳನ್ನು ಓಡಿಸಿ ಪರಮ ಪುನೀತರನ್ನಾಗಿ ಮಾಡಿದವು. ಶ್ರೀ ಪ್ರಾಣದೇವರು ಅದ್ಯಾಪಿ ಪೂಜೆಗೊಂಡು ನಗರ ರಕ್ಷಕರಾಗಿದ್ದಾರೆ. ಹೀಗೆ ಸೊನ್ನಿಯ ದಿಗ್ವಿಜಯ ಊರಹಬ್ಬವಾಗಿದ್ದು. ಚಿರಸ್ಮರಣೀಯವಾದ ಘಟನೆಯಾಯಿತು.

## ವ್ಯಾಘ್ರಪುರಿ(ಹುಲಿಗಿ) ದಿಗ್ವಿಜಯ :

ರಾಯಚೂರು ಜಿಲ್ಲಾ ಕೊಪ್ಪಳ ತಾಲೂಕಿಗೆ ಸೇರಿದ ಹುಲಿಗೆ ಕ್ಷೇತ್ರವು ತುಂಗಭದ್ರಾ ನದಿಯ ತೀರದಲ್ಲಿದೆ. ಇದು ಶ್ರೀಲಕ್ಷ್ಮೀಕ್ಷೇತ್ರ. ಬಹುಪವಿತ್ರ ಮತ್ತು ಜಾಗ್ರತ ಸ್ಥಳ. ಶ್ರೀಲಕ್ಷ್ಮೀ ಕಣ್ಣುಗಳಲ್ಲಿ ಸಾಲಿಗ್ರಾಮಗಳಿವೆ. ಮನುಷ್ಯನು ಈ ದೇವತೆಯ ದೃಷ್ಟಿಗೆ ಬಿದ್ದರೆ ಲಕ್ಷ್ಮೀನಾರಾಯಣರ ಕಟಾಕ್ಷಕ್ಕೆ ಒಳಪಟ್ಟಂತೆಯೇ. ಗ್ರಾಮೀಣ ಜನರು ಈ ದೇವತೆಗೆ ಹುಲಿಗೆವ್ವ ಗ್ರಾಮದೇವತೆ ಎಂದು ಕರೆಯುತ್ತಾರೆ.

ಎರಡನೆಯದಾಗಿ ಈ ಊರಲ್ಲಿ ಶ್ರೀಹುಲಿಗಿ ಶ್ರೀಪತ್ಯಾಚಾರ್ಯರು ಎಂಬ ಜ್ಞಾನಿವರೇಣ್ಯರು, "ಶ್ರೀತತ್ವೋದ್ಯೋತ ಟೀಕಾ ವಿವೃತ್ತಿ" ಅಥವಾ "ದ್ವೈತದ್ಯುಮಣಿ" ಎಂಬ ಪ್ರೌಢ ಟಿಪ್ಪಣಿ ಗ್ರಂಥವನ್ನು ರಚಿಸಿದ ಸ್ಥಳವಿದು. ಈ ಕ್ಷೇತ್ರದಲ್ಲಿ "ತತ್ವೋದ್ಯೋತ" ಅವಲೋಕನ ಮಾಡಬೇಕೆಂಬದು ಶ್ರೀಗಳವರ ಅಭಿಲಾಷೆ.

"ಏಕೋಕ್ರಿಯಾ ದ್ವ್ಯರ್ಥಕರೀಬಭೂವ" ಎಂಬ ಕಾಳಿದಾಸನ ವಚನ ದಂತೆಯೂ ಶ್ರೀಗಳವರ ಈ ಕ್ಷೇತ್ರದರ್ಶನ ದ್ವ್ಯರ್ಥಕರೀ ಆಗಿತ್ತು. ಶ್ರೀಗಳವರು ಅಲ್ಲಲ್ಲಿ ಸಂಚಾರ ಮಾಡುತ್ತ ಹುಲಿಗೀ ಕ್ಷೇತ್ರಕ್ಕೆ ಪ್ರಾಪ್ತರಾದರು. ಹುಲಿಗೀ ಆಚಾರ್ಯರ ಮನೆಯಲ್ಲಿಯೇ ಬೀಡಾರ ಮಾಡಿದರು. ಶ್ರೀಪಾದಂಗಳವರ ಪಾದಧೂಳಿ ತಮ್ಮನ್ನು ತಮ್ಮ ಸ್ಥಳವನ್ನೂ ಪವಿತ್ರಮಾಡಿತೆಂದು ಆಚಾರ್ಯರಿಗೆ ಪರಮ ಸಂಭ್ರಮ ವಿಷಯವಾಗಿತ್ತು.

ಶ್ರೀಗಳವರು ಈ ಸ್ಥಳಕ್ಕೆ ಆಗಮಿಸಿದ ನಂತರ, ಹುಲಿಗೀ ಆಚಾರ್ಯರ ಸಂಗಡ ವಿಚಾರ ವಿನಿಮಯ ಮಾಡಿ "ತತ್ವೋದ್ಯೋತ" ಪಾಠ ಪೂರ್ಣ ಮುಗಿಯುವವರೆಗೆ ತಿಂಗಳೊಪ್ಪತ್ತು ಅಲ್ಲಿಯೇ ಇರತಕ್ಕ ನಿರ್ಧಾರವನ್ನು ಕೈ ಕೊಂಡರು. ಸಂಸ್ಥಾನದ ಜೋತೆಗೆ ವಾಸುದೇವಾಚಾರ್ಯರು ಇದ್ದರು. ಭೀಮಬಾಳಾಚಾರ್ಯರನ್ನುದ್ದೇಶಿಸಿ ಪಾಠ. ಈ ಸಂದರ್ಭಕ್ಕೆ ಪರಿಸರದಲ್ಲಿರ ತಕ್ಕ ವಿದ್ವಾಂಸರುಗಳನ್ನು ಕರೆಸಲಾಗಿತ್ತು. ವಿದ್ವನ್ಮಣಿಗಳ ಮಧ್ಯದಲ್ಲಿ ಶ್ರೀಪಾದಂಗಳವರು, ನಕ್ಷತ್ರಗಳ ಗುಂಪಿನಲ್ಲಿ ಚಂದ್ರನೋಪಾದಿಯಲ್ಲಿ, ಸ್ವಪ್ರತಿಭೆಯಿಂದ ಅತ್ಯಂತ ವಿರಾಜಮಾನರಾದರು.

ಶ್ರೀಮನ್ಮಧ್ವಾಚಾರ್ಯರ ಕ್ಲಿಷ್ಟ ಪ್ರಕರಣ ಗ್ರಂಥವಾದ ತತ್ವೋದ್ಯೋತ ಪಾಠಪ್ರಾರಂಭವಾಯಿತು. ಮಧ್ಯೆಮಧ್ಯೆ "ದ್ವೈತದ್ಯುಮಣಿ"ಯ ವಾಕ್ಯಾರ್ಥ ಗಳನ್ನೂ ವಿವರಣೆಗಳನ್ನೂ ಶ್ರೀಗಳವರು ಉಲ್ಲೇಖಿಸುತ್ತಿದ್ದರು. ಅಲ್ಲದೇ ತಮ್ಮ ನೂತನ ಪ್ರಕ್ರಿಯೆಗಳನ್ನೂ ವಿವರಣೆಗಳನ್ನೂ ಮಂಡಿಸುತ್ತಿದ್ದರು.

ಅನೇಕ ವಿದ್ವಾಂಸರು ಮಧ್ಯದಲ್ಲಿ ಅನೇಕ ಸಂದೇಹ ಪರಿಹಾರಕ ಪ್ರಶ್ನೆ ಗಳನ್ನು ಕೇಳುತ್ತಿದ್ದರು. ಶ್ರೀಗಳವರು ಅವರೆಲ್ಲರಿಗೂ ಸಯುಕ್ತಿಕ ಸಪ್ರಮಾಣ ಸಮಾಧಾನಗಳನ್ನು ಒದಗಿಸಿ ಸಂತೋಷ ಪಡಿಸುತ್ತಿದ್ದರು. ತಿಂಗಳೊಪ್ಪತ್ತು ಏಕ ಪ್ರಕಾರ ಈ ಪಾಠಕ್ರಮ ನಡೆಯಿತು. ವಿದ್ವಾಂಸರು ವಿದ್ಯಾರ್ಥಿಗಳು ಶ್ರೀಗಳವರ ನೂತನ ಶೈಲಿಯ ಪ್ರೌಢಪಾಠಕ್ರಮವನ್ನು ಶ್ರವಣಮಾಡಿ ಜ್ಞಾನ ಭಾಂಡಾರವನ್ನು ಬೆಳೆಸಿಕೊಂಡರು. ಜ್ಞಾನ ಪಿಪಾಸೆಯನ್ನು ಕೆಲಮಟ್ಟಿಗೆ ಅಡಗಿಸಿಕೊಂಡರು.

"ದ್ವೈತ ದ್ಯುಮಣಿಯ ಮೇಲೆ ತತ್ವದ್ಯೋತ ಪಾಠ ಹೇಳುವದು ಪರಿಶ್ರಮ ಸಾಧ್ಯ. ನಮ್ಮಂಥವರಿಗೇ ಅರಗಲಾಗದ ಅನೇಕ ವಿಷಯಗಳಿವೆ" ಎನ್ನುತ್ತಿದ್ದರು ಶ್ರೀಗಳವರು. ದ್ವೈತದ್ಯುಮಣಿಯ ಮಂಗಳಾಚರಣ ಶ್ಲೋಕ ಗಳನ್ನು ನೋಡಿದರೆ ಈ ಗ್ರಂಥವು ಶ್ರೀ ಶ್ರೀಸತ್ಯಸಂಕಲ್ಪರ ಕಾಲದಲ್ಲಿ ರಚನೆ ಯಾಗಿರಬೇಕು. ಶಕೆ ಸುಮಾರು 1760ರ ಸುಮಾರಿಗೆ ಶ್ರೀಗಳವರು ಹುಲಿಗೀ ಕ್ಷೇತ್ರಕ್ಕೆ ಹೋಗಿದ್ದು ಸುಮಾರು ಶಕೆ. 1795.

ಶ್ರೀಪಾದಂಗಳವರು ಶ್ರೀಹುಲಿಗೀಆಚಾರ್ಯರ ಆತಿಥ್ಯವನ್ನು ಸ್ವೀಕಾರ ಮಾಡಿ ಮುಂದೆ ಪರಸ್ಥಳಕ್ಕೆ ಪ್ರಯಾಣ ಬೆಳೆಸಿದರು. ಜ್ಞಾನ ಸಮುದ್ರರೆಂದೆ ನಿಸಿದ ಶ್ರೀಪಾದಂಗಳವರನ್ನು ದೇವಾಂಶಸಂಭೂತರೆಂದು ಸಮಕಾಲೀನ ವಿದ್ವಾಂಸರು ಮುಕ್ತ ಕಂಠದಿಂದ ಶ್ಲಾಘಿಸಿ ಕೃತಕೃತ್ಯರಾದೆವೆಂದು ಕೊಂಡು ಸ್ವಸ್ಥಳಗಳಿಗೆ ತೆರಳಿದರು.

**ಸಂಸ್ಥಾನ ಮುಖ್ಯಾಧಿಕಾರ :**

ಶ್ರೀಗಳವರ ನಂತರ ಸಂಸ್ಥಾನದ ಜವಾಬ್ದಾರಿ ದಿವಾನರ ಮೇಲಿರುತ್ತದೆ. ವಾಯಿ ಶ್ರೀನಿವಾಸಾಚಾರ್ಯರಿಗೆ ಆಶ್ರಮವಾದ ದಿನದಿಂದಲೂ ವಾಯಿ ವಾಸುದೇವಾಚಾರ್ಯರೇ ಸಂಸ್ಥಾನದ ಮುಖ್ಯಾಧಿಕಾರವನ್ನು ವಹಿಸಿಕೊಂಡಿದ್ದರು. "ಶ್ರೀಸತ್ಯಸಂಕಲ್ಪಗುರುರಾಜ" ಎಂಬ ಮೋಹರುಂಗುರವನ್ನು ಸಂಸ್ಥಾನದ ಮುದ್ರೆಯನ್ನಾಗಿ ಮಾಡಿಕೊಂಡು ಎಲ್ಲ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದರು.

ಕೆಲಕಾಲಾನಂತರ ಶ್ರೀಪಾದರ ಪೂರ್ವಾಶ್ರಮ ಪುತ್ರರಾದ ಶ್ರೀ ಭೀಮ ಬಾಳಾಚಾರ್ಯರಿಗೆ ಮುಖ್ಯಾಧಿಕಾರವಹಿಸಬೇಕೆಂಬ ಇಚ್ಛೆಆಯಿತು. ಆ ಬಗ್ಗೆ ವಾಸುದೇವಾಚಾರ್ಯರ ಸಂಗಡ ಶ್ರೀಗಳವರ ಸಂಗಡ ಸಾಕಷ್ಟು ವಿಚಾರಣೆ ಆಯಿತು. ವಾಸುದೇವಾಚಾರ್ಯರು ಸುಲಭವಾಗಿ ಅಧಿಕಾರವನ್ನು ಬಿಟ್ಟು ಕೊಡಲು ಒಪ್ಪಲಿಲ್ಲ. ಆದ್ದರಿಂದ ಉಭಯತರಿಗೂ ವಿವಾದವಾಯಿತು.

ಈ ವಿವಾದವನ್ನು ಸಮಾಧಾನದಿಂದ ಪರಿಹರಿಸಲು ಶಾನುಭೋಗ ಶ್ಯಾಮಾಚಾರ್ಯರನ್ನು ಕರೆಯಿಸಲಾಯಿತು. ಅವರಿಂದಲೂ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗಲಿಲ್ಲ. ಉಭಯತರೂ ಸ್ವಪಕ್ಷ ಸಾಧನೆಯಲ್ಲಿ ಹಠಾತ್ತಾದ ನಿಲುವನ್ನೇ ತಾಳಿದ್ದರು.

ಸಂಸ್ಥಾನದಲ್ಲಿ ಈ ವಿವಾದಸ್ಪದ ಸ್ಥಿತಿಯನ್ನು ನಿವಾರಿಸಲು ಶ್ರೀಗಳವರ ಆಜ್ಞಾನುಸಾರವಾಗಿ "ದಿಗ್ವಿಜಯ ರಾಮೋ ವಿಜಯತೆ, ಉತ್ತರಾದಿಮಠ" ಎಂಬ ಇನ್ನೊಂದು ಮೋಹರುಂಗುರವನ್ನು ತಯಾರು ಮಾಡಿಸಿ ಶ್ರೀಭೀಮ ಬಾಳಾಚಾರ್ಯರಿಗೆ ಮುಖ್ಯಾಧಿಕಾರದೊಂದಿಗೆ ಮುದ್ರಿಕೆಯನ್ನು ಕೊಡಲಾಯಿತು.

ಶ್ರೀ ವಾಸುದೇವಾಚಾರ್ಯರು ಮುಖ್ಯಾಧಿಕಾರ ವಿಸರ್ಜನೆ ಮಾಡಿದ ಅಸಮಾಧಾನ ಪರಿಹಾರಕ್ಕಾಗಿ ವಿಪುಲ ಹಣ ಪಡೆದು ಸಮಾಧಾನಹೊಂದಿದರು. ಶ್ರೀಗಳವರ ಕಾಲಾವಧಿಪರೆಗೆ ಶ್ರೀಪಾದರ ಪೂರ್ವಾಶ್ರಮದ ಪುತ್ರರೇ ದಿವಾನರಾಗಿ ಸಂಸ್ಥಾನದ ಕಾರ್ಯಭಾರವನ್ನು ನಿರ್ವಹಿಸಿದರು.

## ಬಾಗಲಕೋಟೆಯ ದಿಗ್ವಿಜಯ :

ಸಂಚಾರ ಕ್ರಮದಿಂದ ಶ್ರೀಗಳವರು ಒಮ್ಮೆ ಬಾಗಲಕೋಟಿಗೆ ದಯ ಮಾಡಿಸಿದರು. ಅಲ್ಲಿ ಒಂದು ತಿಂಗಳಕಾಲವಿದ್ದು ಶಿಷ್ಯ ಸಮುದಾಯದ ಪ್ರಾರ್ಥನಾನುಸಾರ ತತ್ವಪ್ರಕಾಶಿಕಾ ಪಾಠ ಹೇಳಿದರು. ಬಾಗಲಕೋಟೆಯು ಬ್ರಾಹ್ಮಣ್ಯದ ಮತ್ತು ವಿದ್ವಾಂಸರ ನೆಲೆಬೀಡಾಗಿತ್ತು.

ಅದೇ ಸಮಯದಲ್ಲಿ ಅಲ್ಲಿ ಚತುಃಶಾಸ್ತ್ರ ಪಂಡಿರಾದ ಬಾಗಲಕೋಟೆಯ ಸ್ವಾಮಿರಾಯಾಚಾರ್ಯರೆಂಬ ಸುಪ್ರಸಿದ್ಧ ಘನವಿದ್ವಾಂಸರಿದ್ದರು. ಅವರ ಜ್ಞಾನವು ಪ್ರಖರವಾಗಿತ್ತು. ನ್ಯಾಯಶಾಸ್ತ್ರ ಅಧ್ಯಯನದಲ್ಲಿ ಗುಣದೋಷ ಗಳೆರಡೂ ಅಡಗಿವೆ. ಕೇವಲ ಈ ಶಾಸ್ತ್ರದಲ್ಲಿ ಪ್ರವೀಣರಿಗೆ ಗುಣವೆಂದರೆ ಇವರು ಒಳ್ಳೆಯ ವಾದಮಲ್ಲರು. ದೋಷವೆಂದರೆ ಸುಮ್ಮನಿದ್ದವರನ್ನೂ ವಾದರಂಗಕ್ಕೆಳೆಯುವ ಉತ್ಕಟೇಚ್ಛೆ. ಈ ಎರಡೂ ಗುಣಗಳೂ ಸ್ವಾಮಿರಾಯ ಚಾರ್ಯರಲ್ಲಿದ್ದವು. ಇವು ಖಂಡಿತವಾಗಿಯೂ ಅವರ ವೈಯಕ್ತಿಕ ದೋಷ ವಲ್ಲ. ಅವರು ಪ್ರಾವಿಣ್ಯತೆ ಪಡೆದ ನ್ಯಾಯಶಾಸ್ತ್ರದ ದೋಷ. ಇವರು, ಶಾಲು ಹೊತ್ತವರನ್ನೆಲ್ಲ ವಾದಕ್ಕೆಳೆದಾಗ ಕೆಲವು ವಿದ್ವಾಂಸರ ಕ್ಲೇಶಕ್ಕೆ ಕಾರಣ ವಾಯಿತು. ಪರಮತದವರನ್ನು ಜಯಿಸುವದಿರಲಿ, ಸ್ವಮತೀಯರೂ ಸಹ ಆತಂಕಕ್ಕೊಳಗಾದರು. ಒಬ್ಬ ಯತಿಗಳು ಕೂಡ ಇವರ ಸಂಪರ್ಕದಿಂದ ಕ್ಲೇಶಕ್ಕೊಳಗಾಗತಕ್ಕ ಸಂದರ್ಭ ಬಂದಿತು.

ಇದೆಲ್ಲವನ್ನೂ ಅರಿತ ಶ್ರೀಗಳವರು ಸ್ವಾಮಿರಾಯಾಚಾರ್ಯರ ಆಗ್ರಹ ಸ್ವಭಾವಭಂಗಕ್ಕಾಗಿ ಅವರು ಇಷ್ಟಪಟ್ಟ ನ್ಯಾಯಶಾಸ್ತ್ರದಲ್ಲಿಯೇ ವಾಕ್ಯಾರ್ಥ ಮಾಡಿದರು. ತಾಸೆರಡು ತಾಸುಗಳಲ್ಲಿ ಶ್ರೀಗಳವರ ಅನಿರೀಕ್ಷಿತವಾದ ಪ್ರಖರ ಪಾಂಡಿತ್ಯದ ತೀಕ್ಷ್ಣತೆಯ ಅರಿವಾಯಿತು. ಪರರಿಗೆ ಕೊಟ್ಟ ಕ್ಲೇಶಾನುಭವವು

ಆಗ ಅವರೇ ಅನುಭವ ಪಡುವ ಸಮಯಬಂತು. ಸ್ವಾಮಿರಾಯಾಚಾರ್ಯರಿಗೆ ನ್ಯಾಯಶಾಸ್ತ್ರ ಪ್ರಾಬಲ್ಯದಿಂದುಂಟಾದ ಸಾಂಸರ್ಗಿಕ ದೋಷವು ದೂರವಾಗುವ ಕಾಲ ಪ್ರಾಪ್ತವಾಯಿತು. ದುರಾಗ್ರಹದಿಂದ ವಿದ್ಯೆಯು ಕಳೆಗುಂದುವದೆಂದು ಶ್ರೀಗಳವರು ತೋರಿಸಿಕೊಟ್ಟರು. ಸ್ವಾಮಿರಾಯಾಚಾರ್ಯರು ಶ್ರೀಗಳವರ ಆದೇಶವನ್ನು ಮಾನ್ಯ ಮಾಡಿ ಮುಂದೆ ಆಗ್ರಹದ ಮಾರ್ಗವನ್ನು ತ್ಯಜಿಸಿದ ರೆಂದು ತಿಳಿದುಬರುತ್ತದೆ.

ನಿತ್ಯ ಪ್ರಾತಃಕಾಲ ಶಾಸ್ತ್ರಪಾಠದಲ್ಲಿ ಶ್ರೀಗಳವರ ಮುಖಾರವಿಂದದಿಂದ ನಿಸೃತವಾದ ಅವರ ಅಸಾಧಾರಣ ವಿದ್ವತ್ತಿನ ಹಿರಿಮೆ, ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಅವರ ನೆಲೆ ನಿಲುಕದ ನಿತ್ಯನೂತನ ಶಾಸ್ತ್ರ ಜ್ಞಾನ ವ್ಯಂಜ ಕತ್ವಾದಿಗುಣಗಳು ಎಲ್ಲ ವಿದ್ವಾಂಸರನ್ನೂ ಬೆರಗುಗೊಳಿಸಿದ್ದವು. ಇದಕ್ಕೆ ಸ್ವಾಮಿರಾಯಾಚಾರ್ಯರೂ ಹೊರತಲ್ಲ.

ಶ್ರೀಗಳವರು, ಸ್ವಾಮಿರಾಯಾಚಾರ್ಯರಿಗೂ ಉಪನ್ಯಾಸ ಸಮಯ ದಲ್ಲಿ ಅವರ ವಿದ್ವತ್ಪ್ರದರ್ಶನಕ್ಕೆ ಸದವಕಾಶ ಕಲ್ಪಿಸಿದರು. ಆಚಾರ್ಯರೂ ಸಹ ತಮ್ಮ ಚತುಃಶಾಸ್ತ್ರ ಕೌಶಲವನ್ನು ತಮ್ಮ ಉಪನ್ಯಾಸ ವಾಕ್ಝರಿಯಲ್ಲಿ ಪ್ರದರ್ಶನ ಮಾಡಿದರು. ಶ್ರೀಗಳವರು ಸಹ ಪರಮ ಸಂತುಷ್ಟರಾಗಿ ಅವರನ್ನು ಗೌರವದಿಂದ ಪಲ್ಲಕ್ಕಿಯಲ್ಲಿ ಕೂಡ್ರಿಸಿ ಮನೆಗೆ ಕಳುಹಿಸಿಕೊಟ್ಟರು.

ತರುವಾಯ ಶ್ರೀಗಳವರನ್ನು ಪ್ರಾರ್ಥಿಸಿ ಪಲ್ಲಕ್ಕಿಮರ್ಯಾದೆಯನ್ನು ತಮಗೆ ಕೊಟ್ಟ ವಿಷಯದಲ್ಲಿ ಶ್ರೀಗಳವರಿಂದ ಒಂದು ರಾಯಸ ಪಡೆಯ ಬೇಕೆಂದು ಇಚ್ಛಿಸಿ ಶ್ರೀಗಳವರಲ್ಲಿ ಬೇರೆಯವರಿಂದ ವಿಜ್ಞಾಪನೆ ಮಾಡಿಸಿದರು. ಆದರೆ ಶ್ರೀಗಳವರಿಗೆ, ಆ ದಿನ ಅವರಿಗಿತ್ತ ಪಲ್ಲಕ್ಕಿ ಮರ್ಯಾದೆಯನ್ನು ಶಾಶ್ವತ ಗೊಳಿಸುವ ಇಷ್ಟವಿರಲಿಲ್ಲ. ನಿಷೇಧಿಸುವದಕ್ಕೆ ದಾಕ್ಷಿಣ್ಯವಾಯಿತು. ರಸಿಕ ಶಿರೋಮಣಿಗಳಾದ ಶ್ರೀಗಳವರು, "ಈ ಪಲ್ಲಕ್ಕಿ ಮರ್ಯಾದೆಯನ್ನು ನಾವು ಪರಲೋಕದಲ್ಲಿಯೂ ಪಡೆಯಬೇಕೆಂಬ ಸ್ವಾರ್ಥದಿಂದಲೇ ನಾವು ಆ ದಿನ ಕೊಟ್ಟಿವಲ್ಲದೇ ಅದು ನಿಮ್ಮ ಗೋಸ್ಕರವಲ್ಲ. ಅದರಲ್ಲಿ ಪರಾರ್ಥಕ್ಕಿಂತಲೂ ಸ್ವಾರ್ಥವೇ ಬಹಳವಾಗಿದೆ" ಎಂದು ಶ್ರೀ ಆಚಾರ್ಯರಿಗೆ ತಿಳಿಸುವದಾಗಿ ಆಜ್ಞೆ ಇತ್ತು ತಮ್ಮ ನಿಸ್ಸೀಮ ಚಾತುರ್ಯವನ್ನು ಪ್ರದರ್ಶನಮಾಡಿದರು. ತದನಂತರ ಬಾಗಲಕೋಟೆಯಿಂದ ಪ್ರಯಾಣ ಮಾಡಿದರು.

**ತುಳಜಾಪುರ ದಿಗ್ವಿಜಯ :**

ಈ ಸಮಯದೊಳಗಾಗಿ ಶ್ರೀ ಮಠದಲ್ಲಿ ಶಿಷ್ಯ ಸಂಖ್ಯೆ ಅಪರಿಮಿತವಾಗಿ ಬೆಳೆದಿದ್ದಿತು. ಬೃಹದಾಕಾರದ ಸಂಸ್ಥಾನವು ಸಿಬ್ಬಂದಿಯೊಡನೆ ತುಳಜಾಪುರಕ್ಕೆ ದಿಗ್ವಿಜಯಮಾಡಿದರು.

ತುಳಜಾಪುರದಲ್ಲಿ ಉಪಸ್ಥಿತಳಾದ ತುಳಜಾಭವಾನಿಯು ಅನೇಕರಿಗೆ ಕುಲದೇವತೆ ಮತ್ತು ಆ ಊರಿಗೆ ಗ್ರಾಮದೇವತೆಯೂ ಆಗಿದ್ದಾಳೆ. ತುಳಜಾ ಭವಾನಿಯು ಶ್ರೀಗಳವರ ಪೂರ್ವಾಶ್ರಮದ ಕುಲದೇವತೆ. ಆಗ ಅವರಿಗೆ ಕುಲದೇವತೆಯನ್ನು ದರ್ಶನ ಮಾಡಬೇಕೆಂಬ ಉತ್ಕಟಾಕಾಂಕ್ಷೆಯೇನೋ ಇತ್ತು. ಆದರೆ ಅದು ಈಡೇರಲೇ ಇಲ್ಲ. ಪ್ರಕೃತ ಅವರು ತುಳಜಾಪುರಕ್ಕೆ ತಲುಪಿದಾಗ, ತುಳಜಾಭವಾನಿಯ ಸನ್ನಿಧಿಗೆ ಕುಲದೇವತೆ ಎಂದಾಗಲೀ ಅಥವಾ ಗ್ರಾಮದೇವತೆಯೆಂದಾಗಲೀ ದರ್ಶನ ಮಾಡುವ ಪ್ರಸಕ್ತಿ ಇಲ್ಲವೆಂದು ಭಾವಿಸಿದರು.

ಶ್ರೀ ಮಠವು ಅಲ್ಲಿಗೆ ತಲುಪಿದ ಒಂದೆರಡು ದಿನಗಳಲ್ಲಿಯೇ ತುಳಜಾ ಭವಾನಿಯು ಝುಗಝುಗಿಸುವ ಆಭರಣಗಳಿಂದ ಶೋಭಾಯಮಾನವಾಗಿ ದೇವತಾರೂಪದಲ್ಲಿ ಶ್ರೀಗಳವರಿಗೆ ಸ್ವಪ್ನ ದರ್ಶನವನ್ನಿತ್ತು ಇಂತು ನುಡಿದಳು, "ಆರ್ಯರೇ, ನಾವು ಶ್ರೀಹರಿಯಾಜ್ಞಾಧಾರಕರು ಹರೀಚ್ಛೆಯ ಪ್ರಕಾರ ಈಗ ಈ ಊರಿನಲ್ಲಿ ಮಾರಿಕಾಬೇನೆ ಪ್ರಸರಿಸಿದೆ. ಇಲ್ಲಿ ಅನೇಕರಿಗೆ ಮೃತ್ಯು ಸಮೀಪಿಸಿದೆ. ಈ ಸಮಯದಲ್ಲಿ ತಾವು ಇಲ್ಲಿ ಬಹಳದಿನಗಳಿರುವದು ಉಚಿತ ವೆನಿಸದು. ತಮ್ಮ ಜನರಿಗೆ ತ್ರಾಸವಾಗಬಾರದು. ಆದರೆ ತಾವು ನಮಗೆ ಶ್ರೀರಾಮನ ದರ್ಶನ ಮಾಡಿಸದೇ ಈ ಸ್ಥಳದಿಂದ ಮುಂದೆ ಪ್ರವಾಸ ಮಾಡ ಬೇಡಿರಿ." ಎಂದು ಹೇಳಿ ಅದೃಶ್ಯಳಾದಳು.

ದೇವಿಯ ದರ್ಶನದಿಂದ ಶ್ರೀಗಳವರು ಪುಳಕಾಂಕಿತರಾದರು. ಶ್ರೀಮಠದ ಪರಿವಾರಕ್ಕೆ ಈ ಸ್ವಪ್ನ ವೃತ್ತಾಂತವನ್ನು ತಿಳಿಸಿ, ಭವಾನಿಯದೇವಾಲಯ ದಲ್ಲಿಯೇ ಒಂದು ಪ್ರಶಸ್ತ ಸ್ಥಳದಲ್ಲಿ ಶ್ರೀ ರಾಮನ ಪೂಜೆಯನ್ನು ನೆರವೇರಿಸಿ ದರು. ದೇವಿಗೆಸಲ್ಲಬೇಕಾದ ಕಾಣಿಕೆ, ಅರ್ಚನೆಗಳನ್ನೂ ಅರ್ಚಕರ ಮೂಲಕ

ಸಲ್ಲಿಸಿದರು. ದೇವಿಯು ಸುಪ್ರೀತಳಾದಳು. ಮಠದಲ್ಲಿ ಒಬ್ಬಿಬ್ಬರಿಗೆ ಮಾರಿಕಾ ಸ್ಪರ್ಶವಾದರೂ ಉಗ್ರರೂಪತಾಳಲಿಲ್ಲ. ಆದಷ್ಟು ತೀವ್ರ ಶ್ರೀಗಳವರು ಇಂದೂರಿಗೆ ಪ್ರಯಾಣ ಬೆಳೆಸಿದರು.

ಶ್ರೀಮಠವು ತುಳಜಾಪುರದಿಂದ ನೇರವಾಗಿ ಇಂದೂರಿಗೆ ದಿಗ್ವಿಜಯ ಬೆಳೆಸಿದರು. ಮಾರಿಕಾ ಇತ್ಯಾದಿಗಳಿಂದ ನೊಂದ ಮಠದ ಶಿಬ್ಬಂದಿಯ ಜನರು ಅನೇಕವಾಗಿ ಆಕ್ಷೇಪಣೆ ತೆಗೆದು ಶ್ರೀಗಳವರಿಗೆ ತೊಂದರೆ ಕೊಡಲಾರಂಭಿಸಿದರು. ಆದರೆ ಶ್ರೀಗಳವರು ಶಾಂತತೆಯಿಂದ ಅವರ ಆತಂಕ ಆಕ್ಷೇಪಣೆಗಳನ್ನು ವಿಚಾರ ಮಾಡಿ ಎಲ್ಲವನ್ನೂ ನಯಗೊಳಿಸಿದರು. ಅಲ್ಲಿ ಹೆಚ್ಚಿಗೆ ದಿನ ಬೀಡಾರ ಮಾಡಲಿಲ್ಲ. ಮುಂದೆ ಉತ್ತರ ಹಿಂದುಸ್ತಾನದ ಕಡೆಗೆ ಸಾಗದೇ ಶ್ರೀಮಠವು ಹಿಂತಿರುಗಿ ಬಲಕುಂದಿ ಎಂಬಲ್ಲಿಗೆ ಬಂದಿತು.

## ಗಣನೀಯ ಶಿಷ್ಯ ಸಂಪತ್ತು
### (ಗ್ರಂಥಾಂತರ ಉಲ್ಲೇಖಗಳು)

ಶ್ರೀ ಗೋರಬಾಳ ಹನುಮಂತರಾಯರು 1964ರಲ್ಲಿ ಪ್ರಕಟಿಸಿದ್ದ, ಶ್ರೀಹರಿಕಥಾಮೃತಸಾರ ಟೀಕಾ ಪಂಚರತ್ನ ಪ್ರಕಾಶಿಕಾ ಭಾಗ-೬ರಲ್ಲಿ ಶ್ರೀಸತ್ಯ ಪರಾಕ್ರಮತೀರ್ಥರ ಮತ್ತು ಅವರ ಪೂರ್ವಾಶ್ರಮದ ಪ್ರಮುಖ ಶಿಷ್ಯರ ಉಲ್ಲೇಖವು ಗಮನಾರ್ಹವೂ ಮತ್ತು ಮನನೀಯವೂ ಆಗಿದೆ. ಅವರ ಬರಹ ವನ್ನೇ ಇಲ್ಲಿ ಸಂದರ್ಭೋಚಿತವಾಗಿ ಪ್ರಕಟಿಸಲಾಗಿದೆ.

"ಶ್ರೀ ಶ್ರೀಸತ್ಯಪರಾಕ್ರಮರ ಪೂರ್ವಾಶಮದ ಹೆಸರು ಶ್ರೀವಾಯಿ ಶ್ರೀನಿವಾಸಾಚಾರ್ಯರು. ಶ್ರೀಗುರು ಪ್ರಾಣೇಶದಾಸರ ಪರಮೋತ್ತಮ ಸ್ನೇಹಿತರೂ, ದೇವಾಂಶರೂ, ಅಪರೋಕ್ಷ ಜ್ಞಾನಿಗಳೂ ಆದ ಇವರು ವರ್ಷ ಕ್ಕೊಂದು ಸಲವಾದರೂ ಲಿಂಗಸೂಗೂರಿಗೆ ಆಗಮಿಸಿ ಶ್ರೀವರದೇಂದ್ರರನ್ನು ಸಂದರ್ಶಿಸಿ ಪರಮಾನಂದದಿಂದ ಶ್ರೀಗುರು ಪ್ರಾಣೇಶದಾಸರು ಅಪರೋಕ್ಷಿಗಳ ಸಂಗಡ ಅನೇಕ ಶಾಸ್ತ್ರಾರ್ಥವಿಚಾರ, ಇತರ ಪಂಡಿತ ಶಿಷ್ಯರಿಗೆ ಚತುಶ್ಶಾಸ್ತ್ರ ಬೋಧಿಸುತ್ತಿದ್ದರೆಂದು ಇತಿಹಾಸ. ಇಂಥ ಚತುಶ್ಶಾಸ್ತ್ರ ಪಂಡಿತೋತ್ತಮರು

ಶ್ರೀ ಸ್ವಾದೀ ಗುರುರಾಜರ ಭಕ್ತರಾಗಿದ್ದರು. ಇವರು ಉತ್ತರಾದೀ ಮಠಾಧೀಶ ರಾದ ಶ್ರೀ ಶ್ರೀ ೧೦೮ ಸತ್ಯೇಷ್ಟ ತೀರ್ಥ ಶ್ರೀಪಾದಂಗಳವರಿಂದ ಶ. ೧೮೪೪ಳ ಅಂಗೀರಸ ನಾಮಸಂವತ್ಸರ ಭಾದ್ರಪದಶುದ್ಧ ೧೦ ತಮ್ಮ ೪೮ನೇ ವಯಸ್ಸಿನಲ್ಲಿ ಶ್ರೀ ಶ್ರೀ ೧೦೮ ಶ್ರೀಸತ್ಯಪರಾಕ್ರಮತೀರ್ಥರೆಂದು ಆಶ್ರಮ ಸ್ವೀಕರಿಸಿದರು. ಪೂರ್ವಾಶ್ರಮದಲ್ಲಿಯೂ ಆಶ್ರಮವಾದ ನಂತರದಲ್ಲಿಯೂ, ಇವರಲ್ಲಿ ಅಧ್ಯಯನ ಮಾಡಿದ ಶಿಷ್ಯರು ಮಹನೀಯರಾದ ಜ್ಞಾನಿಗಳೂ ಪಂಡಿತೋತ್ತಮರೂ ಆಗಿರುವರು.

ಜ್ಞಾನಿಗಳೂ ಅವಧೂತರೂ ಆದ ಶ್ರೀ ಜಂಬುಖಂಡಿ ವಾದಿರಾಜಾ ಚಾರ್ಯರು (ಶ್ರೀಹರಿಕಥಾಮೃತಸಾರಕ್ಕೆ ಭಾವಸೂಚನೆ ಮತ್ತು ವ್ಯಾಸದಾಸ ಸಿದ್ಧಾಂತ ಕೌಮುದಿ ರಚಿಸಿದ ಮಹಾನುಭಾವರು) ಮತ್ತು ಸುಪ್ರಸಿದ್ಧ ಪಂಡಿತರೂ ಗುರುರಾಜರ ಭಕ್ತರೂ ಪೂರ್ವಾಶ್ರಮದ ಕೋಡಂಗಲ್ ವೆಂಕಪ್ಪಾ ಚಾರ್ಯರೇ ಮೊದಲಾದವರು ಆಗಮಿಸಿ, ಸಕಲಶಾಸ್ತ್ರ ಅಭ್ಯಾಸ ಮಾಡುತ್ತ ಉಪನಿಷತ್‌ಪಾಠಗಳನ್ನು ಬೋಧಿಸುವದನ್ನು ಮನನ ಮಾಡಿ ಪೂತರಾದರು. ನಂತರ ಶ್ರೀಕೋಡಂಗಲ್ ವೆಂಕಪ್ಪಾಚಾರ್ಯರು ಶ್ರೀ ಅಕ್ಷೋಭ್ಯತೀರ್ಥರ ಪರಂಪರೆಯಲ್ಲಿ ಕೂಡಲೀ ಮಠಾಧೀಶರಾದ ಶ್ರೀ ರಘುದಾಂತರಿಂದ ಆಶ್ರಮ ಸ್ವೀಕಾರ ಮಾಡಿ ಶ್ರೀ ಶ್ರೀ ರಘುಕಾಂತ ತೀರ್ಥರೆಂದು ಸುಪ್ರಸಿದ್ಧರಾದರು. ಶ್ರೀಗಳವರು ಚತುಶ್ಶಾಸ್ತ್ರ ಪಂಡಿತರಲ್ಲದೇ ಪೂರ್ವಮೀಮಾಂಸಾದ್ಯುಕ್ತಯಜ್ಞ ಯಾಗಾದಿ ಕರ್ತರೂ, ತಪೋನಿಷ್ಠರೂ, ಶಾಪಾನುಗ್ರಹ ಶಕ್ತರೂ ಆದ ಶ್ರೀರಘುಕಾಂತರು ಶ್ರೀಗುರುರಾಜರ ಅನುಗ್ರಹದಿಂದ ಎನಗೆ ಗುರುಗಳಾದರು. ಹನ್ನೆರಡುವರ್ಷ ಬಿಡದೆ ಇವರನ್ನು ಸೇವಿಸಿ, ಶಾಸ್ತ್ರ ಓದುವಾಗ್ಗೆ ಪೂರ್ವಾ ಶ್ರಮದ ತಮ್ಮ ಗುರುಗಳ ಮಹಿಮೆ ಹೇಳುತ್ತಾ, ದೇವಾಂಶರೂ ಅಶ್ವಿನೀ ದೇವತೆಗಳ ಅವತಾರರೂ ಆದ ಶ್ರೀ ಶ್ರೀ ಸತ್ಯಪರಾಕ್ರಮತೀರ್ಥರ ಅನುಗ್ರಹ ದಿಂದಲೇ ವೇದಾಂತ ಶಾಸ್ತ್ರದಲ್ಲಿ ನಾವು ಕಿಂಚಿತ್ ಪಂಡಿತರಾಗಿದ್ದೇವೆ. ಉಪನಿಷತ್ ರಹಸ್ಯಗಳನ್ನು ಶ್ರೀ ಸತ್ಯಪರಾಕ್ರಮರ ತರುವಾಯ ಸಂಪ್ರದಾಯ ಪೂರ್ವಕವಾಗಿ ಹೇಳುವವರೇ ಇಲ್ಲವೆಂದು ಪದೇ ಪದೇ ಬೋಧಿಸುತ್ತಿದ್ದರು.

ಶ್ರೀ ಶ್ರೀ ಸತ್ಯಪರಾಕ್ರಮ ತೀರ್ಥರ ಸಂಸ್ಥಾನದಲ್ಲಿ ಒಬ್ಬ ನೀರಿನ ಭೀಮಣ್ಣನೆಂಬ ಶಿಷ್ಯನಿದ್ದನು. ಆತನು ನಿತ್ಯ ರಾತ್ರಿ ಶ್ರೀಗಳವರ ಅಹ್ನಿಕ ಕಾಲದಲ್ಲಿ ಶ್ರೀಹರಿಕಥಾಮೃತಸಾರ ಗ್ರಂಥ ನೋಡುತ್ತಿದ್ದನಂತೆ. ಒಂದು ದಿನ ಆತ ನೋಡುತ್ತಿದ್ದ ಗ್ರಂಥ ಶ್ರೀಗಳವರ ದೃಷ್ಟಿಗೆ ಬಿತ್ತು. "ಇದೇನೋ ಭೀಮಣ್ಣಾ ಕನ್ನಡಗ್ರಂಥ ತಾ ನೋಡೋಣ"ವೆಂದು ತೊಟ್ಟಿಲ ಪೂಜಾನಂತರ ಇಸಕೊಂಡು ಬೆಳಗುವರೆಗೆ ನೋಡಿ ಸಂತೋಷಭರಿತರಾದರಂತೆ.

ಶ್ರೀಗಳವರು ಸಕಲ ಶಾಸ್ತ್ರಾರ್ಥಪೂರಿತ 'ಪ್ರಮೇಯ ಮಾಲಾ' ಗ್ರಂಥ ೯೭ (ತೊಂಬತ್ತೇಳು) ನಾಮಗಳನ್ನು ರಚಿಸಿ ಪ್ರತಿನಿತ್ಯ ಶ್ರೀರಾಮಚಂದ್ರ ದೇವರಿಗೆ ತುಲಸೀ ಅರ್ಪಿಸುತ್ತಿದ್ದರಂತೆ."

ಶ್ರೀ ಗೋರಬಾಳ ಹನುಮಂತರಾಯರು ಶ್ರೀವಾಯಿ ಆಚಾರ್ಯರ ಪ್ರಶಿಷ್ಯರು. ತಮ್ಮ ಗುರುಗಳಿಂದ ಅನೇಕ ಯಥಾರ್ಥ ಸ್ಫೂರ್ತಿದಾಯಕ ವಿಷಯಗಳನ್ನು ವಾಯಿ ಆಚಾರ್ಯರ ಬಗ್ಗೆ ಶ್ರವಣ ಮಾಡಿದ್ದಾರೆ. ಅಲ್ಲದೇ ಲಿಂಗಸೂಗೂರು ಚಿತ್ತಾಪುರಕ್ಕೆ ನಿಕಟವರ್ತಿಯಾಗಿದೆ. ಆದ್ದರಿಂದಲೂ ಪೂರ್ವಾಶ್ರಮದ ಮತ್ತು ಯತ್ಯಾಶ್ರಮದ ವಿಷಯಗಳನ್ನು ತಿಳಿದು ಭಕ್ತಿಭಾವಗಳನ್ನು ಬೆಳೆಯಿಸಿ ಕೊಂಡವರಲ್ಲಿ ಇವರೂ ಒಬ್ಬರು. ಆದ್ದರಿಂದ ಅವರು ಬರೆದದ್ದನ್ನೇ ಇಲ್ಲಿ ಸಂಗ್ರಹಿಸುವದು ಸೂಕ್ತವೆಂದು ಪ್ರಕಟಿಸಲಾಗಿದೆ.

ಶ್ರೀಜಂಬುಖಂಡಿ ವಾದಿರಾಜಾರ್ಯರ ಚರಿತ್ರೆಯಲ್ಲಿಯೂ ಶ್ರೀವಾಯಿ ಶ್ರೀನಿವಾಸಾಚಾರ್ಯರ ಮತ್ತು ಶ್ರೀ ಶ್ರೀಸತ್ಯಪರಾಕ್ರಮರ ಉಲ್ಲೇಖಗಳಿವೆ. ಪುನರುಕ್ತಿಯಾಗುವದೆಂದು ಅದನ್ನು ಪುನಃ ಇಲ್ಲಿ ಸಂಗ್ರಹಿಸಿಲ್ಲ.

## ಶ್ರೀಗಳವರಿಂದ ರಚಿತವಾದ ಗ್ರಂಥಗಳು :

ಜನಸಾಮಾನ್ಯರನ್ನು ಕುರಿತು ಮಾಡುವ ಪ್ರವಚನಾದಿಗಳಿಗಿಂತಲೂ ಸ್ವಶಿಷ್ಯರಿಗೆ ಪಾಠ ಹೇಳಲು ಅಧಿಕ ಸಿದ್ಧತೆಯ ಅವಶ್ಯಕತೆ ಇದೆ. ಸ್ವಶಿಷ್ಯರಿಗೆ ಪಾಠ ಹೇಳುವದಕ್ಕಿಂತಲೂ ಪರಮತ ವಾದಿ ವೃಂದದೊಡನೆ ವಾದ ಮಾಡಿ ಜಯಿಸಿ ಪರಮತ ಖಂಡನ ಪೂರ್ವಕ ಸ್ವಮತ ಸ್ಥಾಪಿಸಲು ಇನ್ನೂ ಅಧಿಕ

ಶಾಸ್ತ್ರ ಪ್ರಾವಿಣ್ಯತೆ, ಧೈರ್ಯ, ಸ್ಥೈರ್ಯ ವಾದ ಚಾತುರ್ಯ ಮತ್ತು ಆತ್ಮ ವಿಶ್ವಾಸಗಳ ಅವಶ್ಯಕತೆ ಇದೆ. "ಶತಂ ವದ ಏಕಂ ಮಾಲಿಖ" ನೂರು ಮಾತನಾಡಬಹುದು ಆದರೆ ಒಂದನ್ನು ಬರೆಯಲು ಅಧಿಕ ಜಾಗರೂಕತೆಬೇಕು. ಮೇಲಿನ ಮೂರು ಸಿದ್ಧತೆಗಳಿಗಿಂತಲೂ, ಮುಮುಕ್ಷುಗಳಿಗೆ ಅಧ್ಯಾತ್ಮ ಮಾರ್ಗ ದರ್ಶಕ ನಿಶ್ಚಿತ ಜ್ಞಾನ ರೂಪ ಚಿರಕಾಲ ಉಳಿಯತಕ್ಕ ಗ್ರಂಥ ರಚನೆ ಮಾಡಲು ಅಧಿಕ ಪ್ರಾವಿಣ್ಯತೆ, ಬುದ್ಧಿತೀಕ್ಷ್ಣತೆ, ಪರೋಪಕಾರ ಇಚ್ಛೆ ಇತ್ಯಾದಿಗಳ ಅವಶ್ಯಕತೆ ಇದೆ. ಶ್ರೀಗಳವರಲ್ಲಿ ಈ ಪ್ರಾವಿಣ್ಯ ಚತುಷ್ಟಯ ಗಳನ್ನೂ ಕಾಣಬಹುದು.

ಶ್ರೀಗಳವರು ಶ್ರೀಮನ್ನ್ಯಾಯಸುಧಾದಲ್ಲಿಯ ಕೆಲವು ವಿಕ್ಷಿಪ್ಯ ಭಾಗ ಗಳಿಗೆ ಟಿಪ್ಪಣಿ ರಚನೆ, ಬ್ರಹ್ಮಸೂತ್ರಾರ್ಥವಿಚಾರ, ಮಾಯವಾದ ಖಂಡನ ಟಿಪ್ಪಣಿ, ನ್ಯಾಯಶಾಸ್ತ್ರದಲ್ಲಿ ಕೆಲವು ವಿಷಯಗಳ ಮೇಲೆ ಕ್ರೋಢ ಪತ್ರಗಳು, ಪ್ರಮೇಯಮಾಲಾ ಮತ್ತು ಶ್ರೀಸತ್ಯವರರ ಸ್ತೋತ್ರಗಳನ್ನು ರಚಿಸಿದ್ದಾರೆಂದು ಉಲ್ಲೇಖಗಳೂ ದಂತಕಥೆಗಳೂ ಇವೆ ಎಂದು ಕೇಳುತ್ತೇವೆ. ಆದರೆ ಈ ಗ್ರಂಥ ಪ್ರಕಟವಾಗುವ ಸಮಯದಲ್ಲಿ ನಮಗೆ ಉಪಲಬ್ಧವಾದ ಗ್ರಂಥಗಳು ಕೊನೆಯ ಎರಡು ಮಾತ್ರ.

ಮೊದಲನೆಯದು ಶ್ರೀ ಶ್ರೀ ಸತ್ಯವರರನ್ನು ಕುರಿತು ರಚಿಸಿದ ಕವನ ರೂಪ ೧೭ ಸುಂದರ ಶ್ಲೋಕ ರೂಪಸ್ತೋತ್ರ. ಈ ಸ್ತೋತ್ರವು ಶ್ರೀಸತ್ಯವರ ರಿಂದ ಅನುಮೋದಿತವಾದ ಸೂಚನೆಯೋ ಎಂಬಂತೆ ಬೃಂದಾವನವೇ ತಲೆದೂಗಿ ದಂತೆ ಕಂಪನವಾಯಿತಂತೆ. ಈ ಸ್ತೋತ್ರವು ಪರಿಶಿಷ್ಟ–೨ರಲ್ಲಿದೆ.

ಎರಡನೆಯದು 'ಪ್ರಮೇಯ ಮಾಲಾ' ಎಂಬ ಶಾಸ್ತ್ರಾರ್ಥಸಾರ. ಎಷ್ಟೋ ವಿಸ್ತಾರ/ಬೃಹತ್ ಗ್ರಂಥಗಳಿದ್ದರೂ ಕೆಲವು ಸಾರಭೂತವಾದ ಪುಟ್ಟ ಗ್ರಂಥಗಳು ಅವಶ್ಯವಾಗಿ ಬೇಕಾಗುತ್ತವೆ. ಪೂರ್ವಿಕರು ಹೇಳುವಂತೆ—

**ಅನಂತಶಾಸ್ತ್ರಂ ಬಹುವೇದಿತವ್ಯಂ ಅಲ್ಪಸ್ಯಕಾಲೋಬಹವಶ್ಚವಿಘ್ನಾಃ।**
**ಯತ್ಸಾರಭೂತಂ ತದುಪಾಸಿತವ್ಯಂಹಂಸೋಯಥಾಕ್ಷೀರಮಿವಾಂಬು**
**ಮಿಶ್ರಂ ॥**

'ಅನಂತಶಾಸ್ತ್ರಗಳಿವೆ, ತಿಳಿಯ ತಕ್ಕದ್ದು ಅಪಾರ, ಇರತಕ್ಕಕಾಲ ಅಲ್ಪ ಅದರಲ್ಲಿ ವಿಘ್ನಬಾಹುಲ್ಯ. ಆದ್ದರಿಂದ ಸಾಧಕರು ವಿಸ್ತಾರದಿಂದ ಉಧೃತವಾದ ಸಾರಭಾಗವನ್ನು ಕ್ಷೀರನೀರನ್ಯಾಯದಂತೆ, ಗ್ರಹಿಸಿ ಮನನ ಮಾಡಿ ಸಾಧನಾ ನುಷ್ಠಾನಗಳಿಂದ ಶ್ರೀಹರಿಯ ಕೃಪಾಪಾತ್ರರಾಗಬೇಕು."

ಈ ಪ್ರಮೇಯಮಾಲಾದಲ್ಲಿ ೯೭ ಸುಮನ ರೂಪನಾಮಗಳಿವೆ. ಪ್ರತಿ ಯೊಂದು ನಾಮವೂ 'ನಮಃ' ಎಂದು ಪರಿಯವಸಾನವಾಗುತ್ತದೆ. ಸುಮನ ಗಳನ್ನು ತುಳಸಿಯನ್ನು ಶ್ರೀಹರಿಗೆ ಸಮರ್ಪಿಸುವಾಗ ನಾವು 'ನಮಃ' ಪೂರ್ವಕವಾಗಿ ನಾಮದೊಂದಿಗೆ ಅರ್ಪಿಸುವೆವಲ್ಲವೇ ; ಹಾಗೆಯೇ ಇಲ್ಲಿಯೂ ಸಹ.

ಪ್ರಮೇಯ ಮಾಲಾದಲ್ಲಿ ಬ್ರಹ್ಮಸೂತ್ರಗಳಿಂದ, ಉಪನಿಷತ್ತುಗಳಿಂದ, ಭಾಗವತದಿಂದ ಸಾರಸಂಗ್ರಹಿಸಿದ್ದಾರೆ. ಸೃಷ್ಟಿಸ್ಥಿತ್ಯಾದಿ ಚಿಂತನಕ್ರಮ ಪರಮಾತ್ಮನ ವಿಲಕ್ಷಣ ಮಹಾತ್ಮೆಗಳು, ಮಾಧ್ವಮತದ ಮುಖ್ಯ ಪ್ರಮೇಯ ವಾದ ಸರಹಸ್ಯದ್ಯೋತಕ ದೇವತಾ ತಾರತಮ್ಯ ಇತ್ಯಾದಿ ವಿಷಯಗಳು ಸಂಗೃಹೀತವಾಗಿ, ಪಾಠಕರಿಗೆ ಸರ್ವಶಾಸ್ತ್ರಾರ್ಥಸಂಗ್ರಹ ರೂಪವಾಗಿ ಮನನ ಯೋಗ್ಯವಾಗಿದೆ ಈ ಕೃತಿರತ್ನ. ಪಠನ ಮನನಾದಿಗಳಿಂದ ಶ್ರೀಹರಿ ಪ್ರೀತಿ.

ಈ ಕೃತಿಯು ಸ್ವಲ್ಪ ಹೆಚ್ಚು ಕಡಿಮೆ, ಶ್ರೀಯಾದವಾರ್ಯರು ರಚಿಸಿದ ವ್ಯಾಸಗದ್ಯದಂತಿದೆ. ವ್ಯಾಸಗದ್ಯದಲ್ಲಿ ೯೯ ಪ್ರಮೇಯಗಳನ್ನು ಪ್ರಾಯಶಃ ಬ್ರಹ್ಮಸೂತ್ರಗಳಿಂದ, ಉಧೃತಿ ಮಾಡಿದ್ದಾರೆ. ಇಲ್ಲಿಯೂ ಪ್ರತಿಯೊಂದು ನಾಮವೂ 'ನಮಃ' ಎಂದೇ ಅಂತ್ಯಗೊಳ್ಳುತ್ತವೆ.

ಶ್ರೀ ಸತ್ಯವರರ ಸ್ತೋತ್ರ ಮತ್ತು ಪ್ರಮೇಯ ಮಾಲಾಗಳನ್ನು ಈ ಗ್ರಂಥದ ಪರಿಶಿಷ್ಟದಲ್ಲಿ ಕೊಡಲಾಗಿದೆ.

**ಕೊನೆಯ ಚಾತುರ್ಮಾಸ್ಯ :**

ಸಂಚಾರ ಕ್ರಮದಿಂದ ಕ್ರಮೇಣ ಶ್ರೀಮಠವು ಪ್ರಮಾಥಿ ನಾಮ ಸಂವತ್ಸರದ ಆಷಾಢಮಾಸದ ವೇಳೆಗೆ ಬಲಕುಂದಿ ನಗರಕ್ಕೆ ಬಂದು ತಲುಪಿತು. ಆಸ್ತಿಕ ಮಹಾಜನರ ಪ್ರಾರ್ಥನೆಯ ಮೇರೆಗೆ ಶ್ರೀಗಳವರು ಅದೇ ಊರಿನಲ್ಲಿ

ಚಾತುರ್ಮಾಸ್ಯಕ್ಕೆ ಉಪಸ್ಥಿತರಾದರು. ನಿತ್ಯದಲ್ಲಿ ಶ್ರೀರಾಮದೇವರ ಪೂಜಾದಿಗಳು, ದಿಗಂತ ವಿಶ್ರಾಂತ ಪ್ರತಿಭಾವಂತ ಶ್ರೀಗಳವರಿಂದ ನಿತ್ಯದಲ್ಲಿ ಪಾಠ ಪ್ರವಚನಾದಿಗಳು ಇವುಗಳಿಂದ ಊರಿನವರಿಗೆಲ್ಲ ಒಂದು ವಿಶೇಷ ಉತ್ಸವ ದಿನಗಳಾಗಿದ್ದವು. ಭಕ್ತಾದಿಗಳು ಅನುದಿನ ಶ್ರೀಮಠದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಜನ್ಮ ಸಾರ್ಥಕ ಮಾಡಿಕೊಂಡರು.

ಚಾತುರ್ಮಾಸ್ಯವು ವಿಜೃಂಭಣೆಯಿಂದ ಕಳೆದ ಮೇಲೆ ಪ್ರಮಾಥಿ ಸಂವತ್ಸರ ಆಶ್ವೀಜ ಶುದ್ಧದಲ್ಲಿ ಶ್ರೀಗಳವರಿಗೆ ದೇಹಾಲಸ್ಯ ಕಾಣಿಸಿಕೊಂಡಿತು. ಇಷ್ಟರಲ್ಲಿ ಈ ಕೆಳಗಿನಂತೆ ಏಳು ಚಾತುರ್ಮಾಸ್ಯಗಳು ಕಳೆದಿದ್ದವು.

ಪ್ರಥಮ ಚಾತುರ್ಮಾಸ್ಯ — ಕರ್ನೂಲ್ — ಶ್ರೀಮುಖ ಸಂವತ್ಸರ
ದ್ವಿತೀಯ ಚಾತುರ್ಮಾಸ್ಯ — ಸೊನ್ನಿ — ಭಾವ ಸಂವತ್ಸರ
ತೃತೀಯ ಚಾತುರ್ಮಾಸ್ಯ — ಗೋಕುಲನಗರ — ಯುವ ಸಂವತ್ಸರ
ಚತುರ್ಥ ಚಾತುರ್ಮಾಸ್ಯ — ಪುಣೆ — ಧಾತುಸಂವತ್ಸರ
ಪಂಚಮ ಚಾತುರ್ಮಾಸ್ಯ — ಪುಣೆ — ಈಶ್ವರ ಸಂವತ್ಸರ
ಆರನೆಯ ಚಾತುರ್ಮಾಸ್ಯ — ಮುನವಳ್ಳಿ — ಬಹುಧಾನ್ಯ ಸಂವತ್ಸರ
ಏಳನೆಯ ಚಾತುರ್ಮಾಸ್ಯ — ಬಲಕುಂದಿ — ಪ್ರಮಾಥಿ ಸಂವತ್ಸರ

ಚಾತುರ್ಮಾಸ್ಯ ಮುಗಿಯುವ ವೇಳೆಗೆ, ಬಲಕುಂದಿ ಎಂಬ ಊರಿನ ನಾಮಧೇಯದ ಪ್ರಭಾವವೋ ಎಂಬಂತೆ, ಶ್ರೀಗಳವರ ದೇಹದಲ್ಲಿ ಬಲಕುಂದಲು ಪ್ರಾರಂಭವಾಯಿತು. ದೇಹಾಯಾಸವನ್ನರಿತ ಶ್ರೀಗಳವರು ಪೀಠವನ್ನು ಯಾರಿಗೆ ಕೊಡಬೇಕೆಂದು ಯೋಚಿಸ ತೊಡಗಿದರು. ಆಶ್ರಮಾಂತ್ಯ ವೇಳೆಯಲ್ಲಿ ತಕ್ಕಮಟ್ಟಿಗೆ ಎಲ್ಲರೂ ಯೋಚನಾಗ್ರಸ್ಥರಾಗುವ ಸಮಯ.

ಆಗಲೂ ಸಹ ಶ್ರೀಗಳವರ ಮನಸ್ಸಿಗೆ ಮೊದಲು ಬಂದವರು ಅವರ ಪೂರ್ವಾಶ್ರಮದ ತಮ್ಮಂದಿರಾದ ಜಯಾಚಾರ್ಯರ ಮಕ್ಕಳು ಇಪ್ಪತ್ತೊಂದು ವಯಸ್ಸಿನ ವಾಯಿ ನಾರಾಯಣಾಚಾರ್ಯರು. ಇವರದು ವಯಸ್ಸಿಗೆ ಮೀರಿದ ವಿದ್ವತ್ ಪ್ರತಿಭೆ. ನ್ಯಾಯವೇದಾಂತಾದಿ ಚತುಶ್ಶಾಸ್ತ್ರಗಳಲ್ಲಿ ಪಾರಂಗತರು ಮತ್ತು ವಾದ ಚತುರರು. ವಿಲಕ್ಷಣ ತೇಜಸ್ವಿಗಳು. ಆಕರ್ಷಕ

ವ್ಯಕ್ತಿತ್ವ ಅಸ್ಖಲಿತವಾಣಿ, ಚತುರ್ಭಾಷಾವಿಶಾರದರು. ಅಂತೆಯೇ ಸೌಜನ್ಯ ವಿನಯ, ನಿರಹಂಕಾರ, ಶಮಾದಮಾದಿಗಳೇ ವ್ಯಕ್ತಿರೂಪದಿಂದ ಮೂರ್ತಿ ಮತ್ತಾಗಿ ನಿಂತಿದ್ದವು. ಇವರಿಗೆ ಹಿರಿಯರು ಶ್ರೀಗಳವರು ಪರಿಪರಿಯಾಗಿ ಹೇಳಿದರೂ ಆಶ್ರಮ ಸ್ವೀಕಾರಕ್ಕೆ ಒಪ್ಪಲಿಲ್ಲ. ಹೆಚ್ಚಿಗೆ ಬಲವಂತ ಮಾಡುವದು ಈ ವಿಷಯದಲ್ಲಿ ಉಚಿತವಲ್ಲೆಂದು ಅಲ್ಲಿಗೇ ವಿರಮಿಸಿದರು.

ನಂತರ ಶ್ರೀಗಳವರಿಗೆ ಪ್ರಿಯ ಶಿಷ್ಯರೂ, ಪರಮ ಸಾತ್ವಿಕ ಶಿರೋಮಣಿ ಗಳೂ, ಜ್ಞಾನ ಭಕ್ತಿ ವಿರಕ್ತಿಗಳಿಂದ ಭೂಷಿತರೂ ಮತ್ತು ವೀರವೈಷ್ಣವರೂ ಆದಕೊರ್ಲಹಳ್ಳಿ ಬೋಧರಾಯಾಚಾರ್ಯರಿಗೆ ಆಶ್ರಮವನ್ನು ಕೊಡುವ ನಿಶ್ಚಯ ಮಾಡಿ ಅವರನ್ನು ಕರೆಕಳುಹಿಸಲಾಯಿತು. ಅವರಿಗೆ ಸಾಂಪ್ರದಾಯಿಕ ಯತ್ಯಾಶ್ರಮ ಸ್ವೀಕಾರ ನಿಯಮಗಳೊಂದಿಗೆ ಪ್ರಮಾಥಿ ಅಶ್ವೀಜ ಸಪ್ತಮೀ ದಿನದಲ್ಲಿ ಪ್ರಣವೋಪದೇಶವಾಯಿತು. ಶ್ರೀ ಶ್ರೀ ಸತ್ಯವೀರತೀರ್ಥರೆಂದು ಆಶ್ರಮ ನಾಮಕರಣವಾಯಿತು. ಅವರಿಗೆ ಸಂಸ್ಥಾನವನ್ನು ಸಂಪೂರ್ಣವಾಗಿ ಒಪ್ಪಿಸಿ ಶ್ರೀಸತ್ಯಪರಾಕ್ರಮ ತೀರ್ಥರು ಚಿತ್ತಾಪುರಕ್ಕೆ ಪ್ರಯಣ ಮಾಡಿದರು.

ಅಚಿರಕಾಲದಲ್ಲಿಯೇ ಅಂದರೆ ಪ್ರಮಾದಿ, ಆ. ಶು. ಅಷ್ಟಮಿ ನಿರಂತರ ಶ್ರೀನಾರಾಯಣ ಸ್ಮರಣೆ ಪರಾಯಣರಾದರು. ಶ್ರೀಸತ್ಯವೀರ ತೀರ್ಥರು ಸಮಯಕ್ಕೆ ಸರಿಯಾಗಿ ಅಲ್ಲಿಯೇ ಉಪಸ್ಥಿತರಿದ್ದು ಗುರುವರ್ಯರ ಬೃಂದಾವನ ಪ್ರವೇಶಾದಿ ಉತ್ಸವಗಳನ್ನು ಯಥಾಸಾಂಗವಾಗಿ ಬೃಹತ್ಪ್ರಮಾಣ ಅನ್ನ ದಾನಾದಿಗಳೊಂದಿಗೆ (೧೮೭೯) ನೆರವೇರಿಸಿ ತಮ್ಮ ಗುರುಗಳ ತದ್ವಾರಾ ಶ್ರೀಹರಿವಾಯುಗಳ ಅನುಗ್ರಹವನ್ನೂ ಮತ್ತು ಶಿಷ್ಯ ಸಮುದಾಯದಿಂದ ಗೌರವಾದಿಗಳನ್ನು ಸಂಪಾದಿಸಿಕೊಂಡರು. ಶ್ರೀ ಸತ್ಯಪರಾಕ್ರಮರ ಬೃಂದಾ ವನವು ಅದ್ಯಾಪಿ ಚಿತ್ತಾಪುರದಲ್ಲಿ ವಿರಾಜಮಾನವಾಗಿದೆ. ಬಂದ ಭಕ್ತ ಜನರಿಗೆ ಅನುಗ್ರಹಿಸಲು ಶ್ರೀಗಳವರು ಸದಾಕಾಲದಲ್ಲಿ ಸಿದ್ಧಹಸ್ತರಾಗಿ ಉಪಸ್ಥಿತರಾಗಿ ದ್ದಾರೆಂದು ಅಲ್ಲಿ ಹೋಗಿ ಅನುಗ್ರಹ ಪಡೆದ ಭಕ್ತರಿಂದ ವ್ಯಕ್ತವಾಗುತ್ತದೆ. ಮೋಕ್ಷ ಮಾರ್ಗದಲ್ಲಿ ಇವರು ಮತ್ತು ಇಂಥ ಮಹನೀಯರು ಬೃಹತ್‌ಪ್ರಕಾಶ ಬೀರುವ ದಾರಿದೀಪಗಳು.

ಇವರ ಬೃಂದಾವನ ಸ್ಥಾಪಿತವಾದ ನೂರು ವರ್ಷಗಳ ನಂತರ ಅದೇ ಸ್ಥಳದಲ್ಲಿ ಕೃಷ್ಣಾನದಿಗೆ ಬಾಂದಕಟ್ಟುವ ಯೋಜನೆ ಪ್ರಾರಂಭವಾಯಿತು. (Upper Krishna Project) ಊರು ಮುಳುಗುವ ಸಂದರ್ಭಬಂದದ್ದರಿಂದ ಬೃಂದಾವನವನ್ನು ಒಂದು ಮೈಲು ದೂರು ಸ್ಥಳಾಂತರಿಸಲಾಯಿತು. ಈ ಕಾರ್ಯವು ೧೯೮೧ರಲ್ಲಿ ಶ್ರೀ ೧೦೦೮ ಶ್ರೀ ಸತ್ಯಪ್ರಮೋದ ತೀರ್ಥರ ನೇತೃತ್ವದಲ್ಲಿ ನೆರವೇರಿತು. ಅವರ ಅಮೃತ ಹಸ್ತದಿಂದಲೇ, ಶ್ರೀನಿವಾಸದೇವರ, ಪ್ರಾಣದೇವರ, ಮಧ್ವರಾಯರ ಮತ್ತು ಬೃಂದಾವನದ ಪುನಃ ಪ್ರತಿಷ್ಠಾಪನಾದಿಗಳು ವೇದೋಕ್ತ ವಿಧಿ ಪ್ರಕಾರ ಸಾಂಗವಾಗಿ ನೆರವೇರಿದವು. ಬೃಂದಾವನವು ಕೃಷ್ಣಾನದಿಗೆ ಒಂದು ಕಿ.ಮೀ. ದೂರದಲ್ಲಿದೆ.

# ಉಪಸಂಹಾರ-೧೩

ಇದುವರೆಗಿನ ಚರಿತಾಂಶದಿಂದ ತಿಳಿಯುವದೇನಂದರೆ ಸನ್ ೧೮೩೯ರಲ್ಲಿ ಜನಿಸಿದ ನಮ್ಮ ಕಥಾನಾಯಕರು ವಾಯಿ ಶ್ರೀನಿವಾಸಾಚಾರ್ಯರಾಗಿ ಬ್ರಹ್ಮಚಾರಿ ಗೃಹಸ್ಥಾಶ್ರಮಗಳಲ್ಲಿಯೂ ಮತ್ತು ಶ್ರೀ ಶ್ರೀಸತ್ಯಪರಾಕ್ರಮ ತೀರ್ಥಯತಿವರರಾಗಿ ಶ್ರೀಹರಿವಾಯುಗಳ ಅನುಗ್ರಹ ವಿಶೇಷದಿಂದ ಜೀವನ ಪೂರ್ಣ ಅನ್ವರ್ಥಕನಾಮದಿಂದ ಅಂದರೆ ಸ್ವವಿದ್ಯಾ ಪರಾಕ್ರಮದಿಂದ ಮೆರೆದರು. ಇವರನ್ನು ಕುರಿತ ಸ್ತೋತ್ರಗಳು, ಪದಗಳು ಪರಿಶಿಷ್ಟದಲ್ಲಿ ಕೊಟ್ಟಿವೆ.

ಮರುದಂಶರಿಂದ ಪ್ರಣೀತವಾದ ವರಮಧ್ವಶಾಸ್ತ್ರವೇ ಇವರ ಜೀವನದ ಶ್ವಾಸೋಚ್ಛ್ವಾಸ/ಉಸಿರು. ಭಕ್ತಿ ವೈರಾಗ್ಯಾದಿಗಳೇ ಸಂಪತ್ತು. ಜ್ಞಾನ ಪ್ರಸಾರವೇ ಜೀವನದ ಧ್ಯೇಯ. ಶ್ರೀಹರಿವಾಯುಗಳ ಪ್ರಸನ್ನತೆಯೇ ಸಾಧನದ ಗುರಿ. ಶ್ರೀಮನ್ಮಧ್ವಮೂಲ ಸಂಸ್ಥಾನದ ಸರ್ವತೋಮುಖ ದಿಗ್ವಿಜಯವೇ ಜೀವನದ ಯಶಸ್ಸು. ಮಾತ್ರಾಕಾಲ ವ್ಯರ್ಥಮಾಡದೇ ಸಂತತ ವಿಷ್ಣು ಸ್ಮರಣೆಯೇ ಜೀವನ ಸಾರ್ಥಕ್ಯ. ಈ ಪ್ರಕಾರ ಪೂರ್ಣಸಾಧನ ಜೀವನವನ್ನು ಕಳೆದ ಮಹನೀಯರಿವರು. ಸಾಕಷ್ಟು ಬೃಹತ್ಸಂಖ್ಯೆಯಲ್ಲಿ ಶಿಷ್ಯರಿಗೆ ಸಮೀಚೀನ ಅಧ್ಯಯನ ಮಾಡಿಸಿ ಗಣನೀಯ ವಿದ್ವಾಂಸರನ್ನಾಗಿ ಸಮಾಜ ಭೂಷಿತರನ್ನಾಗಿ ಮಾಡಿದ ಧೀಮಂತರಿವರು. ಒಬ್ಬ ಗಣ್ಯ ವಿದ್ವಾಂಸರ ನಿಸ್ವಾರ್ಥ ಪಾಂಡಿತ್ಯ ವ್ಯಕ್ತವಾಗುವದು ಹೇಗೆಂದರೆ ಅವರು ಎಷ್ಟು ಜನ ವಿದ್ವಾಂಸರನ್ನು ತಯಾರು ಮಾಡಿದ್ದಾರೆ. ಅದೆಷ್ಟು ಜನರನ್ನು ವಿದ್ಯಾದಾನದಿಂದ ತೃಪ್ತಿಗೊಳಿಸಿದ್ದಾರೆ ಎಂಬದರ ಮೇಲೆ ನಿರ್ಧಾರ. ಇವರು ಪೂರ್ವಾಶ್ರಮದಲ್ಲಿಯೂ ಮತ್ತು ಆಶ್ರಮಾನಂತರವೂ ಸರ್ವಸಮಯದಲ್ಲೂ ಇವರ ಜೀವಿತಕಾಲ ಪಾಠ ಪ್ರವಚನಾದಿ ಜ್ಞಾನಕಾರ್ಯಕ್ಕೇ ಮೀಸಲಾಗಿತ್ತು.

ಸಂಪ್ರದಾಯದ ಚೌಕಟ್ಟಿನಲ್ಲಿ ಶಾಸ್ತ್ರ ಗಂಭೀರ ಭಾಷೆಯಲ್ಲಿಲೀನವಾದ ರಹಸ್ಯಾರ್ಥಗಳನ್ನು ಶಿಷ್ಯರಿಗೆ ತಿಳಿಸುತ್ತ, ಮಾಧ್ವ ಸಂಪ್ರದಾಯದ ರಾಜ ಮಾರ್ಗದಲ್ಲಿ ಸಾಧನಾದಿಗಳನ್ನು ಬೋಧಿಸಿ ದಾರ್ಢ್ಯ ಜ್ಞಾನವನ್ನು ಉಂಟು ಮಾಡುತ್ತ ಅವರವರ ಯೋಗ್ಯತಾನುಸಾರ ಮುಕ್ತಿ ಮಾರ್ಗದಲ್ಲಿ ಸಾಗಲು

ಜ್ಞಾನ ಸ್ಫೂರ್ತಿಗಳನ್ನುಪದೇಶಿಸಿದರು. ಶ್ರೀಗಳವರೇ ಸ್ವಯಂ ಶ್ರದ್ಧಾ ಸ್ಫೂರ್ತಿ ಮೂರ್ತಿಗಳಾಗಿದ್ದರು. ರಾಶಿ ರಾಶಿ ಗ್ರಂಥಗಳಿಗಿಂತಲೂ ಭಾಗವತಧರ್ಮಾನುಷ್ಠಿತರಾದ ಇಂಥ ವ್ಯಕ್ತಿಗಳ ದರ್ಶನವೇ ಲೇಸು.

ಜ್ಞಾನ, ಭಕ್ತಿ, ವೈರಾಗ್ಯ, ಶ್ರದ್ಧಾ, ತಿತಿಕ್ಷುತಾ, ನಿಸ್ವಾರ್ಥತೆ, ಶಮದಮಾದಿಗಳು, ಇತ್ಯಾದಿ ಅನೇಕ ಭಾಗವತ ಧರ್ಮಗಳು ಮೂರ್ತಿಮತ್ತಾಗಿ ವ್ಯಕ್ತಿರೂಪದಲ್ಲಿ ಮೈ ತಳೆದು ಮುಂದೆ ನಿಂತಾಗ ಎಂಥವರೂ ತಲೆಬಾಗಬೇಕಾಗುತ್ತದೆ. ಸಜ್ಜನರಿಗಂತೂ ಅವೇ ಸುಗ್ಗಿಯ ದಿನಗಳು. ಮುಕ್ತಿ ಯೋಗ್ಯ ಜೀವರುಗಳು ನಿಜವಾದ ಲಾಭ ಪಡೆದೇ ಪಡೆಯುತ್ತಾರೆ. ಮೋಕ್ಷ ಮಾರ್ಗದಲ್ಲಿ ನಿರ್ದಿಷ್ಟ ಸಾಧನಾನುಷ್ಠಾನಗಳ ರಹಸ್ಯ ತಿಳಿಸಿಕೊಟ್ಟು ಮುಂದೆ ಕರೆದುಕೊಂಡು ಹೋಗಬೇಕಾದರೆ ದೇವಾಂಶರೇ ಈ ಕಾರ್ಯದಲ್ಲಿದಕ್ಷರು. ಮಾಧ್ವಪೀಠದಲ್ಲಿ ವಿರಾಜಮಾನರಾಗಿ ಮುಮುಕ್ಷುಗಳ ಉದ್ಧಾರಕ್ಕೆ ಬರುವವರು ಪ್ರಾಯಶಃ ದೇವಾಂಶರೇ, ಶ್ರೀ ಮಧ್ವರ ಆವೇಶದಿಂದಲೇ ಬರುತ್ತಾರೆ. ಮಹಾತ್ಮರಾದ ಶ್ರೀ ಯತಿವರ್ಯರ ಚರಿತಾನುವಾದದ ಪಠಣ, ಶ್ರವಣ, ಮನನಗಳಿಂದ ಭಕ್ತಾದಿಗಳಿಗೆ ಪರಮ ಮಂಗಳವೀಯಲೆಂದು ಶ್ರೀಹರಿವಾಯುಗಳಲ್ಲಿ ಪ್ರಾರ್ಥನೆ. ಇಂಥ ಭವ್ಯಮಾಧ್ವ ಪರಂಪರೆ ಮತ್ತು ವರಮಧ್ವಶಾಸ್ತ್ರವು ನಮಗೆ ಈ ಭೂಲೋಕದಲ್ಲಿ ಎಷ್ಟು ಜನುಮಗಳು ಬಂದರೂ ಇವೇ ನಮಗೆ ಒದಗಲಿ ಎಂದು ಶ್ರೀಮತ್ಸತ್ಯಪರಾಕ್ರಮ ಗುರ್ವಂತರ್ಗತ ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಸೀತಾರಾಮಚಂದ್ರದೇವರನ್ನು ಪ್ರಾರ್ಥಿಸುತ್ತಾ ಈ ಬರಹವನ್ನು ಶ್ರೀಹರಿಗೆ ಸಮರ್ಪಿಸುವೆವು.

"ಬ್ರಹ್ಮಾಂತಾಗುರವಃಸಾಕ್ಷಾದಿಷ್ಟಂ ದೈವಂ ಶ್ರೀಯಃಪತಿಃ ।
ಆಚಾರ್ಯಾಃ ಶ್ರೀಮದಾಚಾರ್ಯಾಸಂತುಮೇಜನ್ಮಜನ್ಮನಿ ॥"

**ಓಂತತ್ಸತ್**

**ಇತಿ ಶ್ರೀಮಧ್ವೇಶಾರ್ಪಣಮಸ್ತು**

|| ಹರಿಃ ಓಂ ||

# ಶ್ರೀಸತ್ಯಪರಾಕ್ರಮತೀರ್ಥಯತಿವರ ವಿರಚಿತ ಪ್ರಮೇಯಮಾಲಾಪ್ರಾರಂಭಃ

ಯದ್ ಭ್ರೂವಿಜೃಂಭಮಾತ್ರೇಣವಿಭ್ರಾಂತಂಭುವನತ್ರಯಮ್ ।
ಶ್ರೀನೃಸಿಂಹಮಹಂವಂದೇ ಭವತಾಭೀಷ್ಟಪ್ರದಾಯಕಮ್ ||

**ಬ್ರಹ್ಮಸೂತ್ರಾಣಾಂ ಸಂಗ್ರಹೇಣ ಕಥನಂ ತಥಾ ವಿಷ್ಣುಶ್ರೇಷ್ಠತ್ವ :**

(೧) ಓಂ ಸ್ವರವರ್ಣವಾಕ್ಯಾತ್ಮಕಾಶೇಷ ವೇದಸಮನ್ವಯ ದ್ವಾರಾ ಪ್ರಥಮಾಧ್ಯಾಯ ಪ್ರತಿಪಾದಿತಾಶೇಷ ಗುಣಪೂರ್ಣತ್ವೋಪೇತಾಯನಮಃ ಓಂ ||

(೨) ಓಂ ಯುಕ್ತಿ, ಸಮಯ, ಶ್ರುತಿ, ನ್ಯಾಯೋಪೇತ ಶ್ರುತಿ ವಿರೋಧ ಭೇದೇನ ಚತುರ್ವಿಧ ವಿರೋಧ ಪರಿಹಾರದ್ವಾರೇಣ ದ್ವಿತೀಯಾಧ್ಯಾಯ ಪ್ರತಿಪಾದಿತಾಶೇಷ ದೋಷದೂರಾಯ ನಮಃ ಓಂ ||

(೩) ಓಂ ತೃತೀಯಾಧ್ಯಾಯ ಪ್ರತಿಪಾದಿತ ವೈರಾಗ್ಯಾಪಾದಿತ ದಾರ್ಢ್ಯೋಪೇತ ಭಕ್ತಿ ಪ್ರಯೋಜ್ಯೋಪಾಸನಾಜನ್ಯಾಪರೋಕ್ಷಜ್ಞಾನ ವಿಷಯಾಯನಮಃ ಓಂ ||

(೪) ಓಂ ಚತುರ್ಥಾಧ್ಯಾಯ ಪ್ರತಿಪಾದಿತ ಕರ್ಮಕ್ಷಯೋತ್ಕ್ರಾಂತಿ ಮಾರ್ಗ ಭೋಗ ರೂಪ ಚತುರ್ವಿಧ ಮುಕ್ತಿಪ್ರದಾಯನಮಃ ಓಂ ||

**ವಿಷ್ಣೋಃ ಸ್ವತಂತ್ರತ್ವ ಕಥನಂ :**

(೫) ಓಂ ಶ್ರೀಬ್ರಹ್ಮಾದಿ ಸಕಲ ಜೀವೋತ್ತಮಾಯನಮಃ ಓಂ ||

(೬) ಓಂ ತತ್ಪ್ರೇರಕಾಯನಮಃ ಓಂ ||

(೭) ಓಂ ಸ್ವರಮಣಾಯನಮಃ ಓಂ ||

(೮) ಓಂ ನಾರಾಯಣಾಯನಮಃ ಓಂ ||

(೯) ಓಂ ಗಜತುರಗಾದಿ ಸ್ಥೂಲ ಸೂಕ್ಷ್ಮಶರೀರಸ್ಥತತ್ತದಾಕಾರ ತತ್ತತ್ಪ್ರೇರಿ ಮೋಹಿಣೋ ಪೇತಾಯನಮಃ ಓಂ ||

(೧೦) ಓಂ ಸ್ವಾನಂತಾನಂತಾವತಾರೆ ಐಕ್ಯಂ ಪ್ರಾಪ್ತಾಯನಮಃ । ಓಂ ||

**ವಿಷ್ಣೋದರೆ ಮುಕ್ತಾಮುಕ್ತ ಸ್ಥಾನ ಕಥನಂ :**

(೧೧) ಓಂ ಸ್ವಸೃಷ್ಟಂ ಸಮಸ್ತಂ ಜಗತ್ ಸ್ವಯಮೇವ ಸಂಹೃತ್ಯ ಚೇತನಾನ್ ಸ್ವೋದರೆ ನಿಕ್ಷಿಪ್ಯ, ನಾಭೇರಧಃ ವಾಮಭಾಗೇ ಪ್ರಾಪ್ತತಮಸ್ಕಾನ್ ದಕ್ಷಿಣಭಾಗೇ ತಮೋಯೋಗ್ಯಾನ್ ಸಮಪ್ರದೇಶೇ ನಿತ್ಯ ಸಂಸಾರಿಣೋ ನಿಕ್ಷಿಪ್ಯ, ನಾಭೇರುಪರಿ ದಕ್ಷಿಣಭಾಗೇ ಮುಕ್ತಾನ್, ವಾಮಭಾಗೇ ಮುಕ್ತಿಯೋಗ್ಯಾನ್ ನಿಕ್ಷಿಪ್ಯ ದುರ್ಗಾತ್ಮಕಾಂಧಕಾರೇ ಪ್ರಕೃತ್ಯಾತ್ಮಕ ಪ್ರಲಯೋದಕೇ ಶ್ರೀ ರೂಪವಟಪತ್ರೇ ಶಿಶು ರೂಪೇಣ ಬ್ರಹ್ಮಮಾನೇನ ಶತವರ್ಷಪರ್ಯಂತಂ ಯೋಗನಿದ್ರಾಕಾರಿಣೇ ನಮಃ ಓಂ ||

**ಸೃಷ್ಟ್ಯರ್ಥಂ ದುರ್ಗಾಸ್ತುತಿ :**

(೧೨) ಓಂ ಶತವರ್ಷಾತ್ಮಕ ಪ್ರಲಯಕಾಲಸ್ಯಾಷ್ಟಮಭಾಗೆ ಊರ್ವರಿತೇ ಸತಿ ಅಶೇಷವೇದಾಭಿಮಾನಿನ್ಯಾ ದುರ್ಗಯಾಸಜ್ಞನೇಷು ಕೃಪಯಾಶೇಷ ವೇದ ಸಮೂಹೈಃ ಸೃಷ್ಟ್ಯರ್ಥಂ ಸ್ತೂಯಮಾನಾಯನಮಃ ಓಂ ||

(೧೩) ಓಂ ಪ್ರಲಯಕಾಲನಿವೃತ್ಯರ್ಥಂ ಅಂಧಕಾರರೂಪ ದುರ್ಗಾಶಾಂತ್ಯರ್ಥಂ ಪುರುಷ ನಾಮಕ ನಾರಾಯಣರೂಪೇಣ ತಮಃಪಾನಕರ್ತ್ರೇನಮಃ ಓಂ ||

**ವಿರಜಾಸ್ನಾನಾನಂತರ ಮುಕ್ತಾನಾಂ ಮುಕ್ತಿಪ್ರದತ್ವ :**

(೧೪) ಓಂ ಸ್ವಶರೀರಸ್ವೇದ ಜನಿತ ಲಕ್ಷ್ಮ್ಯಾತ್ಮಕ ಪ್ರಧಾನವಿರಜಾಸ್ನಾನೇನ ದಶೇಂದ್ರಿಯ ಪಂಚಭೂತ ಬುದ್ಧಿ ತತ್ವರೂಪ ಷೋಡಶಕಲಾತ್ಮಕಲಿಂಗ ಶರೀರ ಭಂಗಂಪ್ರಾಪಯಿತ್ವಾ ಸ್ವರೂಪಾನಂದಾನು ಭವರೂಪ ಮುಕ್ತಿಪ್ರದ ಮಾಯಾಪತಿ ವಾಸುದೇವರೂಪಾಯನಮಃ ಓಂ ||

## ಸೃಷ್ಟಿಕರ್ತೃತ್ವ ಕಥನ :—ಜೀವ ಸರ್ಗ

(೧೫) ಓಂ ತದ್ವಾಸುದೇವರೂಪೇಣ ಶ್ರೀದೇವ್ಯಭಿವ್ಯಕ್ತ ಮಾಯಾಯಾಂ ಸರ್ವ ಕಾಲಾಭಿಮಾನಿ ಕಾಲನಾಮಕಂ ಬ್ರಹ್ಮಾಣಂ ಸೃಷ್ಟ್ವಾ ಪ್ರಧಾನ ಸಂಜ್ಞಕ ಗಾಯತ್ರೀ ನಾಮಕ ಸರಸ್ವತೀಸಹಿತ ಸರ್ವಜೀವಾಭಿಮಾನಿ ಪುರುಷನಾಮಕ ಬ್ರಹ್ಮ ಸ್ರಷ್ಟ್ರೇನಮಃ ಓಂ ||

(೧೬) ಓಂತದನಂತರಾಭಿವ್ಯಕ್ತ ಸಕಲ ಜಗತ್ ಸಂಹಾರಕ ಶ್ರೀದೇವ್ಯಭಿವ್ಯಕ್ತ ಜಾಯಾಪತಿ ಶ್ರೀಸಂಕರ್ಷಣ ರೂಪಾಯನಮಃ । ಓಂ ||

(೧೭) ಓಂ ತತ್ಸಂಕರ್ಷಣರೂಪೇಣ ಜಯಾಯಾಂ ಸೂತ್ರನಾಮಕ ವಾಯು ಸರ್ಜಕಾಯನಮಃ ಓಂ ||

(೧೮) ಓಂ ತದನಂತರಾಭಿವ್ಯಕ್ತ ಸರ್ವಜಗತ್ಸೃಷ್ಟಿಕಾರಣಕರ್ತ್ರೀ ಶ್ರೀದೇವ್ಯ ಭಿವ್ಯಕ್ತಕೃತಿಪತಿ ಪ್ರದ್ಯುಮ್ನರೂಪಾಯನಮಃ ಓಂ||

(೧೯) ಓಂ ತತ್ಪ್ರದ್ಯುಮ್ನರೂಪೇಣ ಕೃತ್ಯಾಂ ಗಾಯತ್ರೀ ಸಾವಿತ್ರೀಸರಸ್ವತೀ ರೂಪ ತ್ರಿರೂಪಾತ್ಮಕ ಪ್ರಧಾನ ಸಂಜ್ಞಕ ಗಾಯತ್ರೀ ಶ್ರದ್ಧಾಸಂಜ್ಞಕ ಭಾರತೀರೂಪ ಕನ್ಯಾ ಚತುಷ್ಟಯೋತ್ಪಾದಕಾಯನಮಃ ಓಂ ||

(೨೦) ಓಂ ತದನಂತರಾಭಿವ್ಯಕ್ತ ಸರ್ವಜಗತ್‌ಸ್ಥಿತಿಹೇತು ಶ್ರೀದೇವ್ಯಭಿವ್ಯಕ್ತ ಶಾಂತೀಪತ್ಯನಿರುದ್ಧ ರೂಪಾಯನಮಃ ಓಂ ||

(೨೧) ಪ್ರದ್ಯುಮ್ನೋತ್ಪನ್ನ ಶ್ರದ್ಧಾನಾಮಕ ಭಾರತ್ಯಾಂ ಭಗವಚ್ಛಯ್ಯಾಭೂತ ಜೀವನಾಮಕ ಶೇಷ ಭಗವದ್ವಾಹನ ಕಾಲನಾಮಕ ಗರುಡ ಸ್ಯೋತ್ಪಾದಕ ಸಂಕರ್ಷಣೋತ್ಪನ್ನ ಸೂತ್ರನಾಮಕ ವಾಯ್ವಂತ-ರ್ಯಾಮಿಣೇ ನಮಃ ಓಂ ||

(೨೨) ಓಂ ಪ್ರದ್ಯುಮ್ನೋತ್ಪನ್ನ ಗಾಯತ್ರೀ ಸಾವಿತ್ರೀ ಸರಸ್ವತೀ ರೂಪದೇವಿ ತ್ರಯೇ ವೀರ್ಯಂ ಸಂಸ್ಥಾಪ್ಯ ತದ್ವೀರ್ಯಮೇಕೀಕೃತ್ಯ ಗಾಯತ್ರ್ಯಾ ಉದರೆ ನಿಕ್ಷಿಪ್ಯ ವಿರಿಂಚಿ ಬ್ರಹ್ಮನಾಮಕ ಸ್ವಾಂಶಸ್ಯ ಸಂಕರ್ಷಣಾ-ದುತ್ಪನ್ನ ಸೂತ್ರನಾಮಕ ವಾಯೋಶ್ಚೋತ್ಪಾದಕ ವಾಸುದೇವೋ ತ್ಪನ್ನ ಪುರುಷ ನಾಮಕ ಬ್ರಹ್ಮಾಂತರ್ಯಾಮಿಣೇನಮಃ ಓಂ ||

(೨೩) ಓಂ ತ್ರಿರೂಪಾಂತರ್ಗತ ಸರಸ್ವತ್ಯಾ ಜೀವನಾಮಕ ಶೇಷಸ್ಯ ವೈಕಾರಿಕ ಅಹಂಕಾರಕ ತತ್ವಾಭಿಮಾನಿ ವೈಕಾರಿಕ ರುದ್ರನಾಮಕ ಗರುಡಸ್ಯ ಸ್ತ್ರೀಭ್ಯಾಂ ಸಹೋತ್ಪಾದಕ ಪುರುಷನಾಮಕ ಬ್ರಹ್ಮೋತ್ಪನ್ನ ವಿರಿಂಚಿ ಬ್ರಹ್ಮಾಂತರ್ಯಾಮಿಣೇನಮಃ ಓಂ ||

(೨೪) ಓಂ ಕಾಲನಾಮಕ ಗರುಡಸ್ಯ ತೈಜಸ ಅಹಂಕಾರ ತತ್ವಾಭಿಮಾನಿ ತೈಜಸ ರುದ್ರನಾಮಕ ಶೇಷಸ್ಯ ಚ ಸ್ತ್ರೀಭ್ಯಾಂ ಸಹೋತ್ಪಾದಕ ಪುರುಷನಾಮಕ ಬ್ರಹ್ಮೋತ್ಪನ್ನ ಸೂತ್ರನಾಮಕ ವಾಯ್ವಂತರ್ಯಾಮಿಣೇನಮಃ ಓಂ ||

(೨೫) ಓಂ ವಾರುಣ್ಯಾಂ ತಾಮಸಾಹಂಕಾರ ತತ್ವಾಭಿಮಾನಿ ತಾಮಸರುದ್ರ ನಾಮಕ ಉಮಾಪತಿ ರುದ್ರಸ್ಯಸ್ತ್ರಿಯಾಸಹೋತ್ಪಾದಕ ವಿರಿಂಚಿ ಬ್ರಹ್ಮೋತ್ಪನ್ನ ಜೀವನಾಮಕ ಶೇಷಾಂತರ್ಯಾಮಿಣೇನಮಃ ಓಂ ||

(೨೬) ಓಂ ತತ್ವಸಹಿತ ಸ್ಥಾವರ ಸರ್ವದೇವೋತ್ಪಾದಕ ತ್ರಿರೂಪ ರುದ್ರಾಂತ ರ್ಯಾಮಿಣೇ ನಮಃ ಓಂ ||

(೨೭) ಓಂ ಕಾಲಾಶ್ವಮೇಧಾದಿ ಸರ್ವಯಜ್ಞಸಹಿತ ಸ್ಥಾವರ ಸರ್ವದೇವೋ ತ್ಪಾದಕ ಶ್ರದ್ಧಾಪತಿ ಸೂತ್ರನಾಮಕ ವಾಯ್ವಾಂತರ್ಯಾಮಿಣೇ ನಮಃ ಓಂ ||

## ಚಾತುರ್ವರ್ಣ್ಯ ಅಭಿಮಾನಿದೇವತಾ ಕಥನ

(೨೮) ಓಂ ಬ್ರಾಹ್ಮಣ ಜಾತೀಯ ಚತುರ್ಮುಖಬ್ರಹ್ಮಣಃ ಅಗ್ನೇಃ ಬೃಹಸ್ಪತೇಶ್ಚ; ಕ್ಷತ್ರಿಯಜಾತೀಯ ವಾಯು, ಗರುಡ, ಶೇಷ, ರುದ್ರ, ಇಂದ್ರ, ಕಾಮ, ವರುಣ, ಸೂರ್ಯ, ಚಂದ್ರಾಣಾಂ ; ವೈಶ್ಯಜಾತೀಯಾನಾಂ ವಿವಸ್ವತ ಸೂರ್ಯ ಇಂದ್ರವರುಣ ವಿಷ್ಣೂನ್‌ವಿನಾ ಅದಿತಿ ಸುತಾನಾಂ ಸರ್ವೇಷಾಂ, ಮೂಲರುದ್ರಂವಿನಾ ಸರ್ವರುದ್ರಾಣಾಂ, ಮೂಲ ವಾಯುಂವಿನಾ ಸರ್ವವಾಯೂನಾಂ, ಪ್ರಸಿದ್ಧಾಗ್ನಿಂವಿನಾ ಸರ್ವ ವಸೂನಾಂ; ಶೂದ್ರ ಜಾತೀಯಾನಾಂ ಅಶ್ವಿನೀ ಪೃಥಿವೀಕಾಲ ಮೃತ್ಯು ನಿಋತಿ ಪ್ರಭೃತೀ ಸರ್ವದೇವಾನಾಂ ಸೂಕ್ಷ್ಮರೂಪೇಣ ಸೃಷ್ಟಿ ಕರ್ತೃ ವಾಸುದೇವ, ಸಂಕರ್ಷಣ, ಪ್ರದ್ಯುಮ್ನಾತ್ಮಕ ತ್ರಿರೂಪಾಯನಮಃ ಓಂ ||

## ಜೀವಾನಾಂ ಸ್ಥೂಲದೇಹಪ್ರಾಪ್ತಿ ಕಥನ

(೨೯) ಓಂ ಸ್ಥೂಲದೇಹೇ ತ್ವ್ಯನೇತಾನ್ ಸರ್ವಾನ್‌ದೇವಾನ್ ದೇವಮಾನೇನ ಸಹಸ್ರವರ್ಷಪರ್ಯಂತಂ ಸ್ವೋದರೇನಿಕ್ಷಿಪ್ಯಸ್ಥೂಲದೇಹ ಪ್ರಾಪ್ತ್ಯರ್ಥಂ ಪ್ರದ್ಯುಮ್ನೇನ ದೀಯಮಾನೇನ ತಾನ್ ಸ್ವಸ್ತ್ರೀಯಾಃ ಶಾಂತ್ಯೋದರೆ ನಿಕ್ಷಿಪ್ಯ ಶ್ರೀ ಭೂದುರ್ಗಾತ್ಮಕ ಶಾಂತ್ಯಭಿಮನ್ಯಮಾನ ಸೂಕ್ಷ್ಮರೂಪ ಬ್ರಹ್ಮೋತ್ಪನ್ನ ಜೀವನಾಮಕ ಶೇಷಾಂತರ್ಗತ ರೂಪೇಣ ಮಹತ್ತತ್ವಗತ ಸತ್ವರಜಸ್ತಮೋಮಿಶ್ರಿತಾನಂತ ರಾಶಿ ರೂಪ ಮೂಲ ಜಡ ಪ್ರಕೃತೇಃ ಸಕಾಶಾತ್ ತಮೋರಜಃಸತ್ವರಾಶಿನೂತ್ತರೋತ್ತರಂ ದ್ವಿಗುಣತ್ವೇನೋಪಾದಾಯ ಸತ್ವರಾಶೇರಮಿಶ್ರತ್ವೇನ ಮುಕ್ತಾನಾಂ ಭೋಗಸಾಧನತ್ವೇನ ರಾಶಿದ್ವಯಮೇವೋಪಾದಾನೀಕೃತ್ಯ ಸ್ಥೂಲ ದೇಹ ಪ್ರಾಪಕಾನಿರುದ್ಧ ರೂಪಾಯನಮಃ ಓಂ ||

(೩೦) ಓಂ ಪ್ರಥಮಕಾಲೇ ಮಹತ್ತತ್ವನಾಶಾನಂತರಂ ಶುದ್ಧಸತ್ವೇ ವಿಮಿಶ್ರಿತ ರಜೋರಾಶ್ಯಂತರ್ಗತ ದಶಃ ಪರಿಮಿತರಜಃ ಸತ್ವಭಾಗೈಃ ತಮೋರಾಶಿ ಮಿಶ್ರಿತೇನೈಕೇನರಜಃ ಸತ್ವೇನ ಸ್ವರಾಶಿಸ್ಥೇನೈಕೇನ ಭಾಗೇನ ರಜಃ ಸತ್ವಭಾಗೇ ನೆತ್ತೇವಂ ದ್ವಾದಶ ಭಾಗೈರೇಕೇನ ತಮೋಗುಣೇನ ಚ ಮಹತ್ತತ್ವಂ ನಿರ್ಮಾಯ ಬ್ರಹ್ಮವಾಯ್ವೋಸ್ತದಾತ್ಮಕ ಸ್ಥೂಲದೇಹ ಪ್ರದಾಯ ನಮಃ ಓಂ ||

(೩೧) ಓಂ ಮಹತ್ತತ್ವಸ್ಥ ಬ್ರಹ್ಮಾಂತರ್ಗತಾಂಶೇನ ಮಹತ್ತತ್ವಗತ ಸತ್ವ ಭಾಗೇನ ಜೀವನಾಮಕ ಶೇಷವೈಕಾರಿಕ ರುದ್ರಯೋಃ ಸ್ತ್ರೀಯಾ ಸಹೋತ್ಪತ್ತಿಕ ತ್ರೇನಮಃ ಓಂ ||

(೩೨) ಓಂ ಮಹತ್ತತ್ವಗತ ವಾಯ್ವಂತರ್ಗತರೂಪೇಣ ಮಹತ್ತತ್ವಾಂತರ್ಗತ ತೇಜೋಂಽಶೇನ ಕಾಲನಾಮಕ ಗರುಡ ತೈಜಸ ನಾಮಕ ರುದ್ರಯೋಃ ಸ್ತ್ರೀಯಾ ಸಹೋತ್ಪಾದಕಾಯನಮಃ ಓಂ ||

(೩೩) ಓಂ ಬ್ರಹ್ಮೋತ್ಪನ್ನ ಜೀವನಾಮಕ ಶೇಷಾಂತರ್ಗತ ರೂಪೇಣ ಮಹತ್ತತ್ವಗತ ತಮೋಂಽಶೇನ ತಾಮಸರುದ್ರಸ್ಯಸ್ತ್ರಿಯಾಸಹೋತ್ಪಾದ ಕಾಯನಮಃ ಓಂ ||

## ತತ್ವಾಭಿಮಾನಿ-ಕರ್ಮಾಭಿಮಾನಿ ದೇವತಾ ಕಥನ

(೩೪) ಓಂ ವೈಕಾರಿಕ ರುದ್ರಾಂತರ್ಗತಾಂಶೇನ ಸ್ತ್ರೀದ್ವಾರಾ ಮನಸ್ತತ್ವಂ ತದಭಿವ್ಯಂಜಕಾಂ ಬುದ್ಧಿಂಚ ನಿರ್ಮಾಯ ಶ್ರೋತ್ರೇಂದ್ರಿಯಾಭಿಮಾನಿ ಮಿತ್ರ ಯಮ ವರುಣ ಕುಬೇರ ಸೋಮಾತ್ಮಕ ದಿಗ್ದೇವಾನಾಂ ತ್ವಗಿಂದ್ರಿಯಾಭಿಮಾನಿ ಅಹಂಕಾರಿಕ ಪ್ರಾಣಸ್ಯ ಚಕ್ಷುರಿಂದ್ರಿಯಾಭಿಮಾನಿ ಸೂರ್ಯಸ್ಯ ಜಿಹ್ವೇಂದ್ರಿಯಾಭಿಮಾನಿ ವರುಣಸ್ಯ ಘ್ರಾಣೇಂದ್ರಿಯಾಭಿಮಾನಿ ಅಶ್ವಿನ್ಯೋಃ ವಾಕ್‌ಪಾಣಿಪಾದಪಾಯುಃಉಪಸ್ಥಾತ್ಮಕ ಕರ್ಮೇಂದ್ರಿಯಾಭಿಮಾನಿನಾಂ ವಹ್ನೀಂದ್ರೋಪೇಂದ್ರಮಿತ್ರನಾಮಕ ಸೂರ್ಯದಕ್ಷಪ್ರಜಾಪತೀನಾಂ ಚೋತ್ಪಾದಕಾಯನಮಃ ಓಂ ||

(೩೫) ಓಂ ತಾಮಸರುದ್ರಾಂತರ್ಗತರೂಪೇಣ ಬೃಹಸ್ಪತಿ ಪ್ರಾಣಾದ್ಯಭಿಮನ್ಯಮಾನಃ ಶಬ್ದಾದಿಮಾತ್ರಾಣಾಂ ಗಣಪತ್ಯಾದ್ಯಭಿಮನ್ಯಮಾನಆಕಾಶಾದಿ ಪಂಚಮಹಾಭೂತಾನಾಂ ಚೋತ್ಪತ್ತಿ ಕರ್ತ್ರೇನಮಃ ಓಂ ||

(೩೬) ಓಂ ಗುಣತ್ರಯಾತ್ಮಕಾವ್ಯಕ್ತ ತತ್ವಾಂತರ್ಯಾಮ್ಯಾನಂದಮಯ ರೂಪಾಯನಮಃ ಓಂ ||

(೩೭) ಓಂ ಮಹತ್ತತ್ವಾಂತರ್ಗತ ವಿಜ್ಞಾನಮಯ ರೂಪಾಯನಮಃ ಓಂ ||

(೩೮) ಓಂ ಅಹಂಕಾರ ತತ್ವಾಂತರ್ಗತ ಮನೋಮಯ ರೂಪಾಯನಮಃ ಓಂ ||

(೩೯) ಓಂ ಆಕಾಶವಾಯು ತೇಜೋಭೂತರೂಪ ತ್ರಯಾಂತರ್ಗತ ಪ್ರಾಣಮಯ ರೂಪಾಯನಮಃ ಓಂ ||

(೪೦) ಓಂ ಜಲಪೃಥಿವ್ಯಂತರ್ಗತ ಅನ್ನಮಯರೂಪಾಯನಮಃ ಓಂ ||

(೪೧) ಓಂ ತ್ರಿರೂಪಮಾಯಾಂತರ್ಗತ ಸತ್ವಾಭಿಮಾನಿನ್ಯಾ ಶ್ರೀದೇವ್ಯಾ ರಮಣಂ ಕೃತ್ವಾ ವಿಷ್ಣುನಾಮ್ನಾವತೀರ್ಯ ಬ್ರಹ್ಮಾಂಡ ಮಧ್ಯೇ ಸ್ಥಿತಿ ಕರ್ತ್ರೇನಮಃ ಓಂ ||

(೪೨) ಓಂ ಭೂರೂಪಯಾ ರಮಣಂ ಕೃತ್ವಾ ಬ್ರಹ್ಮನಾಮ್ನಾವತೀರ್ಯ ರಜೋಭಿಮಾನಿನ್ಯಾ ಚತುರ್ಮುಖಬ್ರಹ್ಮಾಂತರ್ಯಾಮೀ ಭೂತ್ವಾ ಬಹಿಸ್ಸೃಷ್ಟಿಕರ್ತ್ರೇನಮಃ ಓಂ ||

(೪೩) ಓಂ ದುರ್ಗಾರೂಪಯಾರಮಣ್ಯಾಂ ಕೃತ್ವಾ ಈಶಾನ ನಾಮ್ನಾವತೀರ್ಯ ತಮೋಽಭಿಮಾನಿನ್ಯಾ ಪಂಚಮಹಾರುದ್ರಾಂತರ್ಗತ ಸನ್ ಸಂಹಾರ ಕರ್ತ್ರೇನಮಃ ಓಂ ||

**ಸೃಷ್ಟಿಕಥನ :—**

(೪೪) ಓಂ ವಾಸುದೇವೋತ್ಪನ್ನ ವಿಷ್ಣುರೂಪೇಣ ಶ್ರೀದೇವ್ಯಾಂವೀರ್ಯಂ ನಿಧಾಯ ಚತುರ್ವಿಂಶತಿ ತತ್ವಾನಾಂ ಅಂಶೈರಂತಃ ಸರ್ವತ್ರ ಪಂಚಾಶತ್ಕೋಟಿ ವಿಸ್ತಾರ ಯುಕ್ತಂ ತೇಜೋಮಯಂ ಬ್ರಹ್ಮಾಂಡಂ ಸೃಷ್ಟ್ವಾ ತದ್ಬ್ರಹ್ಮಾಂಡ ಸ್ಯಾಂತರ್ಬಹಿರಾಧಾರತಯಾ ಸ್ಥಿತ್ವಾ ವಿರಾಟ ಬ್ರಹ್ಮಾಣಂ ನಿಧಾಯ ಪಂಚಾಶತ್ಕೋಟಿವಿಸ್ತಾರ ಪುರುಷರೂಪಂ ಸೃಷ್ಟ್ವಾ ಪುರುಷರೂಪೇಣ ತತ್ರವ್ಯಾಪ್ತಃ ಸನ್ ಪಾದ ಮೂಲೇ ಪಾತಾಲ ಲೋಕಃ ಪಾದಪಾರ್ಶ್ವೆ ರಸಾತಲಲೋಕಃ ಜಂಘಯೋಸ್ತ-ಲಾತಲಾಲೋಕಃ ಜಾನ್ವೋಃ, ಸುತಲಲೋಕಃ ಊರ್ವೋಃ ಪಾರ್ಶ್ವ ದ್ವಯೋಃ ವಿತಲಲೋಕಃ, ಊರ್ವೋಃ ಅತಲಲೋಕಃ, ಕಟಿಪ್ರದೇಶೇ ಭೂಲೋಕಃ ನಾಭೌಭುವರ್ಲೋಕಃ, ಶಿರಸಿ ಸತ್ಯಲೋಕಃ ಇತ್ಯೇವಂ ಚತುರ್ದಶ ಲೋಕಾನಾಂ ಆಧಾರೋ ಭೂತ್ವಾ ಪುರುಷಸೂಕ್ತೇನಸ್ತುತಿ ವಿಷಯಾಯನಮಃ ಓಂ ||

**ವಾಯೋಃ ಜೀವೋತ್ತಮತ್ವಕಥನ :—**

(೪೫) ಓಂ ತಸ್ಯವಿರಾಟ್ ಬ್ರಹ್ಮಣಃ ಅವಯವೇಭ್ಯಃ ಸಮುತ್ಪನ್ನಾನಾಂ ದೇವಾನಾಮುತ್ತಮತ್ವೇನ ಕಲಹಪ್ರಾಪ್ತೇ ವಿರಾಟ ಬ್ರಹ್ಮಣಃ ಶರೀರೆ ಪ್ರವಿಶ್ಯನಿರ್ಗಮಾಭ್ಯಾಂ ಪಾತೋತ್ಥಾನಾಭ್ಯಾಂ ಭಾರತೀರಮಣ ಮುಖ್ಯಪ್ರಾಣಸ್ಯ ಸರ್ವದೇವೋತ್ತಮತ್ವಂ ವ್ಯವಸ್ಥಾಪ್ಯ ಸರ್ವ ದೇವಾನಾಂ ತದ್ದಾಸ್ಯ ಪ್ರಾಪಕಾಯನಮಃ ಓಂ ||

**ಯೋಗನಿದ್ರಾಕಥನ :—**

(೪೬) ಓಂ ಗರ್ಭೋದಕಾಂತಃ ವಿಷ್ವ್ಣಾತ್ಮಕ ಶ್ರೀನಾರಾಯಣರೂಪೇಣ ಸರ್ವಾವತಾರಾಣಾಂ ಮೂಲಾಂಶಭೂತೋಭವಿಷ್ಯಾಮೀತಿಬುದ್ಧ್ಯಾ ಶೇಷಪರ್ಯಂಕ ಲಕ್ಷ್ಮ್ಯಾಸಹ ಯೋಗನಿದ್ರಾಕಾರಿಣೇನಮಃ ಓಂ ||

**ಪಾದ್ಮಸೃಷ್ಟಿಕಥನ :**

(೪೭) ಓಂ ತತಃ ಶರ್ವರ್ಯಾಃ ಪ್ರಭಾತ ಸಮಯೇ ಬ್ರಾಹ್ಮೇಮುಹೂರ್ತೇ "ಜಗತ್ಸೃಷ್ಟಿಂ ಕುರ್ವಿ"ತಿ ಲಕ್ಷ್ಮ್ಯಾ ಪ್ರಾರ್ಥಿತಸ್ಸ್ವಾತ್ಮಾನಂ ಸ್ಥಾಪಯಿತ್ವಾ ಅಂತಃ ಸೃಷ್ಟ್ಯಾದಿನ ದ್ವಯನ್ಯೂನ ಪಂಚಾಶದ್ವರ್ಷಾತ್ಮಕ ಕಾಲೇಗತೇ ಸತಿ ಏಕಸ್ಮಿನ್‌ದಿನೇಽವೈರಾಜಸೃಷ್ಟ್ಯಾ ಅವಶಿಷ್ಟ ಪಂಚಾಶದ್ವರ್ಷಾಂತಿಮ ದಿನೇ ಸ್ವನಾಭೇ ಚತುರ್ದಶಭುವನೋತ್ಪಾದಕ ಭೂದೇವ್ಯಾಭಿಮನ್ಯ ಮಾನ ಚತುರ್ದಶದಲೋಪೇತ ಪದ್ಮ ಸೃಷ್ಟಿಕರ್ತ್ರೇನಮಃ ಓಂ ||

(೪೮) ಓಂ ತನ್ನಾಭಿಕಮಲಾಚ್ಚತುರ್ಮುಖಬ್ರಹ್ಮಾಣಂ ಸೃಷ್ಟ್ವಾ ತದ್ಬ್ರಹ್ಮಣಿ ಲಕ್ಷ್ಮ್ಯಾ ಪ್ರಕೃತ್ಯಾತ್ಮಕೋದಕ ವಾಯುಂ ದೃಷ್ಟ್ವಾ ಭೀತವನ್ನಾಭಿ ಕಮಲ ಪ್ರವಿಷ್ಟೇನಾಲಚ್ಛಿದಾದ್ಬಹಿರಾಗತ್ಯ "ತಪಃ ಕುರ್ವಿ"ತ್ಯಶರೀರ ವಾಣಿಂ ಶ್ರುತ್ವಾ ತಪಃಕೃತ್ವಾ "ಜಲಜೋಽನವಲಕ್ಷಂತು ಸ್ಥಲಜೋಲಕ್ಷ ವಿಂಶತಿ। ಕ್ರಿಮಯೋ ರುದ್ರ ಸಂಖ್ಯಾಶ್ಚ ಪಕ್ಷಿಣಾಂ ದಶಲಕ್ಷಕಂ। ತ್ರಿಂಶ ಲ್ಲಕ್ಷಂತುಪಶ್ವಾದಿ ಚತುರ್ಲಕ್ಷಂತು ಮಾನುಷಂ।" ಇತಿ ಪ್ರಮಾಣೋಕ್ತಾ ಶೀತ್ಯುತ್ತರ ಚತುರ್ಲಕ್ಷ್ಯಯೋನೌ ಏಕಸ್ಯಾಂ ಯೋನೌ ಅನಂತಾನಂತ ಯೋನಿತೋಽಪ್ಯನಂತಾನ್ ಜೀವಗಣಾನ್, ಸ್ವಸ್ವಯೋಗ್ಯತಾ ಕರ್ಮ ಕಾಲಾನುಸಾರೇಣ ಸ್ವಾವಯವಭ್ಯಃ ಸ್ವಾಯಂಭುವ ಮನೋಸ್ತಥಾ ಮರೀಚಾದಿಭ್ಯಃ ಮಿಥುನೀಭಾವಾನ್ನಾನಾ ಪ್ರಕಾರೇಣ ಸೃಷ್ಟ್ವಾ ತೇಷಾಂ ಗರ್ಭೋದಕೇ ಸ್ಥಾತುಂ ಸ್ಥಲಾಯ ತದ್ಬ್ರಹ್ಮಕರ್ತೃಕ ಸ್ತುತಿ ವಿಷಯೋ ಭೂತ್ವಾ ತತ್ಪದ್ಮ ದಲಾನ್ಯುಪಾದಾನೀ ಕೃತ್ಯ ಚತುರ್ದಶ ಲೋಕಾನ್ ಸೃಷ್ಟ್ವಾ ತದಂತಃ ಉದಕಂ ಶೋಷಯಿತ್ವಾ ತೇಷಾಂ ಲೋಕಾನಾಂ ಆವಾಸಾರ್ಥಮಾನುಕೂಲ್ಯಕರ್ತ್ರೇನಮಃ ಓಂ ||

**ದಶಾವತಾರವರ್ಣನಃ :**

(೪೯) ಓಂ ಚತುರ್ದಶ ಮನೂನಾಂ ಮಧ್ಯೇವೈವಸ್ವತಮನೋಃ ಅಷ್ಟಾವಿಂಶೇ ಮಹಾಯುಗೇ ಕ್ರಮಾದವತೀರ್ಣ ದಶಾವತಾರಾಯನಮಃ। ಓಂ ||

(೫೦) ಓಂ ಬ್ರಹ್ಮಣಃ ಏಕಸ್ಮಿನ್ನಹನಿ ಚತುರ್ದಶಮನೂನಾಂ ಚತುರ್ದಶೇಂದ್ರಾಣಾಂ ಸೃಷ್ಟಿಕರ್ತ್ರೇನಮಃ ಓಂ ||

(೫೧) ಓಂ ಸತ್ಯವತ್ಯಾಮವತೀರ್ಣ ವ್ಯಾಸರೂಪಾಯನಮಃ ಓಂ ||

(೫೨) ಓಂ ನಾರಾಯಣ ರೂಪೇಣ ಸಂಹೃತ ಮಧುಕೈಟಭಭಾರಾತ್ ಘನೀಭೂತಾಯ ಸ್ವಯಮೇವ ಗರ್ಭೋದಕೇ ನಿಮಗ್ನಾಯಾಃ ಭೂಮೇರುದ್ಧಾರಾಯ ಸ್ವಾಯಂಭುವೇನ ಸಹ ಬ್ರಹ್ಮಕರ್ತೃಕ ಸ್ತುತಿ ವಿಷಯೋಭೂತ್ವಾ ಸ್ವಾಯಂಭವಮನ್ವಂತರೇ ಸ್ವಯಮೇವ ಸ್ವಾಂಶಾದ್ಬ್ರಹ್ಮನಾಸಾಪುಟಾತ್ ಶ್ವೇತವರಾಹಾವತಾರಂಕೃತ್ವಾ ಭೂಮಿಮುಧೃತ್ಯ ಸ್ಥಾಪಯಿತ್ವಾತನ್ನಿರೋಧಾರ್ಥಮಾಗತಮಾದಿ ಹಿರಣ್ಯಾಕ್ಷಂದಂಷ್ಟ್ರಯಾ ವಿದಾರ್ಯ ಪುನಃ ಕೋಪಾತ್ ಸನಕಾದಿ ಶಪ್ತವಿಜಯೇನ ಸಹ ದಿತ್ಯಾಂ ಜಾತಂ ಭೂಮಿಂ ನಿಮಜ್ಯಂತ ಮಾದಿಹಿರಣ್ಯಾಕ್ಷಂ ವೈವಸ್ವತ ಮನ್ವಂತರೆ ಕರ್ಣತಾಡನಾತ್‌ಸಂಹೃತ್ಯ ದಶಾವತಾರ ಪರಿಗಣಿತ ಶ್ರೀ ವರಾಹರೂಪಾಯನಮಃ ಓಂ ||

(೫೩) ಓಂ ಚಾಕ್ಷುಷಮನ್ವಂತರೆ ಸಮುದ್ರಮಥನಕಾಲೇ ಕೂರ್ಮಾವತಾರಂ ಕೃತ್ವಾ ಮಂದರ ಪರ್ವತ ಮೂಢ್ವಾ ಪುನಃ ವೈವಸ್ವತ ಮನ್ವಂತರೇ ಸಮುದ್ರಮಥನಕಾಲೇ ಮಂದರ ಪರ್ವತಮೂಢ್ವಾ ದಶಾವತಾರ ಪರಿಗಣಿತ ಶ್ರೀ ಕೂರ್ಮರೂಪಾಯನಮಃ ಓಂ ||

**ಶಿಂಶುಮಾರರೂಪ :**

(೫೪) ಓಂ ಶ್ವೇತ ವರಾಹೋಧೃತ ಭೂಮೇಃ ಸಪ್ತದ್ವೀಪಾಂತರ್ಗತ ಲಕ್ಷಯೋಜನ ಜಂಬು ದ್ವೀಪಮಧ್ಯಸ್ಥ ಚತುಸ್ತ್ರಿಂಶತ್ ಸಹಸ್ರ ಪರಿಮಿತೇಲಾವೃತ ಖಂಡಮಧ್ಯೇ ಲಕ್ಷಯೋಜನೋಚ್ಛ್ರಿತ ಸುವರ್ಣ ರತ್ನತೇಜೋಮಯ ಮೇರು ಪರ್ವತೇ ಅಷ್ಟದಿಕ್ಪಾಲಾನಾಂ ಗೃಹೋಪೇತೇ ವೃಶ್ಚಿಕಾಕಾರೇಣ ಸ್ಥಿತ್ವಾ ಮುಖೇನ ತಂ ಪರ್ವತಂ ಧೃತ್ವಾ ಪುಚ್ಛಭಾಗಮೂರ್ಧ್ವೇ ಕೃತ್ಯ ದಶಸಹಸ್ರಯೋಜನೋಚ್ಛ್ರಿತ ಚತ್ವಾರಿಂಶತ್ ಸಹಸ್ರಯೋಜನಾಯತ ಮಂಡಲಾಂತರ್ಗತ ರಾಹುಕೇತೋಃ ಅಪಸವ್ಯೇನ ಗತಿಂಪ್ರಾಪಯತ್ವಾ ಲಕ್ಷಯೋಜನೋಚ್ಛ್ರಿತದಶ ಸಹಸ್ರ

ಯೋಜನಾಯತ ಮಂಡಲಾಂತರ್ಗತ ಸೂರ್ಯಸ್ಯ ಪ್ರತಿದಿವಸಂ ನವ ಕೋಟ್ಯುತ್ತರ ಏಕಪಂಚಾಶಲ್ಲ ಯೋಜನ ಪರ್ಯಂತಂ ಗತಿಂ ಪ್ರದಾಯ ದ್ವಿಲಕ್ಷಯೋಜನೋಚ್ಛ್ರಿತ ವಿಂಶತ್ಸಹಸ್ರ ಯೋಜನಾಯಿತ ಮಂಡಲಾಂತರ್ಗತ ಚಂದಸ್ಯ, ಚತುರ್ಲಕ್ಷ ಯೋಜನೋಚ್ಛ್ರಿತ ಮಂಡಲಾಂತರ್ಗತ ಮಂಗಲಸ್ಯ, ಷಟ್ ಲಕ್ಷ ಯೋಜನೋಚ್ಛ್ರಿತ ಮಂಡಲಾಂರ್ಗತ ಬುಧಸ್ಯ ಅಷ್ಟಲಕ್ಷ ಪರಿಮಿತ ಮಂಡ-ಲಾಂತರ್ಗತ ಗುರೋಃ, ದಶಲಕ್ಷ ಪರಿಮಿತ ಮಂಡಲಾಂರ್ಗತ ಶುಕ್ರಸ್ಯ ದ್ವಾದಶಲಕ್ಷ ಪರಿಮಿತ ಮಂಡಲಾಂತರ್ಗತ ಶನೈಶ್ಚರಸ್ಯ ತ್ರಯೋದಶಲಕ್ಷ ಯೋಜನೋಚ್ಛ್ರಿತ ಮಂಡಲಾಂತರ್ಗತ ಸಪ್ತಋಷೀಣಾಂ ಪ್ರದಕ್ಷಿಣತಃಸಂಚಾರಂ ಪ್ರಾಪಯಿತ್ವಾ ಅಧಿಕಾರಿ ಭೇದೇನ ಮುಕ್ತಾಮುಕ್ತ ಸ್ಥಾನ ನಿಯುಕ್ತ ಷಟ್ ತ್ರಿಂಶಲಕ್ಷ ಯೋಜನೋಚ್ಛ್ರಿತ ಮಂಡಲಾಂತರ್ಗತ ಪರಮ ಭಾಗವತ ಧ್ರುವಕತೃಕ ಸ್ತುತಿ ವಿಷಯ ಶಿಂಶುಮಾರ ರೂಪಾಯ ನಮಃ ಓಂ ||

**ನವಖಂಡವರ್ಣನ :**

(೫೫) ಓಂ ಇಲಾವೃತ ನಾಮಕ ರಾಜಾಧಿಷ್ಟಿತೇಲಾವೃತ ಖಂಡೆ ಪಾರ್ವತ್ಯುಪಾಸ್ಯ ರುದ್ರಾಂತರ್ಗತ ಸಂಕರ್ಷಣರೂಪಾಯನಮಃ ಓಂ ||

(೫೬) ಓಂ ಗಂಧಮಾದನ ಪರ್ವತ ವ್ಯವಹಿತ ತ್ರಿಂಶತ್ಸಹಸ್ರಯೋಜನ ಭದ್ರಾಶ್ವ ಖಂಡೇ ಭದ್ರಾಶ್ವನಾಮಕ ರಾಜೋಪಾಸ್ಯ ಹಯಗ್ರೀವ ರೂಪಾಯನಮಃ ಓಂ ||

(೫೭) ಓಂ ಮಾಲ್ಯವಾನ್ನಾಮಕ ಪರ್ವತ ವ್ಯವಹಿತ ಕೇತುಮಾಲಾನಾಮಕ ರಾಜಾಧಿಷ್ಟಿತ ಕೇತುಮಾಲಖಂಡೇ ರತಿದೇವ್ಯುಪಾಸ್ಯಕಾಮಾಂತರ್ಯಾಮಿ ಪ್ರದ್ಯುಮ್ನರೂಪಾಯನಮಃ ಓಂ ||

(೫೮) ಓಂ ರಮಣ ನಾಮಕ ರಾಜಾಧಿಷ್ಟಿತ ನವಸಹಸ್ರಯೋಜನ ರಮಣಕ (ರಮ್ಯಕ) ಖಂಡೇ ವೈವಸ್ವತಮನೂಪಾಸ್ಯಮತ್ಸ್ಯ ರೂಪಾಯನಮಃ ಓಂ ||

(೫೯) ಓಂ ಶ್ವೇತನಾಮಕ ಪರ್ವತ ವ್ಯವಹಿತ ನವಸಹಸ್ರ ಯೋಜನ ಹಿರಣ್ಮಯ ಖಂಡೇ, ಹಿರಣ್ಮಯನಾಮಕ ರಾಜಾಧಿಷ್ಟಿತಪಿತೃಗಣಾಧಿಪತಿ ಯಮೋಪಾಸ್ಯಕೂರ್ಮರೂಪಾಯನಮಃ ಓಂ ||

(೬೦) ಓಂ ಶೃಂಗವನ್ನಾಮಕ ಪರ್ವತವ್ಯವಹಿತ, ಕುರು ರಾಜಾಧಿಷ್ಟಿತ ನವ ಸಹಸ್ರ ಯೋಜನ ಪರಿಮಿತ ಕುರುಖಂಡೇ ಭೂದೇವ್ಯೋಪಾಸ್ಯ ವರಾಹರೂಪಾಯನಮಃ ಓಂ ||

(೬೧) ಓಂ ಹರಿವರ್ಷನಾಮಕ ರಾಜಾಧಿಷ್ಟಿತ ನವಸಹಸ್ರಯೋಜನ ಪರಿಮಿತ ಹರಿವರ್ಷ ಖಂಡೇ ಪ್ರಹ್ಲಾದೋಪಾಸ್ಯ ಶ್ರೀನರಸಿಂಹರೂಪಾಯನಮಃ ಓಂ ||

(೬೨) ಓಂ ನವಸಹಸ್ರಯೋಜನಪರಿಮಿತ ಕಿಂಪುರುಷಖಂಡೇ ವಾಯ್ವವತಾರ ಶ್ರೀಹನುಮದುಪಾಸ್ಯ ಶ್ರೀಸೀತಾಪತಿ ಶ್ರೀರಾಮಚಂದ್ರರೂಪಾಯ ನಮಃ ಓಂ ||

(೬೩) ಓಂ ಕರ್ಮಭೂಮೀಭೂತ ಸಾಧನಸಂಪತ್ಕಾರಣ ನವಸಹಸ್ರಯೋಜನ ಅಂಜನಾಭನಾಮಕ ರಾಜಾಧಿಷ್ಟಿತ ಅಂಜನಾಭಖಂಡೆ, ಭರತಪಾಲಿತತ್ವಾತ್ ಭರತಸಂಜ್ಞಕೇ ನಾರದೋಪಾಸ್ಯ ಶ್ರೀನರನಾರಾಯಣ ರೂಪಾಯ ನಮಃ ಓಂ ||

## ದೇವತಾ ತಾರತಮ್ಯ ೬೪ ರಿಂದ ೯೭ ಪುಷ್ಪಗಳವರೆಗೆ

(೬೪) ಓಂ ದೇಶಕಾಲಾಭ್ಯಾಂ ಭಗವತ್ಸಮಯಾ ಗುಣತಶ್ಚಾನಂತಾನಂತ ಪ್ರಕಾರೇಣಾಧಮಯಾ ಅನಂತ ವೇದೋಕ್ತ ತದನುಕ್ತ ಭಾರತೋಕ್ತ ತದನುಕ್ತಾನಂತ ಗುಣಕ್ರಿಯೋಪಸಂಹಾರೇಣೋಪಾಸಿತಾನಂತ ರೂಪಾಯನಮಃ ಓಂ ||

(೬೫) ಓಂ ಕೋಟಿಗುಣತಃ ರಮಾನೀಚಾಭ್ಯಾಂ ಸರ್ವಜೀವೋತ್ತಮಾಭ್ಯಾಂ ಈಶಾದನ್ಯತ್ರಾಲೋಚನೆ ಸರ್ವವಿಷಯಕೇಣ ಆಮುಕ್ತಿಕ್ರಮೇಣ ವರ್ಧಮಾನೇನ ಪ್ರಾಯಃ ಪ್ರಲಯೇಪ್ಯವಿಚ್ಛಿನ್ನೇನ ವೃತ್ತಿಜ್ಞಾನೋಪೇತಾಭ್ಯಾಂ ನಿಜಭಕ್ತಾಭ್ಯಾಂ ಮಹತ್ತತ್ವವಿಜ್ಞಾನ ತತ್ವಾಭಿಮಾನಿ

ಬ್ರಹ್ಮ ವಾಯುಭ್ಯಾಂ ಉಪಾಸಿತ ಸ್ತ್ರೀಪುರುಷಾದ್ಯನಂತರೂಪಾಯ ನಮಃ ಓಂ ||

(೧೬) ಓಂ ಸ್ವಪತ್ಯಪೇಕ್ಷಯಾಶತಗುಣ ನೀಚಾಭ್ಯಾಂ ವೇದಭಕ್ತ್ಯಭಿಮಾನಿ ಸರಸ್ವತೀ ಭಾರತೀಭ್ಯಾಂ ಕ್ರಿಯಾಸಾಮಾನ್ಯೇನೋಪಾಸಿತಾನಂತ ಗುಣಾಯನಮಃ ಓಂ ||

(೧೭) ಓಂ ಭಾರತ್ಯಾದೇಃಶತಗುಣ ನೀಚೇಭ್ಯಃ ಕ್ರಮಾತ್ ಕಾಲ ಜೀವಾ ಹಂಕಾರಾಭಿಮಾನಿ ಗರುಡ ಶೇಷ ರುದ್ರೇಭ್ಯಃ ಸಮುಪಾಸಿತ ಬಹು ಗುಣಾಯನಮಃ ಓಂ ||

(೧೮) ಜಾಂಬವತ್ಯಾ ಲಕ್ಷ್ಮ್ಯಾವೇಶ ಹ್ರಾಸಾಭಾವೇನ ಸದಾ ಬಲರಾಮ ಸಮತ್ವೇಪಿ, ನೀಲಾ, ಭದ್ರಾ, ಮಿತ್ರವಿಂದಾ, ಕಾಲಿಂದೀ, ಲಕ್ಷಣಾ ರೂಪ ಪಂಚಸ್ತ್ರೀಣಾಂ ಕೃಷ್ಣಾಂಗಸಂಗಾಭಾವಕಾಲೆ, ಛಾಂದೋಗ್ಯ ಭಾಷ್ಯಾನು ಸಾರೇಣ ಶೇಷಾದಿಭ್ಯಃ ಪಂಚಗುಣಾಧಮತ್ವಾತ್ ಸ್ವಯೋಗ್ಯತಾನುಸಾರೇಣ ಜಾಂಬವತ್ಯಾದಿಷಣ್ಮಹಿಷ್ಯುಪಾಸ್ಯ ಅನೇಕ ಗುಣಾಯನಮಃ ಓಂ ||

(೧೯) ಓಂ ಸ್ವಪತ್ಯಪೇಕ್ಷಯಾ ದಶಗುಣ ನೀಚಾಭ್ಯಃ ಸೌಪರ್ಣೀ ವಾರುಣೀ, ಬುಧ್ಯಭಿಮಾನಿ ಉಮಾಭ್ಯಃ ಸಮುಪಾಸಿತಾಯನಮಃ ಓಂ ||

(೨೦) ಓಂ ಸೌಪರ್ಣ್ಯಾದಿಭ್ಯಃ ಶತಗುಣನೀಚಾಭ್ಯಾಂ ಐಶ್ವರ್ಯ ವೈರಾಗ್ಯಾ ಭಿಮಾನಿ ಇಂದ್ರಕಾಮಾಭ್ಯಾಂ ಸಮುಪಾಸಿತ ಬಹುಗುಣಾಯನಮಃ ಓಂ ||

(೨೧) ಓಂ ಇಂದ್ರಾದ್ದಶಗುಣ ನೀಚ ತ್ವಗೀಂದ್ರಿಯಾಭಿಮಾನ್ಯಹಂಕಾರಕ ಪ್ರಾಣೋಪಾಸ್ಯಾಯನಮಃ ಓಂ ||

(೨೨) ಓಂ ಅಹಂಕಾರಿಕಪ್ರಾಣಾದ್ದಶಗುಣಾಧಮೋಭಿಃ ಕಾಮಪುತ್ರಾನಿರುದ್ಧ ಬೃಹಸ್ಪತಿ, ಸ್ವಾಯಂಭುವಮನು, ದಕ್ಷ, ಶಚಿ, ರತಿಭಿಃ ಸಮುಪಾಸಿತಾಯನಮಃ ಓಂ ||

(೨೩) ಓಂ ಅನಿರುದ್ಧಾತ್ ಪಂಚಗುಣ ನೀಚ ಭೂತವಾಯ್ವಭಿಮಾನಿಮರೀಚಿ ನಾಮಕ ಕೋಣಾಧಿಪತಿ ಪ್ರವಹವಾಯೂಪಾಸ್ಯಾಯನಮಃ ಓಂ ||

(೭೪) ಓಂ ಪ್ರವಹವಾಯೋಃದಶಗುಣಾಧಮಾಭಿಃಯಮ, ವಿವಸ್ವಾನ್ನಾಮಕ ಸೂರ್ಯ, ಚಂದ್ರ, ಸ್ವಾಯಂಭುವಪತ್ನಿ ಶತರೂಪಾಭ್ಯಾಂ ಸಮುಪಾಸಿತಾಯನಮಃ ಓಂ ||

(೭೫) ಓಂ ಯಮಾತ್ಪಾದಪಾದಾರ್ಧಗುಣಾವರ ವರುಣೋಪಾಸ್ಯಾಯನಮಃ ಓಂ ||

(೭೬) ಓಂ ವರುಣಾತ್ ಕಿಂಚಿನ್ನೀಚನಾರದೋಪಾಸ್ಯಾಯನಮಃ ಓಂ ||

(೭೭) ಓಂ ವರುಣಾತ್ಪಾದ ನೀಚ ಭೃಗ್ವಗ್ನಿದಕ್ಷಭಾರ್ಯಾ, ಪ್ರಸೂತ್ಯುಪಾಸ್ಯಾಯನಮಃ ಓಂ ||

(೭೮) ಓಂ ಭೃಗೋಃ ಪಾದಪಾದಾರ್ಧನ್ಯೂನೈಃ ಮರೀಚ್ಯತ್ರಿ ಅಂಗೀರ ಪುಲಸ್ತ್ಯಪುಲಹ ಕ್ರತುವಸಿಷ್ಠಾತ್ಮಕ ಬ್ರಹ್ಮಪುತ್ರಸಪ್ತರ್ಷಿ ವಿಶ್ವಾಮಿತ್ರ ವೈವಸ್ವತಮನುಭಿಃ ಸಮುಪಾಸಿತಾಯನಮಃ ಓಂ ||

(೭೯) ಓಂ ಮಿತ್ರನಾಮಕ ಸೂರ್ಯ, ಬೃಹಸ್ಪತಿ ಸ್ತ್ರೀತಾರಾ, ಅಧರ್ಮಾಭಿಮಾನಿ ಕೋಣಾಧಿಪತಿ ನಿಋತಿ, ಪ್ರವಹಪತ್ನೀಭಿಃ ಅಗ್ನ್ಯಾದ್ಯಪೇಕ್ಷಯಾ ದ್ವಿಗುಣ ನೀಚಾಭ್ಯಃ, ಮರೀಚಾದಿಭ್ಯಃ ಕಿಂಚಿನ್ನೀಚಾಭ್ಯಾಂ ಸಮುಪಾಸಿತಾಯನಮಃ ಓಂ ||

**ಶೇಷ ಶತಸ್ಥರು**

(೮೦) ಓಂ ಪ್ರಧಾನವಾಯು, ಮುಖ್ಯರುದ್ರೇಂದ್ರಾಹಂಕಾರಿಕ ಪ್ರಾಣ ಬ್ರಹಸ್ಪತಿ ಪ್ರವಹ ವಿವಸ್ವದ್ವರುಣ ವಿಶ್ವಾಮಿತ್ರಾಣಾಂ ಶ್ರೇಷ್ಠತಯಾ ಉಕ್ತತ್ವೇನ ಪರ್ಜನ್ಯಸ್ಯನೀಚತಯಾ ಉಕ್ತತ್ವೇನ ತದತಿರಿಕ್ತ ಸೋಮಪಾನಾರ್ಹ ಶತಸ್ಥದೇವತಾನಾಂ ಆಕಾಶಾಭಿಮಾನಿ ಗಣಪತಿ ಧನಾಭಿಮಾನಿ ಕುಬೇರ ವಿಷ್ವಕ್ಸೇನೈಶ್ಚ ಸಮುಪಾಸಿತಾಯನಮಃಓಂ||

**ಏಕಾದಶಮನುಗಳು**

(೮೧) ಓಂ ತಾಪಸ ಸ್ವಾಯಂಭುವ ವೈವಸ್ವತಾನ್ ವರ್ಜಯಿತ್ವಾ ಸ್ವಾರೋಚಿಷಃ ಉತ್ತಮಃ ರೈವತಃ ಚಾಕ್ಷುಷಮನುಃ ಸಾವರ್ಣಿಃ ಬ್ರಹ್ಮಸಾವರ್ಣಿಃ ರುದ್ರ ಸಾವರ್ಣಿಃ ವೇದಸಾವರ್ಣಿಃ ಇಂದ್ರಸಾವರ್ಣಿಃ ದಕ್ಷಸಾವರ್ಣಿಃ ಧರ್ಮಸಾವರ್ಣಿಃ **ಏತೇ ಏಕಾದಶಮನುಭಿಃ**

**ಸಪ್ತೇಂದ್ರರು:**

ಯಜ್ಞಸ್ಯನಾರಾಯಣತ್ವೇನ, ರೋಚನಸ್ಯ ವಾಯುಸ್ವರೂಪತಯಾ, ಸತ್ಯಜಿತಃ ಯಮಾತ್ಮಕತ್ವೇನ, ತ್ರಿಶಿಖ ವಿಭ್ವೋರಶ್ವಿನ್ಯಾತ್ಮಕತ್ವೇನ, ಪುರಂದರ ಪ್ರದ್ಯುಮ್ನಯೋರಿಂದ್ರ ಸರೂಪತ್ವೇನ, ಅವಶಿಷ್ಟಬಲ್ಯದ್ಭುತ ಶಂಭು ವಿಧೃತ ಋತಧಾಮಕ ದಿವಸ್ಪತಿ ಶಚ್ಯಾತ್ಮಕ **ಸಪ್ತೇಂದ್ರೈಃ**

**ಶತರಾಜರು**

ಪ್ರಹ್ಲಾದ, ಕಾರ್ತವೀರ್ಯ, ಪೃಥು, ಶಶಿಬಿಂದು, ಪ್ರಿಯವ್ರತ, ದೌಷ್ಯಂತಿ–ಭರತ, ಭರತರ್ಷಭ, ಋತು, ಕಕುಸ್ಥ, ಗಯ, ಮಾಂಧಾತೃ ಪ್ರಮುಖೈಃ ರಾಜಾಭಿಃ

**ತಥಾ**

ಚವನೋಚಥ್ಯ ಋಷೀ ಅಷ್ಟಗಂಧರ್ವಾ ಶ್ಚೈತೇಷಾಂ ಕರ್ಮಜ ದೇವಾನಾಂ ಶತಸ್ಥಾಪೇಕ್ಷಯಾ ಕಿಂಚಿನ್ನೀಚಾನಾಂ ಮಿತ್ರತಃ ಪಂಚ ಗುಣಾಧಮೈಃಸಮುಪಾಸ್ಯಾಯನಮಃ ಓಂ ||

(೮೨) ಓಂ ಕರ್ಮಜದೇವತೇಭ್ಯಶ್ಚತುರ್ಗುಣ ನೀಚೇಭ್ಯಃ ವರುಣಭಾರ್ಯಾ ಗಂಗಾ, ಯಮಸ್ತ್ರೀಶಾಮಲಾ, ಚಂದ್ರಪತ್ನೀರೋಹಿಣೀ, ಅನಿರುದ್ಧ ಭಾರ್ಯೋಷಾ, ವಿವಸ್ವತ್ಸೂರ್ಯಭಾರ್ಯಾಸಂಜ್ಞಾ, ವೃಷ್ಟ್ಯಭಿ ಮಾನಿ ಪರ್ಜನ್ಯೈಃ ಸಮುಪಾಸಿತಾಯನಮಃ ಓಂ ||

(೮೩) ಓಂ ಪರ್ಜನ್ಯಾನ್ನೀಚಾನುಕ್ತ ದೇವೋಪಾಸ್ಯಾಯನಮಃ ಓಂ ||

(೮೪) ಓಂ ಸೂರ್ಯಾದ್ವಿಗುಣನೀಚಯಾಪರ್ಜನ್ಯಾದ್ವಿಂಶತಿಗುಣನೀಚಯಾ ಅಗ್ನಿಭಾರ್ಯಾಸ್ವಾಹಯೋಪಾಸ್ಯಾಯನಮಃ ಓಂ ||

(೮೫) ಓಂ ಸ್ವಾಹಾನ್ಯೂನ ಬುಧೋಪಾಸ್ಯಾಯನಮಃ ಓಂ ||

(೮೬) ಓಂ ಬುಧಾನ್ಯೂನಯಾ ದಶಗಣತಃ ಸ್ವಾಹಾನ್ಯೂನಯಾ ಉಷ ಯೋಪಾಸ್ಯಾಯನಮಃ ಓಂ ||

(೮೭) ಓಂ ಉಷಾನ್ಯೂನಶನೈಶ್ಚರೋಪಾಸ್ಯಾಯನಮಃ ಓಂ ||

(೮೮) ಓಂ ಶನೈಶ್ಚರಾಧಮಪುಷ್ಕರೋಪಾಸ್ಯಾಯನಮಃ ಓಂ ||

(೮೯) ಓಂ ಪುಷ್ಕರಾತ್ ಕಿಂಚಿನ್ನೀಚಾನಾಂ ಆಜಾನಜದೇವಾನಾಂ ತುಂಬರು ಪ್ರಮುಖ ಶತ ಗಂಧರ್ವಾಣಾಂ, ಪೂರ್ವೋಕ್ತ ಋಷೀನ್ ವಿಹಾಯ ಸಮಸ್ತ ಋಷೀಣಾಂ ನವಕೋಟಿದೇವಾನಾಂ ಮಧ್ಯೆ ಅಪ್ರಸಿದ್ಧ ದೇವಾನಾಂಉರ್ವಸೀ, ರಂಭಾ, ಮೇನಕಾ, ತಿಲೋತ್ತಮಾ, ಪೂರ್ವಚಿತೀ, ಘೃತಾಚೀ, ಪ್ಲೇಮ್ಲೋಚನಾ, ಅನುಮ್ಲೋಚನಾ, ಕೃತ ಸ್ಥಲೀ, ಕೃತ ಪ್ರಭೃತಿ ಸಹಸ್ರ ಶತಾಪ್ಸರಸಾಂ ಅಜಗರ ಸ್ವರೂಪ ವಿದ್ಯಾಧರ ಶತಾಧಿಕ ಷೋಡಶ ಸಹಸ್ರ ಸಂಖ್ಯಾಕಾಗ್ನಿ ಪುತ್ರಾತ್ಮಕ ಕೃಷ್ಣಭಾರ್ಯಾಣಾಂ ಕರ್ಮಜದೇವೇಭ್ಯಾಂ ಶತಗುಣ ನೀಚಾಭಿಃ ಸಮುಪಾಸ್ಯಾಯನಮಃ ಓಂ ||

(೯೦) ಓಂ ಅಗ್ನಿಪುತ್ರೇಭ್ಯಃ ದ್ವಿಗುಣಾಧಮ ಗೋಪ್ಯುಪಾಸ್ಯಾಯನಮಃ ಓಂ

(೯೧) ಓಂ ಅಗ್ನಿಪುತ್ರೇಭ್ಯಃ ಸಹಸ್ರಗುಣೋತ್ತಮಯಶೋದೋಪಾಸ್ಯಾಯನಮಃ ಓಂ ||

(೯೨) ಓಂ ಯಶೋದೋತ್ತಮಾದಿತ್ಯ ಉಪಾಸ್ಯಾಯನಮಃ ಓಂ ||

(೯೩) ಓಂ ಪುಷ್ಕರಾಚ್ಛತಗುಣಾಧಮ ಉಕ್ತಾನ್ಯಚಿರಪಿತೃಭಿಃ ಉಪಾಸ್ಯಾಯನಮಃ ಓಂ ||

(೯೪) ಓಂ ಚಿರಪಿತೃಭ್ಯಃ ಶತಾಧಮಾಷ್ಟೋತ್ತರ ಶತಗಂಧರ್ವಾತಿರಿಕ್ತದೇವಗಂಧರ್ವೋಪಾಸ್ಯಾಯನಮಃ ಓಂ ||

(೯೫) ಓಂ ದೇವಗಂಧರ್ವಾಪೇಕ್ಷಯಾ ಶತಾಧಮ ಮನುಷ್ಯ ಗಂಧರ್ವೋಪಾಸ್ಯಾಯನಮಃ ಓಂ ||

(೯೬) ಓಂ ಮನುಷ್ಯಗಂಧರ್ವಾಪೇಕ್ಷಯಾ ಶತಾಗುಣಾಧಮ ಕ್ಷಿತಿಪೋಪಾಸ್ಯಾಯನಮಃ ಓಂ ||

(೯೭) ಓಂ ಕ್ಷಿತಿಪಾಪೇಕ್ಷಯಾ ಶತಾಗುಣಾಧಮ ಮನುಷ್ಯೋತ್ತಮೋಪಾಸ್ಯಾತ್ಮಾಖ್ಯ ಬಿಂಬರೂಪಾಯನಮಃ ಓಂ ||

|| ಇತಿ ಶ್ರೀಮತ್ಸತ್ಯಪರಾಕ್ರಮತೀರ್ಥಪೂಜ್ಯಪಾದ ವಿರಚಿತಾ ಪ್ರಮೇಯಮಾಲಾ ಸಮಾಪ್ತಾ ||

★ ಶ್ರೀಮಧ್ವೇಶಾರ್ಪಣಮಸ್ತು ★

ಶ್ರೀದಿಗ್ವಿಜಯರಾಮೋ ವಿಜಯತೆ

# ಶ್ರೀಸತ್ಯವ್ರತತೀರ್ಥ ಗುರುಸ್ತೋತ್ರಮ್

## ಶ್ರೀಸತ್ಯಪರಾಕ್ರಮತೀರ್ಥ ವಿರಚಿತಮ್

ಶ್ರೀಮದ್ವಿಷ್ಣುಪದೋದ್ಭಾಸಂ ಯಶೋಭಾಸಾ ಸದೋಜ್ವಲಮ್ ।
ಅಕಲಂಕಂ ಶ್ರಯೇ ಶಾಂತ್ಯಂ ಸತ್ಯವ್ರತಸುಧಾಕರಮ್ ॥ ೧ ॥

ನಿತ್ಯಂ ಪ್ರಸನ್ನಂ ಭಗವತ್ಸತ್ಯವತ್ಯಾತ್ಮಜ ಪ್ರಿಯಮ್ ।
ಅತ್ಯದ್ಭುತೋರು ಮಾಹಾತ್ಮ್ಯಂ ಭಜೇ ಸತ್ಯವ್ರತಂಗುರುಂ ॥ ೨ ॥

ಸುಧಾವಿವೃತಿಕರ್ತಾರಂ ವಸುಧಾದೇವಪೂಜಿತಂ ।
ಮೇಧಾವಿಸ್ತುತ ವೈದುಷ್ಯಂ ಸೇವೆ ಸತ್ಯವ್ರತಂ ಗುರುಂ ॥ ೩ ॥

ಸರ್ವಾಭೀಷ್ಟಪ್ರದಾತಾರಂ ಸರ್ವವಿಘ್ನನಿವಾರಕಂ ।
ಗೀರ್ವಾಣಗೇಯ ಚರಿತಂ ನೌಮಿ ಸತ್ಯವ್ರತಂ ಗುರುಂ ॥ ೪ ॥

ಕೃಷ್ಣಾಂಘ್ರಿಪದ್ಮಮಧುಪಃ ಕೃಷ್ಣಾರೋಧಸಿಭಾಸುರಃ ।
ಕೃಷ್ಣವರ್ತ್ಮನಿಭಃಪಾಪ-ತೂಲರಾಶೌ ಗುರೂಶ್ರಯೇ ॥ ೫ ॥

ವಂದಾರು ವೃಂದಾರಕ ನಂದನದ್ರುಮಂ ।
ವೃಂದಾವನೇಽಲಂಭಜತಾಂಜನಾನಾಂ ॥
ವೃಂದಾವನೇಸಂತತ ಜಾಗರೂಕಂ ।
ಕರ್ಮಂದಿವೃಂದಾರಕ ಮಾನತೋಸ್ಮಿ ॥ ೬ ॥

ಸತ್ಸಂಧತೀರ್ಥಮುನಿಭಿಃ ಕ್ರಿಯಮಾಣಮೂಲ ।
ರಾಮಾರ್ಚನೇ ಪ್ರಮುದತಶ್ಶಿರಸೋನಿತಾಂತಮ್ ॥
ಆಂದೋಲನಾತ್ಸಪದಿ ಯಸ್ಯಚಚಾಲಭವ್ಯ ।
ವೃಂದಾವನಂ ತಮಿಹನೌಮಿ ಮಹಾನುಭಾವಮ್ ॥ ೭ ॥

ವಚಃಸತ್ಯಂ ವ್ರತಃಸತ್ಯಂ ಸತ್ಯಶ್ಚಮಹಿಮಾದ್ಭುತಃ ।
ಅತಃಸತ್ಯಾಭಿದಂ ಸೇವೆ ಶ್ರೀಸತ್ಯವ್ರತ ಸದ್ಗುರುಮ್ ॥ ೮ ॥

ಯತ್ಕೀರ್ತಿ ಶ್ರವಣಂ ಮಹಾರ್ತಿಹರಣಂ ಪ್ರಜ್ಞಾನವಸ್ಫೂರ್ತಿದಂ ।
ಯತ್ಪಾದೋದಕ ಸೇವನಂ ನವನವಶ್ಶ್ರೇಯ ಸೋದ್ಭಾವನಮ್ ॥
ಯದ್ಧಸ್ತೋದಕ ಪಾವನೋದನಮಹೋ ಸಚ್ಛಾಂತಿ ಸಂತಾನದಂ
ಶ್ರೀಸತ್ಯವ್ರತಯೋಗಿನಂ ನತಜನ ಶ್ರೇಯೋವ್ರತಂ ತಂ ಶ್ರಯೇ ॥೯॥

ಅಂಧೋಽಪಿ ಸೂಕ್ಷ್ಮದೃಷ್ಟಿಸ್ಸ್ಯಾತ್ ವಂಧ್ಯಾಸ್ಯಾದಿಷ್ಟಸಂತತಿಃ ।
ಮೂಕೋವಾಗ್ಮಿತ್ವಮಾಪ್ನೋತಿ ಶ್ರೀಸತ್ಯವ್ರತಸೇವಯಾ ॥ ೧೦ ॥

ರೋಗೀ ಬಲವದಾರೋಗ್ಯ ಭಾಗ್ಯಭೋಗೀಭವೇದ್ಧ್ರುವಮ್ ।
ಬಧಿರೋಮಧುರಾಲಾಪ ಶ್ರವಣಾತ್ಸುಖಮಾಪ್ನುಯಾತ್ ॥೧೧॥

ಅಜ್ಞಂಕರೋತಿಯಃ ಪ್ರಾಜ್ಞಂ ರಂಕಂರಾಜಾಧಿಕಂ ಶ್ರಿಯಾ ।
ವಿಪನ್ನಂ ಸುಖಸಂಪನ್ನಂ ತಂ ಶ್ರೀಸತ್ಯವ್ರತಂ ಭಜೇ ॥ ೧೨ ॥

ಸರ್ವಸಂಪತ್ಪ್ರದಾತಾರಂ ಸರ್ವಾಪತ್ಪರಿಹಾರಕಂ ।
ಕರುಣಾವರುಣಾಗಾರಂ ಸೇವೇಸತ್ಯವ್ರತಂಗುರುಂ ॥ ೧೩ ॥

ಸ್ಮರಣಂ ದುರಿತೌಘಾದ್ರಿ ದಾರಣೇ ದಾರುಣಾಶನಿಃ ।
ಚಿಂತನಂ ಚ ಗುರೋರ್ಭಕ್ತ್ಯಾ ಚಿಂತಾಶತ ನಿಕೃಂತನಂ ॥ ೧೪ ॥

ಪ್ರದಕ್ಷಿಣಾಸ್ತಥಾಽಕ್ಷೇಣ ಫಲದಾನ ವಿಚಕ್ಷಣಾಃ ।
ನಮಸ್ಕಾರಾಸ್ಸುಸತ್ಕಾರ ಪುರಸ್ಕಾರಪ್ರದಾಧ್ರುವಮ್ ॥ ೧೫ ॥

ಸ್ತೋತ್ರಮೇತತ್ಪಠನ್ನಿತ್ಯ ಭಕ್ತ್ಯಾ ಸೇವಾಂಕರೋತಿಯಃ ।
ಸತ್ಯಪ್ರಸನ್ನೋಽಭಿಷ್ಟಾನಿ ದದಾತಿ ಮುನಿರಾಡ್ ಗುರುಃ ॥ ೧೬ ॥

ಸತ್ಯವ್ರತಾನುಕಂಪಾಪ್ತ ಸದ್ಯೋವಿದ್ಯಾವಿಲಾಸಿನಾ ।
ಸತ್ಯಪರಾಕ್ರಮ ತೀರ್ಥೇನ ಕೃತಂ ಸ್ತೋತ್ರಮಿದಂ ಶುಭಂ ॥ ೧೭ ॥

ಶ್ರೀಸತ್ಯಪರಾಕ್ರಮ ವಿರಚಿತಂ
ಶ್ರೀಸತ್ಯವ್ರತಸ್ತೋತ್ರಂ ಸಂಪೂರ್ಣಂ
ಶ್ರೀ ಕೃಷ್ಣಾರ್ಪಣಮಸ್ತು
(ಶ್ರೀವಾದಿರಾಜಾಚಾರ್ಯ ವಾಯಿ ಇವರಿಂದ ಸಂಪಾದಿತವು)

# ಶ್ರೀಸತ್ಯಪರಾಕ್ರಮತೀರ್ಥಗುರುಸ್ತೋತ್ರಗಳು

## ಸ್ತೋತ್ರ – ೧

ಹರಿಃ ಓಂ

**ಶ್ರೀಸತ್ಯೇಷ್ಟಕರೋದಯಾಚ್ಚಲವರಾತ್ ಸಂಜಾಯಮಾನೇನವೇ ।**
**ಶ್ರೀಮತ್ಸತ್ಯಪರಾಕ್ರಮಾಹ್ವಯ ಜಗನ್ನೇತ್ರೇಜಗದ್ವಂದಿತೇ ॥**
**ಮಿಥ್ಯಾವಾದಿ ನಿಶಾಟಾನಾಶ್ಚನಯನೈಃಹೀನಾಬಭೂವುರ್ಭೃಶಂ ।**
**ಮಾಧ್ವಾನಾಂ ನಯನಾಂಬುಜಾನಿಚತದಾಪ್ರಾಪುರ್ವಿಕಾಸಂ**
**ಪರಂ ॥ ೧ ॥**

ಉದಯಾಚಲಪರ್ವತದಿಂದ ಜಗದ್ವಂದ್ಯನಾದ ಸೂರ್ಯನು ಉದಯಿಸಿ ಜಗತ್ತಿನ ಜನರಿಗೆ ದೃಷ್ಟಿಸಾಮರ್ಥ್ಯ ನೀಡುವಂತೆ, ಶ್ರೀಸತ್ಯೇಷ್ಟರು ಎಂಬ ಯತಿವರ್ಯರ ಕರಕಮಲ ಸಂಜಾತರಾದ ಶ್ರೀಸತ್ಯಪರಾಕ್ರಮತೀರ್ಥರು ಉದಯಿಸಿ, ನವೀನ ಸೂರ್ಯನಂತೆ ಸಜ್ಜನರಿಗೆ ಜ್ಞಾನ ದೃಷ್ಟಿಯನ್ನು ಕೊಟ್ಟರು. ಮತ್ತು ರವಿ ಉದಯಿಸಲಾಗಿ ರಾತ್ರಿ ಚರಪ್ರಾಣಿಗಳಿಗೆ ಕಣ್ಣಿಲ್ಲದಂತೆ ಆಗಿ ಚಲನಸಾಮರ್ಥ್ಯ ಕಡಿಮೆಯಾಗುತ್ತದೆ. ಹಾಗೆಯೇ ಶ್ರೀಸತ್ಯಪರಾಕ್ರಮರೆಂಬ ರವಿಯು ಉದಯಿಸಿದ ಮೇಲೆ ಮಿಥ್ಯಾವಾದಿಗಳ ಸಾಮರ್ಥ್ಯವು ಕಡಿಮೆಯಾಗಿ ಮಾಧ್ವಮತೀಯರ ಮುಖಕಮಲಗಳು ಅರಳಿದವು. ಅರ್ಥಾತ್ ಮಾಧ್ವ ಸಮಾಜಕ್ಕೆ ಸಂತೋಷವಾಯಿತು.

**ಅಬ್ದಸ್ಯಾಂಗಿರಸೇ ದಿನೇ ಭೃಗುಯುತೇಭಾದ್ರೇದಶಮ್ಯಾಃಪರೇ ।**
**ವಿಶ್ವೇದೇವ ಶುಭೇ ಚ ಶೋಭನಯುತೇ ಪಕ್ಷೇಚಶುಕ್ಲೇ ಶುಭೇ ॥**
**ಮಾಯಾವಾದಿ ಗಜೇಂದ್ರ ಸಿಂಹಸದೃಶಃ ಶ್ರೀಮಧ್ವಸಂಸ್ಥಾನಗೋ ।**
**ಜಾತಃಸತ್ಯಪರಾಕ್ರಮಾಹ್ವಯಗುರುಃ ಸಿಂಹಸ್ಥಿತೇ ಸದ್ಗುರೌ ॥ ೨ ॥**

ಶ್ರೀಸತ್ಯಪರಾಕ್ರಮತೀರ್ಥರಿಗೆ ಆಶ್ರಮವಾದ ವರ್ಣನೆ. ಅವರಿಗೆ ಆಶ್ರಮವಾದ ಸಂವತ್ಸರ ಆಂಗೀರಸ ಮಾಸಭಾದ್ರಪದ, ಪಕ್ಷ ಶುಕ್ಲಪಕ್ಷ, ತಿಥಿ ದಶಮಿ

ಸಕಲಗ್ರಹಗಳು ಈ ಆಶ್ರಮಕ್ಕೆ ಹೇಗೆ ಶೋಭನರಾಗಬೇಕೋ ಹಾಗೆ ಇದ್ದರು. ವಿಶ್ವೇ ದೇವತೆಗಳು ಪ್ರಸನ್ನರಾಗಿದ್ದರು. ಮತ್ತು ಮಾಯಾವಾದಿಗಳೆಂಬ ಮದ್ದಾನೆಗಳಿಗೆ, ಮಧ್ವಸಂಸ್ಥಾನ ಪೀಠಸ್ಥರಾದ ಇವರು ಸಿಂಹಪ್ರಾಯರಾಗಿದ್ದರು. ಯಾಕೆಂದರೆ, ಪ್ರಾಯಶಃ ಗುರುವು ಸಿಂಹಸ್ಥನಾದರಿಂದ.

**ಲಕ್ಷ್ಮೀನಾಥ ಪದಾರವಿಂದಯುಗಳಂ ಸಂಪ್ರಾಪಯಂತೀಬುಧಾನ್।**
**ಶುದ್ಧಾ ದರ್ಶನ ಮಾತ್ರತೋತಿಸುಖದಾ ಶ್ರೀಮಧ್ವತೀರ್ಥಾಶ್ರಯಾ॥**
**ಸೌವರ್ಣಾಚಲಮಸ್ತಕೇತಿರಭಸಾದ್ಯಾಂತೀವಭಾಗೀರಥೀ ।**
**ಶ್ರೀಮತ್ಸತ್ಯಪರಾಕ್ರಮಾಹ್ವಯಗುರೋ ರ್ವಾಗ್ದೇವತಾ ನೃತ್ಯತಿ॥೩॥**

ಶ್ರೀಮನ್ಮಧ್ವಕರಾರ್ಚಿತ ಮೂಲ ಸೀತಾರಾಮಚಂದ್ರದೇವರ ದರ್ಶನ ಮತ್ತು ಮಧ್ವಶಾಸ್ತ್ರ ಪ್ರವಚನ ಇವುಗಳಿಂದ ಭಕ್ತ ಜನರನ್ನು ತೋಷಣೆ ಪಡಿಸಿ ಶ್ರೀಲಕ್ಷ್ಮೀನಾರಾಯಣರ ಕೃಪಾಕಟಾಕ್ಷಕ್ಕೆ ಪಾತ್ರರನ್ನಾಗಿಮಾಡಿದರು. ಅವರ ಉಪನ್ಯಾಸ ಭಾರತೀ ಹೇಗಿತ್ತೆಂದರೆ, ಸುವರ್ಣಾಚಲದ ಶಿಖರದಿಂದ ಇಳಿದು ಬರುವ ಭಾಗೀರಥೀ ಪ್ರವಾಹ ಯಾವ ರಭಸದಿಂದ ಪ್ರತಿಬಂಧಕ ರಹಿತಳಾಗಿ ಮನೋಹರಳಾಗಿ ಹರಿದು ಬರುತ್ತಾಳೋ, ಹಾಗೆಯೇ ಅಪ್ರತಿಹತ ವಾಗ್ಝರಿಯು ಇವರ ಮುಖಾರವಿಂದದಿಂದ ಹೊರಟು ಬರುತ್ತಿತ್ತು.

**ಇಂದ್ರಾದ್ಯರ್ಕಜಲೇಶವಾಯುನಿರುತಿದ್ರವ್ಯೇಶಸೋಮಾದಿಕೇ ।**
**ಷ್ವೇಕೋವಾ ಮುನಿನಾರದಾದಿಷು ಪರಂ ಕೋಯಂ ಗುರುರ್ವೋ ಭವೇತ್ ॥**
**ನಿಶ್ಚೇತುಂ ನಹಿಶಕ್ಯತೇಖಲುಮಯಾ ಸ್ವಲ್ಪಜ್ಞತಾಹೇತುತೋ ।**
**ಶ್ರೀಮತ್ಸತ್ಯಪರಾಕ್ರಮಾಹ್ವಯಗುರುಃ ಸಂದೇಹಹೃದ್ಭಾಷಿತಃ ॥೪॥**

ನಮ್ಮ ಗುರುಗಳಾದ ಶ್ರೀಸತ್ಯಪರಾಕ್ರಮತೀರ್ಥರು ಇಂದ್ರ, ರವಿ, ವರುಣ, ವಾಯು, ನಿರುತಿ, ಕುಬೇರ, ಚಂದ್ರಾದಿಗಳಲ್ಲಿ ಯಾವ ದೇವಾಂಶರೋ ಅಥವಾ ನಾರದಾದಿ ಮುನಿಗಳ ಅಂಶಸಂಭೂತರಾಗಿದ್ದಾರೋ ತಿಳಿಯದಾಗಿದೆ. ಈ ವಿಷಯವನ್ನು ನಿರ್ಣಯಿಸುವದಕ್ಕೆ ನಮಗೆ ಸಾಕಷ್ಟು ಹೇತುಗಳಿಲ್ಲ. ಆದ್ದರಿಂದ ನಾನು ನನ್ನ ಹೃದಯಸ್ಥವಾದ ಸಂದೇಹಗತ ಭಾಷೆಯಿಂದಲೇ ಇಲ್ಲಿ ಹೇಳಿದ್ದೇನೆ.

**ಯಃಪುಣ್ಯಾಭಿದಪತ್ತನಂ ಪ್ರತಿಯಯೌ ಕರ್ತುಂ ಚ ತತ್ಸಾರ್ಥಕಂ ।**
**ದುರ್ಭಿಕ್ಷೇ ಜನನೀವ ಬಾಲನಿಕರಂ ಬಹ್ವನ್ನದೋ ಮಾನವಾನ್ ॥**
**ಸ್ವೀಯೌದಾರ್ಯಜಿತಾರ್ಯ ಸೂರ್ಯತನಯೌದಾರ್ಯಶ್ಚ**
**ತಸ್ಮಿನ್ ಗುರುಃ ।**
**ಶ್ರೀಮತ್ಸತ್ಯಪರಾಕ್ರಮಾಹ್ವಯಗುರುಃ ದುರ್ವಾದಿ**
**ಗರ್ವಾಪಹಃ ॥ ೫ ॥**

ಶ್ರೀಸತ್ಯಪರಾಕ್ರಮತೀರ್ಥರು ಪುಣೆ ಪಟ್ಟಣಕ್ಕೆ ದಿಗ್ವಿಜಯ ಮಾಡಿದಾಗ (1875-76) ಆ ಪ್ರದೇಶದಲ್ಲಿ ಭೀಕರ ಕ್ಷಾಮವಿತ್ತು. ಸಮಯದ ಸಾರ್ಥಕ್ಯ ಗೊಳಿಸಲು ಆ ಕಾಲದಲ್ಲಿಯೇ ಪುಣೆಗೆ ಹೋದರು. ಕ್ಷಾಮಪೀಡಿತ ಜನರು ಕ್ಷೇಮದಿಂದಿರಲೆಂದು ಉತ್ತರಾದಿಮಠದ ಶ್ರೀರಾಮಚಂದ್ರನ ಸನ್ನಿಧಾನ ದಲ್ಲಿ ನಿತ್ಯವೂ ಸಹಸ್ರಾರು ಜನರಿಗೆ ಭೋಜನವಾಗುತ್ತಿತ್ತು. ಹಸಿದು ಬಂದವರಿಗೆ ಅನ್ನವಿಲ್ಲವೆನ್ನುತ್ತಿರಲಿಲ್ಲ. ತಮ್ಮ ಔದಾರ್ಯದಿಂದ ದಾನಶೂರಕರ್ಣನನ್ನು ಕೂಡ ಜಯಿಸಿದರೇನೋ ಎನ್ನುವಂತಿತ್ತು. ಆ ಸಮಯ ತಾಯಿಯು ಮಕ್ಕಳಿಗೆ ಪ್ರೀತಿಯಿಂದ ಭೋಜನ ಮಾಡಿಸುವ ರೀತಿಯಲ್ಲಿ ದುರ್ಭಿಕ್ಷಕಾಲ ದಲ್ಲಿ ಅನ್ನದಾನಮಾಡಿದರು. ಅಷ್ಟೇ ಅಲ್ಲ ತಮ್ಮ ಪಾಠಪ್ರವಚನ ಶಾಸ್ತ್ರೋಪನ್ಯಾಸಗಳಿಂದ ದುರ್ವಾದಿಗಳ ಗರ್ವಭಂಗವನ್ನುಂಟುಮಾಡಿದರು.

**ಕಾಚಾನಾಂ ನಿಚಯೇ ವಿವಿಚ್ಯ ಸುಮಣೀನ್ ಹ್ಯೈಮಾನಿಕಾದ್ವೈತಿ**
**ನಾಮ್ ।**
**ನೀಚಾನಾಂ ನಿಚಯೇ ಸುಮುಕ್ತಿಪದವೀಃ ಯೋಗ್ಯಾನ್ ಸುಪುಣ್ಯಾನ್ನ**
**ರಾನ್ ॥**
**ಚಕ್ರೇಚಕ್ರಧರಾಂಕಿತಾನುಪದಿಶನ್‌ಮಂತ್ರಾನ್‌ಪವಿತ್ರಾನ್‌ಮುದಾ ।**
**ಶ್ರೀಮತ್ಸತ್ಯಪರಾಕ್ರಮಾಹ್ವಯಗುರುಃ ಪುಣ್ಯಾಹ್ವಯೇಪತ್ತನೆ ॥೬॥**

ಶ್ರೀ ಸತ್ಯಪರಾಕ್ರಮತೀರ್ಥರು ಪುಣೆ ಪಟ್ಟಣದಲ್ಲಿರುವಾಗ ಸಜ್ಜನರನ್ನು ಉದ್ಧರಿಸಿದಕ್ರಮ. ಮಿಶ್ರಮಣಿಗಳ ಸಮೂಹದಿಂದ ಉತ್ತಮ ಮಣಿಗಳನ್ನು ಬೇರ್ಪಡಿಸುವಂತೆ, ಸಾತ್ವಿಕ ಶುದ್ಧಮನಸ್ಕರಾದವರನ್ನು ಅದ್ವೈತಿಗಳ ಗುಂಪಿನಿಂದ ಆರಿಸಿ ಅವರಿಗೆ ಮತ್ತು ಅಯೋಗ್ಯರ ಗುಂಪಿನಲ್ಲಿ ಆಕಸ್ಮಿಕವಾಗಿ ಸಿಲುಕಿ

ಕೊಂಡ ಮುಕ್ತಿ ಯೋಗ್ಯರಿಗೂ ತಪ್ತಮುದ್ರಾಧಾರಣಗಳನ್ನೂ ಮಂತ್ರೋಪದೇಶಗಳನ್ನೂ ಮತ್ತು ಮಾಧ್ವವೈಷ್ಣವ ದೀಕ್ಷಾದಿಗಳನ್ನೂ ಪ್ರೀತಿಯಿಂದ ಅನುಗ್ರಹಿಸಿದರು.

**ಯದ್ವಾಗ್ದಾರಾಬಹುಹೃದ್ಯಭಾವಸಹಿತಾ ತೋಷಾವಹಾಭೂತ್ಸದಾ।**
**ಸ್ವೀಯಾನಾಂ ಖಲುಮಾಯಿನಾಮಪಿಸದಾ ಪ್ರಾಜ್ಞೋ**
**ಪ್ರಮೋದಾವಹಾ ॥**
**ಆಶ್ಚರ್ಯಂತ್ವಿದಮೇವಸಂಪ್ರವಚನೇ ಪೀಠಾಧಿರೂಢೌ ಗುರೌ ।**
**ಸೋಽಯಂ ಸತ್ಯಪರಾಕ್ರಮೋ ಕಿಮುಶುಕಶ್ಚಾತುರ್ಯ**
**ವಾರಾನಿಧಿಃ ॥ ೭ ॥**

ಪೀಠಾಧಿಪತಿಗಳಾದ ಶ್ರೀ ಸತ್ಯಪರಾಕ್ರಮತೀರ್ಥರ ಪ್ರವಚನಗಳು ಹೃದ್ಯವೂಅನವದ್ಯವೂ ಆಗಿದ್ದು ಮನಸ್ಸಿಗೆ ಉಲ್ಲಾಸವನ್ನುಂಟುಮಾಡುತ್ತಿದ್ದವು ಅಷ್ಟೇ ಅಲ್ಲ, ಇವರ ಪ್ರವಚನಗಳು ಸ್ವಮತೀಯರಿಗೆ ಮಾತ್ರವಲ್ಲ ಮಾಯಿಮತದವರಿಗೂ ಸಂತೋಷವನ್ನುಂಟುಮಾಡುತ್ತಿದ್ದವು. ಪರಕೀಯರ ಶಾಸ್ತ್ರಗಳನ್ನು (ಅದ್ವೈತಮತವನ್ನು) ಅನುವಾದಮಾಡುವಾಗ ಅಪರ ಶಂಕರಾಚಾರ್ಯರೇನೋ ಇವರು ಎಂಬಂತ್ತಿತ್ತು. ಇದು ಅವರ ಪ್ರವಚನ ವೈಶಿಷ್ಟ್ಯ. ವಾಕ್ ಚಾತುರ್ಯವಾರಿಧಿ ಎನಿಸಿದ ಶ್ರೀಗಳವರು ಶುಕಾಚಾರ್ಯರೇನೋ ಎಂಬಂತೇ ಭಾಸವಾಗುತ್ತಿತ್ತು.

**ಯದ್ರೂಪಂ ಸಮವೀಕ್ಷ್ಯದಿವ್ಯಮತುಲಂ ಕಾಮೋಪ್ಯಕಾಮೋ**
**ಭವತ್ ।**
**ಜೀವೋಪ್ಯತ್ರ ಮನೋಜ್ಞವಾಕ್ಯರಚನಾಂ ಶ್ರುತ್ವಾಯದೀಯಾಂ**
**ಜಡಃ ॥**
**ಕೀರ್ತಿರ್ಯ್ಯಸ್ಯ ದಿವಂ ಭುವಂ ಚ ಧವಳಾ ವ್ಯಾಪ್ಯಾವಸಿಷ್ಟಾಪುನಃ ।**
**ಸೋಽಯಂ ಸತ್ಯಪರಾಕ್ರಮೋ ಗುರುವರೋ ದದ್ಯಾದಲಂ**
**ಮಂಗಲಂ ॥ ೮ ॥**

ಯಾವ ಶ್ರೀಪಾದಂಗಳವರ ರೂಪವನ್ನು ನೋಡಿ ಮನ್ಮಥನುರೂಪದಲ್ಲಿ

ಕಡಿಮೆಯಾದನೋ, ಶೇಷದೇವರೂ ಸಹ ಇವರ ಮನೋಜ್ಞವಾದ ಮನೋಹರವಾದ ವಾಕ್ಯ ರಚನೆಗಳನ್ನು ಶ್ರವಣಮಾಡಿ ಮೌನವನ್ನು ತಾಳಿದರೋ, ಯಾರ ಪರಿಶುದ್ಧ ಕೀರ್ತಿಯು ದ್ಯುಲೋಕ ಭೂಲೋಕಗಳಲ್ಲಿ ವ್ಯಾಪಕವಾಗಿತ್ತೋ, ಅಂಥ ಸತ್ಯಪರಾಕ್ರಮತೀರ್ಥರು ನಮಗೆ ಸಾಕಷ್ಟು ಮಂಗಳವನ್ನುಂಟುಮಾಡಲಿ.

**ಶ್ರೀಮನ್ಮಧ್ವಸುಪೀಠನಂದನವನೇ ಕಲ್ಪದ್ರುಪೂರ್ವದ್ರುಮಾನ್ ।**
**ಶ್ರೀಮದ್ದಿಗ್ಜಯ ಮೂಲರೂಪರಘುಷಾವ್ಮ್ಯಾಯೇಶಸದ್ವಿಟ್ಠಲಾನ್॥**
**ಮಿಥ್ಯಾವಾದಿಗಿರೀಂದ್ರಪಕ್ಷದಳನೋ ಸಚ್ಛಾಸ್ತ್ರವಜ್ರೀ ಹರಿಃ ।**
**ಪ್ರೇಕ್ಷಾನಂದಮವಾಪ್ನುವಾನ್ ಬಹುತರಂ ಶ್ರೀಸತ್ಯ**
**ವಿರಾಹ್ವಯಂ ॥ ೯ ॥**

ಶ್ರೀಮನ್ಮಧ್ವಾಚಾರ್ಯರ ಸಂಸ್ಥಾನದ ಪೀಠವೆಂಬ ನಂದನವನದಲ್ಲಿ ಅನೇಕ ಕಲ್ಪದ್ರುಮಗಳು ಕಲ್ಪಿತವಾಗಿವೆ. ದಿಗ್ವಿಜಯ ರಾಮ, ಮೂಲರಾಮಚಂದ್ರ ಮೂರ್ತಿಗಳು, ವೇದವ್ಯಾಸದೇವರು, ವಿಟ್ಠಲದೇವರು, ಮಿಥ್ಯಾವಾದಿಗಳೆಂಬ ಗಿರಿಗಳಿಗೆ ವಜ್ರಸದೃಶವಾದ ಸಚ್ಛಾಸ್ತ್ರಪ್ರತಿಪಾದ್ಯ ಹರಿಯು ಪ್ರೇಕ್ಷಕರಿಗೆ ಆನಂದವನ್ನುಂಟುಮಾಡಿದನು. ಮುಂದಿನಯತಿಗಳಾದ ಶ್ರೀಸತ್ಯವೀರರು ಬಹುತರ ಆನಂದಭಾಗಿಗಳಾದರು.

**ಶ್ರೀಮತ್ಸತ್ಯಪರಾಕ್ರಮೇ ಗುರುವರೇ ಸತ್ಸಿಂಹ ಸಂಸ್ಥಾನಗೇ ।**
**ಸಿಂಹಸ್ಥಾನಗತೇ ಗುರೌ ಚಯುಗಪತ್‌ಗೋದಾಂಚಕೃಷ್ಣಾಂನದೀಂ॥**
**ಆಶ್ಚರ್ಯಂಭುವನತ್ರಯೇ ವಿದಧತೀ ಗಂಗಾಯಯೌಕೌತುಕಾತ್ ।**
**ನೋಚೇತ್ತದ್ದಿನ ಏವ ತತ್ರ ಚ ಗುರೌ ಸಂಸ್ಥಾನಲಾಭಿಃಕಥಂ॥ ೧೦ ॥**

ಶ್ರೀಸತ್ಯಪರಾಕ್ರಮತೀರ್ಥಗುರುಗಳು ಸಂಸ್ಥಾನದ ಪೀಠವನ್ನು ಸಿಂಹಪ್ರಾಯರಾಗಿ ಅಲಂಕರಿಸಿದ ಸಮಯದಲ್ಲಿಯೇ ಗುರು ಸಿಂಹರಾಶಿಯಲ್ಲಿದ್ದನು. ಅದೇ ಸಮಯದಲ್ಲಿ ಗೋದಾವರಿಯಲ್ಲಿ (ಸಿಂಹಸ್ಥ) ಗಂಗಾ ಸನ್ನಿಧಾನವಿತ್ತು. ಗಂಗಾದೇವಿಯು ಕೌತುಕದಿಂದ ಶ್ರೀಗಳವರ ಸ್ನಾನಕಾಲದಲ್ಲಿ ದರ್ಶನ ಕೊಟ್ಟಳು. ಇಲ್ಲದೇ ಇದ್ದರೆ ಅದೇ ದಿನ ಅವರಿಗೆ ಆಶ್ರಮ ಹೇಗೆ ಆಯಿತು.

**ಶ್ರೀಮತ್ಸತ್ಯಪರಾಕ್ರಮಾಹ್ವಯಮುನೇ ದೀನಂ ಹಿ ಮಾಮುದ್ಧರ ।**
**ತ್ರಾಹಿತ್ರಾಹಿಗುರೋತ್ವಮೇವಶರಣಂ ಸಚ್ಛಾಸ್ತ್ರವಿದ್ಯಾಂದಿಶ ॥**
**ಏವಂ ಯೋಜಪತಿಪ್ರತಿಕ್ಷಣಮಹೋ ತನ್ಮಾನದೋಯಂ ಗುರುಃ ।**
**ಕಾರುಣ್ಯಾಂಬುನಿಧಿರ್ನರಕ್ಷತಿ ಚ ಕಿಂ ಹಾಸೋತಲ್ಲ ಸತ್**
**ಶ್ರೀಮುಖಃ ॥ ೧೧ ॥**

ಹೇ ಗುರುಗಳೇ ದೀನರಾದ ನಮ್ಮನ್ನುರಕ್ಷಿಸಿರಿ, ನೀವೇನಮಗೆ ಶರಣ್ಯರು. ಸಚ್ಛಾಸ್ತ್ರವಿದ್ಯೆಯನ್ನು ದಯಪಾಲಿಸಿರಿ ಎಂದು ಕ್ಷಣಕ್ಷಣಕ್ಕೂ ಜಪಿಸತಕ್ಕ ಭಕ್ತರನ್ನು ಕರುಣಾನಿಧಿಗಳಾದ, ಮಂದಹಾಸಯುಕ್ತರಾದ ಶ್ರೀಸತ್ಯಪರಾಕ್ರಮತೀರ್ಥರು ರಕ್ಷಿಸುವದಿಲ್ಲವೇ ? ನಿಜವಾಗಿಯೂ ಅನುಗ್ರಹಿಸುತ್ತಾರೆ.

**ರಾಮಾರಾಮವತೀವ ದಿವ್ಯಮತುಲಂ ಸೀತಾಯುತಂಚಾದ್ರಿಯನ್**
**ಪ್ರೇಮಾಂಭೋನಿಕರೈ ಸವಿಷ್ಣುಪದಗಃ ಸದ್ವರ್ಯಮೋದಾಹ್ವಯಃ॥**
**ಶ್ರೀಮತ್ಸತ್ಯಪರಾಕ್ರಮಾಖ್ಯಜಲದೋ ವಿದ್ಯಾತಟಿತ್‌ಗರ್ಜಿತೋ ।**
**ನಿಷ್ಕಂಪಂತನುತೇಹಿ ಧೀಜಲಕಣೈಃ ಸನ್ಮಾನವಾರ್ವೀತಲೇ ॥ ೧೨ ॥**

ಮೂಲ ಸೀತಾರಾಮರುಗಳ ಮನೋಹರ ಮೂರ್ತಿಗಳು ಚೈತನ್ಯ ಸ್ವರೂಪ ತಳೆದು ನಿಂತಿವೆಯೋ ಎಂಬಂತೆ ಇದ್ದು, ಪೂಜೆ ಮಾಡತಕ್ಕ ಶ್ರೀಗಳವರಿಗೆ, ದರ್ಶನ ಮಹಿಮಾ ಸ್ಮರಣ, ಪೂಜಾದಿಗಳಿಂದ ಆನಂದ ಪುಳುಕಿತರಾಗುತ್ತಿದ್ದರು. ಹಾಗೆ ಪೂಜಿಸಲ್ಪಟ್ಟ ಮೂರ್ತಿಗಳ ದರ್ಶನದಿಂದ ಭಕ್ತಾದಿಗಳು ಇಷ್ಟಾರ್ಥವನ್ನು ಪಡೆಯುತ್ತಿದ್ದರು.

ನೀರುಂಡ ಮೋಡಗಳು ಹೇಗೆ ಮೊದಲುಗರ್ಜಿಸಿ ಆಮೇಲೆ ಮಳೆಸುರಿಸಿ ಆಕಾಶವನ್ನು ನಿಷ್ಕಂಪವನ್ನಾಗಿ ಮಾಡುತ್ತವೆಯೋ ಹಾಗೆ ಶ್ರೀಮತ್‌ಸತ್ಯಪರಾಕ್ರಮರೆಂಬ ಮೋಡವು ತೇಜೋಮಯವಾಗಿ ವಾಕ್‌ಶಬ್ದವನ್ನು ಮಾಡಿ ಬುದ್ಧಿ ಎಂಬ ಜಲಕಣಗಳು ವಿದ್ವಾಂಸರ ಮೇಲೆ ಬೀಳಲಾಗಿ ಎಲ್ಲ ಕಡೆಗೂ ನಿಷ್ಕಂಪ ಉಂಟಾಯಿತು.

**ಅತ್ಯಂತಂ ಶುಭಮೌಕ್ತಿಕಾನುಭನಿತಾ ಸತ್ಯತ್ವಪಕ್ಷಾಶ್ರಯೋ ।**
**ಗೋಪೀಚಂದನಮೃತ್ತಿಕಾಧವಳಿತಃ ಚಕ್ರಾಂಕಿತಃ ಶ್ರೀಗುರುಃ ॥**

**ಭೇದಂ ಜೀವನದುಗ್ಧ ಯೋರಿವಪರಂ ಜೀವೇಶಯೋಃ ಸಾಧಯನ್।**
**ಹಂಸಃಸತ್ಯಪರಾಕ್ರಮೋ ವಿದಧತಾಂ ಮನ್ಮಾನಸೇಮಾನಸೇ ॥ ೧೩ ॥**

ಅವರ ಕೊರಳಲ್ಲಿ ತುಳಸೀ ಮಣಿಸರವು ಮುತ್ತು ಹವಳಗಳಿಂದ ಶೋಭಿಸುವದನ್ನು ನೋಡಿದರೆ ಅವರು ಸತ್ಯತ್ವ ಪಕ್ಷವನ್ನಾಶ್ರಯಿಸಿದ್ದಾರೆಂದು ಕಾಣುತ್ತಿತ್ತು. ಶ್ರೀಗಳವರು ಗೋಪಿಚಂದನ ಮೃತ್ತಿಕಾ, ಪಂಚಮುದ್ರಾದಿ ವೈಷ್ಣವ ಚಿಹ್ನಗಳನ್ನು ಧರಿಸಿ ಶೋಭಾಯಮಾನವಾಗಿದ್ದರು. ಭೇದ ತತ್ವವು ಜೀವನದಲ್ಲಿ ಹಾಲಿದ್ದಂತೆ ಜೀವೇಶ ಭೇದವನ್ನೇಸಾಧಿಸುತ್ತಿದ್ದ ಶ್ರೀಸತ್ಯಪರಾಕ್ರಮ ಗುರುಗಳು ನಮ್ಮ ಮನಸ್ಸಿನಲ್ಲಿ ಯಾವಾಗಳೂ ಅಂಥ ನಿಶ್ಚಿತ ಜ್ಞಾನವನ್ನುಂಟುಮಾಡಲಿ.

**ಕಸ್ತೂರೀಮಗರುಂ ಲಸತ್ಸುಮನಸಾಂ ಗಂಧಂ ಚ ಧಿಕ್ಕುರ್ವತಾಂ ।**
**ಯತ್ಪಾದಾಂಬುಜ ಮಧ್ಯವರ್ತಿರಜಸಾಂ ಸ್ವಪ್ನೇಪ್ಯಹೋಸಂಗತಿಃ ॥**
**ಭೀತಿಂ ದ್ರಾವಯತೀತ್ಯಘಂ ಕಿಮುತಸಾಜಾಗ್ರದ್ದಶಾಯಾಂಮಮ।**
**ಶ್ರೀಮತ್ಸತ್ಯಪರಾಕ್ರಮಾಹ್ವಾಯಗುರುಃ ಪಾತುಃ**
**ಪ್ರಸಾದೋಸ್ಮುಖಃ ॥ ೧೪ ॥**

ಶ್ರೀಪಾದಂಗಳವರ ಪಾದರಜವು, ಕಸ್ತೂರಿಯ ವಾಸನೆಯನ್ನಾಗಲಿ, ಹೂಗಳ ಪರಿಮಳವನ್ನಾಗಲಿ ಧಿಕ್ಕಾರ ಮಾಡುವಂತ್ತಿತ್ತು. ಜಾಗೃದಾವಸ್ಥೆಯಲ್ಲಿ ಭೀತಿಯನ್ನು ಓಡಿಸುವಂತೆ ಶ್ರೀಗಳವರ ದರ್ಶನ ನಮ್ಮ ಅಘನಾಶ ಮಾಡುತ್ತದೆ. ಅಂಥ ಶ್ರೀ ಮತ್ಸತ್ಯಪರಾಕ್ರಮರೆಂಬ ಗುರುಗಳು ಪ್ರಸನ್ನಾರಾಗಿ ನಮ್ಮನ್ನು ರಕ್ಷಿಸಲಿ.

**ಯತ್ಕಂಠೇ ಹರಿನೀಲರತ್ನರಚಿತಾ ಶ್ರೀಮಾಲಿಕಾ ಸ್ಪರ್ಧಿನೀ ।**
**ರಾಮಾಂಘ್ರ್ಯರ್ಪಿತಶ್ಯಾಮವರ್ಣ ತುಳಸೀಮಾಲಾ ಪರಂರಾಜತೇ॥**
**ಸೋಯಂಪಾತುನೃಸಿಂಹನಾಮಮಧುರಂನಿತ್ಯಂಸಮುಚ್ಚಾರಯನ್**
**ಶ್ರೀಮತ್ಸತ್ಯಪರಾಕ್ರಮಾಹ್ವಯಗುರುರ್ಗಾತ್ರಂಚ**
**ಗೋತ್ರಂಚಮೇ ॥ ೧೫ ॥**

ಯಾವ ಶ್ರೀಗಳವರ ಕಂಠದಲ್ಲಿ ಧರಿಸಿದ ತುಲಸೀಮಣಿ ಇತರ ಮಣಿಗಳಿಂದ ಯುಕ್ತ ಹಾರದಲ್ಲಿ, ತುಲಸೀ ಮಣಿಗಳು ನೀಲರತ್ನಮಣಿಗಳೊಂದಿಗೆ

ಸ್ಪರ್ಧಿಸುತ್ತಿವೆ. ಮತ್ತು ಶ್ರೀರಾಮಚಂದ್ರ ದೇವರಿಗೆ ಅರ್ಪಿತವಾದ ಕೃಷ್ಣ ತುಳಸಿಯನ್ನೂ ಧಾರಣ ಮಾಡಿದ್ದಾರೆ. ಯಾವ ಶ್ರೀಪಾದಂಗಳವರು ಮಧುರವಾದ ನರಸಿಂಹನಾಮವನ್ನು ಉಚ್ಚಾರಣ ಮಾಡುತ್ತಾರೋ ಅಂಥ ಶ್ರೀ ಸತ್ಯಪರಾಕ್ರಮ ಗುರುಗಳು ನಮಗೆ ಸರ್ವ ಪ್ರಕಾರವೂ ರಕ್ಷಕರಾಗಿರಲಿ.

**ಯದ್ವೀಕ್ಷಾ ಜನರೋಮ ಹರ್ಷಣಕರೀ ಪ್ರೇಮಾಶ್ರುಸಂವರ್ಧಿನೀ ।**
**ಯನ್ಮಾಧುರ್ಯ ವಿಶಿಷ್ಟಭಾಷಿತಸುಧಾಪಾನೋತ್ಥ ಸಂವಿನ್ಮುದಾ ॥**
**ನೈವಾಭೂದ್ವಿದುಷಾ ಕದಾಪಿವಿಲಸತ್ ಪೀಯೂಷಪಾಂಥಾಪುನಃ ।**
**ಸೋಯಂ ಸತ್ಯಪರಾಕ್ರಮೋ ನಿದಧತಾಂ ಮನ್ಮೂರ್ಧ್ನಿ**
**ಪಾದಾಂಬುಜಾಂ ॥ ೧೬ ॥**

ಯಾವ ಗುರುಗಳ ವೀಕ್ಷಣೆಯು ಭಕ್ತಾದಿಗಳಿಗೆ ರೋಮ ಹರ್ಷಣವನ್ನುಂಟುಮಾಡಿ ಆನಂದಾಶ್ರುಗಳನ್ನುಂಟು ಮಾಡುತ್ತಿತ್ತೋ, ಯಾವ ಶ್ರೀಗಳವರ ಮಧುರ ಭಾಷೆ ಮತ್ತು ಸುಧಾಪಾನ ಜ್ಞಾನದಿಂದ ಸಜ್ಜನರು ಮೋದಪಡುತ್ತಿದ್ದರೋ, ಮತ್ತು ಯಾವ ಗುರುಗಳ ಶಾಸ್ತ್ರಪ್ರವಚನಾದಿಗಳ ಪಾನಮಾಡಿದ ವಿದ್ವಾಂಸರು ಪುನಃ ಪುನಃ ಪಾನಮಾಡಬೇಕೆಂಬ ಆಸೆ ಇಲ್ಲದವರು ಇರಲೇಇಲ್ಲವೋ ಅಂಥ ಶ್ರೀಮತ್ಸತ್ಯಪರಾಕ್ರಮತೀರ್ಥ ಶ್ರೀಪಾದಂಗಳವರ ಪಾದರಜವು ನನ್ನ ಶಿರಸ್ಸಿನ ಮೇಲಿದ್ದು ರಕ್ಷಕವಾಗಲಿ.

**ಸೀತಾನಾಥ ಸುವೇದನಾಥಭಜನೇ ನಿರ್ಬಾಧಬೋಧಂ ದ್ವಿಜಾನ್ ।**
**ಸಂಯೋಜ್ಯಾಸ್ಯ ಮುದಾವಹಂಚ ಯುಗಪಚ್ಛ್ರೀಸತ್ಯವೀರಾಭಿದಂ॥**
**ಸಚ್ಚಿತ್ತಸ್ಥಿತ ಕಿಲ್ಬಿಷಂ ಶಮಯಿತುಂ ಪಾವೃಂದಸಂರಕ್ಷಣೇ ।**
**ಶ್ರೀಮತ್ಸತ್ಯಪರಾಕ್ರಮೋ ವಿಜಯತೆ ಸಚ್ಚಿತ್ತಪುರ್ಯಾಂಗುರು॥೧೭॥**

ಮೂಲ ಸೀತಾರಾಮರ ಮತ್ತು ವೇದವ್ಯಾಸರ ಭಜನೆಯಲ್ಲಿ ಸಕಲ ಸಜ್ಜನರ ಮನಸ್ಸನ್ನು ನಿರ್ಬಾಧವಾಗಿ ಸಂಯೋಗ ವಾಗುವಂತೆ ಮಾಡಿದರು. ಅದೇ ಸಮಯದಲ್ಲಿ ಈ ಪ್ರವೃತ್ತಿಯನ್ನು ಮುಂದುವರಿಸಲು ಶ್ರೀಸತ್ಯವೀರರಿಗೆ ಆಶ್ರಮವನ್ನು ಕೊಟ್ಟರು. ಸಜ್ಜನರ ಮನಸ್ಸಿನ ಕಲ್ಮಷವನ್ನು ಕಳೆಯಲು ಮತ್ತು ಸ್ವಶಿಷ್ಯರ ಸಂರಕ್ಷಣೆಗಾಗಿ ಶ್ರೀಸತ್ಯಪರಾಕ್ರಮ ತೀರ್ಥರು ಸಚ್ಚಿತ್ತಾಪುರದಲ್ಲಿ ಬೃಂದವನಸ್ಥರಾಗಿಅದ್ಯಾಪಿ ಇರುತ್ತಾರೆ.

**ನುತಿರಿಯಂ ಕೃತಾ ಮಂದಬುದ್ಧಿನಾ ಖಲುಮಯಾಕೃತೋ ಧೀರ್ವಿ ಶುದ್ಧಯೇ ।**
**ಗುರುಹೃದಬ್ಜಗಸ್ತೇನಜಾನಕೀಹೃದಯವಲ್ಲಭಃ ಪ್ರೀಯತಾಂಮಮ॥**
**ಪಠತಿಯಸ್ತ್ವಿಮಾಂ ಬುದ್ಧಿಶುದ್ಧಿದಾಂ ಗುರುವರಸ್ತುತಿಂ ಭಾವುಕ ಪ್ರದಾಂ ।**
**ಪರಮಮಂಗಳಂ ಶಾಶ್ವತಂ ಭವೇತ್ ಶಪಥಪೂರ್ವಕಾನ್ ವಚ್ಮಿನಾನ್ಯಥಾ ॥ ೧೮ ॥**

ಮಂದಬುದ್ಧಿಯಾದ ನನ್ನಿಂದ ಬುದ್ಧಿ ಶುದ್ಧಿಗಾಗಿ ಗುರುಸ್ತುತಿಯು ರಚಿಸಲ್ಪಟ್ಟಿದೆ. ಗುರುಗಳಂತರ್ಯಾಮಿ ಶ್ರೀರಾಮಚಂದ್ರದೇವರು ಇದರಿಂದ ಪ್ರೀತರಾಗಲಿ. ಈ ಗುರುಸ್ತುತಿಯನ್ನು ಯಾವ ಭಕ್ತರು/ಶಿಷ್ಯರು ಪಠಿಸುತ್ತಾರೋ ಅವರ ಬುದ್ಧಿ ಶುದ್ಧಿಯಾಗುತ್ತದೆ. ಸದ್ಭಾವನೆ ಬರುತ್ತದೆ. ಪರಮ ಮಂಗಳ ಶಾಶ್ವತವಾಗುತ್ತದೆ. ಎಲ್ಲಿ ಶುಭ ಪ್ರಾಪ್ತಿಯಾಗುವದೆಂದು ನಾನು ಶಪಥ ಪೂರ್ವಕವಾಗಿ ಹೇಳುತ್ತೇನೆ.

**॥ ಇತಿ ಶ್ರೀ ಸತ್ಯಪರಾಕ್ರಮತೀರ್ಥಾನಾಂ ಅಂತೇವಾಸಿ ಗೋದಾವರೀ ತೀರಸ್ಥ ಶ್ರೀ ಜಯತೀರ್ಥಾಚಾರ್ಯ ತನುಜ ಶ್ರೀಕೃಷ್ಣಾಚಾರ್ಯ ಕೃತಮಿದಂ ಗುರುಸ್ತವನಂ ಸಂಪೂರ್ಣಂ ॥**

**॥ ಶ್ರೀಮಧ್ವೇಶಾರ್ಪಣಮಸ್ತು ॥**

# ಶ್ರೀಸತ್ಯಪರಾಕ್ರಮತೀರ್ಥಸ್ತೋತ್ರ ಪ್ರಾರಂಭ

ಶ್ರೀಸತ್ಯೇಷ್ಟ ತೀರ್ಥದುಗ್ಧಾಬ್ಧೇಃ ಜಾತಃ ಸತ್ಯಪರಾಕ್ರಮಃ ।
ಅಸ್ಮತ್ಸ್ವಾಂತರ್ಗತ ದ್ವಾಂತಂ ಧ್ವಸ್ತಂ ಕುರ್ಯಾತ್‌ಕಲಾನಿಧಿಃ ॥೧॥

ಪೂರ್ಣಪ್ರಜ್ಞಮುನಿಗ್ರಂಥೇ ಪೂರ್ಣಃಪ್ರಜ್ಞಃಸ್ವತೋಽಭವತ್ ।
ಸಮ್ಯಕ್ ಪ್ರಜ್ಞಾಂಚಮೇದದ್ಯಾತ್ ಅನವದ್ಯಾಮುದಾರಧೀಃ ॥ ೨ ॥

ಶ್ರೀಮನ್ನ್ಯಾಯಸುಧಾಂಬೋಧೌ ಪಾಠೀನಃ ಸದೃಶೋಹಿ ಮೇ ।
ಅನುವ್ಯಾಖ್ಯಾನ್ಯಾಯಸುಧಾ ಸಕ್ತಿಂ ದಿಶತು ಸರ್ವದಾ ॥ ೩ ॥

ಶೈವಾದ್ವೈತಕಣಾದಾಕ್ಷಪಾದನಿರ್ಮಿತ ದರ್ಶನಂ ।
ದರ್ಶನಂ ಭಾಸ್ಕರೀಯಂಚ ನಿರಾಚಕ್ರೇ ಜಗದ್ಗುರುಃ ॥ ೪ ॥

ತಥಾರಾಮಾನುಜೀಯಂ ಚ ಬೌದ್ಧ ಪ್ರಾಭಾಕರೈ ಕೃತಂ ।
ಕುವಾದಿನಃ ಪರಾಜಿತ್ಯ ಬಭೌ ಭಾಸ್ಕರವದ್ಭುವಿ ॥ ೫ ॥

ಪಾಷಂಡಿನಃ ಪಾಶುಪತಾನ್ ನಿರಾಚಕ್ರೇನಿಜೇನವೈ ।
ಬಲೇನಜ್ಞಾನ ರೂಪೇಣ ಶಿಷ್ಯಾಂಚಕ್ರೇಥ ಚಾರುಗೀಃ ॥ ೬ ॥

ದಿಶೋಜಯಂ ವಿಧಾಯಾಥ ಗೋದಾತೀರಮುಪಾಗಮತ್ ।
ಚಾತುರ್ಮಾಸ್ಯೋಕ್ತ ಸಂಕಲ್ಪ ಕೃತ್ವಾತದ್ದೇಶ ವಾಸಿನಃ ॥ ೭ ॥

ಪಾಯಯಿತ್ವಾತಪ್ತಮುದ್ರಾಂ ದತ್ವಾಗೋದಾವರೀತಟಾತ್ ।
ಆಗತ್ಯ ಬಲಕುಂದ್ಯಾಖ್ಯೇಗ್ರಾಮೇಬಿಲ್ವನದೀತಟೇ ॥ ೮ ॥

ತ್ರಿಮಾಸೇನ್ಯವಸದ್ದಿವ್ಯೇ ಭೋಜಯಾಮಾಸಬ್ರಾಹ್ಮಣಾನ್ ।
ಸ್ವಾಪಶಕ್ತಿಂ ವ್ಯಾಸರಾಮಾದಿ ಪ್ರತಿಮಾಪೂಜನೇ ಸ್ವತಃ ॥ ೯ ॥

ಜ್ಞಾತ್ವಾ ಸರ್ವಜ್ಞಕಲ್ಪೋಽಸೌ ಕಂಠಪಲ್ಯುಪನಾಮಕಂ ।
ಬ್ರಾಹ್ಮಣೋತ್ತಮಮಾನೀಯ ಯೋಗ್ಯಂ ಪೂಜಾವಿಧೌವಿಭುಃ ॥

ಸತ್ಯವೀರಾಭಿದಾಂ ದತ್ವಾ ಶಿಶುಭೆ ಸತ್ಯವಿಕ್ರಮಃ ||
ಕೃತ್ವಾಭಿಷೇಕಂತ್ವಧಿಕಂ ಆಶ್ವಿನೇಚ ಶುಭೇ ತಿಥೌ || ೧೧ ||

ಸಪ್ತಮ್ಯಾಂ ಪೂರ್ವಪಕ್ಷೇತು ಪೂರ್ವಾಹ್ನೇ ದ್ವಿಜಸಂಸದಿ |
ತಸ್ಮೈಸದ್ವಿಜವರ್ಯಾಯ ಉಪದೇಶಮಥಾಕರೋತ್ || ೧೨ ||

ದತ್ವಾಸಂಸ್ಥಾನಮಸ್ಮೈ ರಘುಪತಿ ಪ್ರತಿಮಾ |
ಪೂಜನಂ ಕಾರಯಿತ್ವಾ |
ಸ್ಮೃತ್ವಾ ಶ್ರೀಕೃಷ್ಣವೇಣೀ ತಟ ನಿಕಟಮಗಾತ್ |
ಸಾಧು ಸಂದೋಹಯುಕ್ತಃ || ೧೩ ||

ತತ್ರಾವೀಕ್ಷ್ಯಸ್ವಯೋಗ್ಯಂ ಸ್ಥಲಮಮಲಜಲಂ |
ಚಿತ್ರಋಷ್ಯಾದಿ ಜುಷ್ಟಂ |
ತಸ್ಮಿನ್ ಪೂರ್ವಂ ಸ್ವಕೀಯೇ |
ಶುಭತಮಸದನೇ ಧ್ಯಾನಮಾಸಾದ್ಯತಸ್ಥೌ || ೧೪ ||

ಇತಿ ಶ್ರೀಗುರುವರ್ಯಾಣಾಂ ಚರಿತಂ ಯಶೃಣೋತಿಸಃ |
ಸಭಾಯಾಂ ವಾದಿನಿಕರಂ ಸ್ಪುಟಂ ಜಯತಿ ನೈಖಲು || ೧೫ ||

ಏತಾಂಪಂಚದಶಿಶ್ಲೋಕೀಂ ನರಕೇಸರಿನಿರ್ಮಿತಂ |
ತ್ರಿಕಾಲಂ ಯಃಪಠೇನ್ಮರ್ತ್ಯಃ ಸತು ಮಂಗಲಮಾಪ್ನುಯಾತ್|| ೧೬ ||

ಶ್ರೀಪಾದಾನಾಂ ಪಾದಪದ್ಮಾರಾಧಕ
ಹುನಗುಂದ ನರಸಿಂಹಾಚಾರ್ಯೇಣ ಕೃತಮಿದಂ ಸ್ತೋತ್ರಮ್

(ವಾಯಿ ವಾದಿರಾಜಾಚಾರ್ಯೇಣ ಸಂಗೃಹೀತಂ)

## ಶ್ರೀಸತ್ಯಪರಾಕ್ರಮತೀರ್ಥ ಸ್ತೋತ್ರಗಳು. (ಪದರೂಪ)

— ೧ —

ಇಂದು ನೋಡಿ ಧನ್ಯನಾದೆನು । ಶ್ರೀ ಗುರುಗಳನ್ನು ॥
ಇಂದು ನೋಡಿ ಧನ್ಯನಾದೆನು ॥ ಪಲ್ಲವಿ ॥

ಇಂದು ನೋಡಿ ಧನ್ಯನಾದೆ ।
ಮಂದಜನರ ಕುಂದುಗಳನು ।
ಬಿಂದುಮಾತ್ರ ಭಕುತಿಗೊಲಿದು ।
ನಿಂದಿರದಲೆ ದೂರಮಾಳ್ಪರ ॥ ಅ. ಪ ॥

ಮಧ್ವಮುನಿಯು ಎದುರಿಗಿದ್ದ । ಕೃಷ್ಣಾಜಲಧಿಯಲ್ಲಿ ಮಿಂದು ।
ಬದ್ಧಕರ್ಮನಿರತರಾದ । ಶುದ್ಧದ್ವಿಜರುಪೂಜೆಕಂಡು ॥ ೧ ॥

ಹತ್ತು ಎರಡು ನಾಮದಿಂದ । ಮತ್ತು ಪಂಚಮುದ್ರೆಯಿಂದ ।
ಉತ್ತಮಗಂಧಾಕ್ಷತೆಗಳಿಂದ । ಸತ್ವಸೂರೆಗೊಂಬ ಮುನಿಯ ॥

ಹಸ್ತ ಜನರ ತೆರದಿ ತಾವು । ನಿತ್ಯ ಹಸ್ತೋದಕವ ಕೊಂಡು ।
ಭಕ್ತರಿಷ್ಟ ಪೂರ್ತಿಗಾಗಿ । ಎತ್ತಿ ಕರವಪಿಡಿದ ಯತಿಯ ॥

ಮೂಲರಾಮ ಪೂಜೆಯನ್ನು । ಕಾಲಕಾಲಕ್ಕೆ ಮಾಡಿ ಪಾಡಿ ।
ಮೂಲ ಅವತಾರದಲ್ಲಿ । ಲೋಲರಾದ ಶೀಲರನ್ನು ॥ ೪ ॥

ಸತ್ಯಪರಾಕ್ರಮರು ಇವರು । ಚಿತ್ತನಗರದಲ್ಲಿನಿಂದು ।
ಸ್ತುತ್ಯ ನರಹರಿಯ ಚರಿತೆ । ಭಕ್ತರಿಗೆ ಬೀರುವವರ ॥ ೫ ॥

— ೨ —

ರಾಗ : ಕೇದಾರಗೌಳ-ಆದಿತಾಳ :

ಪೋಷಿಸಯ್ಯ ಗುರುವೇ । ದಾಸರ ಭಾಷೆಯ ಪಾಲಿಪ ಗುರುವೇ ॥
ಏಸುಕಾಲದಿನಿಮ್ಮ ಪಾದವಪೊಂದದೇ ।
ಹೇಸಿಭವದಿ ನೊಂದೇ ಬೆಂದೇ ॥ ಪ ॥

ಭಕ್ತಿಎನ್ನೊಳಗಿಲ್ಲ । ಧರ್ಮಾಸಕ್ತಿಯು ಮೊದಲಿಲ್ಲ ।
ಶಕ್ತರಹಿತನನ್ನ । ಭಕ್ತರೊಳಿರಿಸೆಂದು ।
ಮುಕ್ತಕಂಠದಿ ಬೇಡುವೇ । ಬಾಯ್ಬಿಡುವೆ ॥ ೧ ॥

ಮೋದಮುನಿಯ ಮತದಿ । ಆದರ ಪುಟ್ಟಿಸೆನ್ನಮನದಿ ॥
ಸಾಧುಸಜ್ಜನಗಳ ಸಂಗಕೊಟ್ಟು ಎನ್ನ ।
ಉದ್ಧರಿಸಯ್ಯ ತಂದೇ, ಇಂದೇ ॥ ೨ ॥

ಧರೆಯೊಳು ವರಕೃಷ್ಣಾ । ತೀರದ ಚಿತ್ತಾಪುರವಾಸ ।
ಮೂರುತಾಪಗಳಿಂದ ದೂರಿಟ್ಟು ನರಹರಿ ।
ಮೂರುತಿಯನ್ನು ತೋರೋ ಬಾರೋ ॥ ೩ ॥

— ೩ —

ಸತ್ಯೇಷ್ಟರ ಕರಸಂಜಾತ । ಸತ್ಯವೀರ ತೀರ್ಥಸನ್ನುತ ।
ಚಿತ್ತಾಪುರನಿವಾಸ ಕಾಯೋ । ಸತ್ಯಪರಾಕ್ರಮ ಶ್ರೀಗುರುವೇ ॥ ಪ ॥

ಅರುಣಕಿರಣಪೋಲ್ಪ । ದಿವ್ಯಾಂಬರವ ಧರಿಸಿ ಪ್ರಣವಗೈವ ।
ಚರಣಸ್ಮರಣೆ ಮಾತ್ರ । ದುರಿತ ಹರಣ ಮಾಳ್ಪ ಗುರುವರೇಣ್ಯ ॥

ಕಾಲಭೇದರಾಗ ತಾಳ । ಮೂಲ ವೇದ ವಾದ್ಯ ವೈಭವ ।
ಶೀಲದಂತ್ರಿಕಾಲವಿನುತ । ಮೂಲರಾಮಲೋಲರೆನಿಪ ॥ ೨ ॥

ಕೃಷ್ಣಾತೀರದಲ್ಲಿ ಭಕ್ತ । ರಿಷ್ಟಪೂರ್ಣಮಾಡೆನಿಂತು ।
ಸೃಷ್ಟಿಮೂಲ ಧಾಮನರಸಿಂಹ । ವಿಟ್ಠಲನ್ನಮುಟ್ಟಿಭಜಪ ॥ ೩ ॥

(ಶ್ರೀನಿವಾಸ ಹುನಗುಂದ ಇವರಿಂದ)